ಗೌರಿ ಲಂಕೇಶರ

ಲಂಕೇಶ್

ಜುಲೈ 26, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಬೋಧನೆ



ರಾಣಿ ಪ್ರಮೋದಾದೇವಿ ಅಖಾಡಕ್ಕೆ


ಸಿದ್ಧುಗೆ ಸ್ಕೆಚ್!




ಅರಮನೆ



ಗುರುಮನೆ




ಗೌಡರ ಮನೆ



ಜನಾರ್ಧನ ರೆಡ್ಡಿ

'226 ಕೋಟಿ ಕೊಡ್ತಿನಿ, ಬನ್ರಿ'

ತ್ರದುರ್ಗ DCC ಬ್ಯಾಂಕ್ : ಸುಧಾಕರನಿಗೆ ಟಾಂಗ್



ಹರಿಜನರು ಮನೆ ಹೊಕ್ಕರೆ ಗೋಮೂತ್ರ ಹಾಕೆಂದ



ಉಪ್ಪಿಗಿಂತ ಹುಚ್ಚ ಬೇರೆ ಇಲ್ಲ!

ಟೈಮ್ಸ್ ಆಫ್ ಇಂಡಿಯಾ ಗೂಂಡಾಗಿರಿ ಶುರು

THE TIMES OF INDIA

ವಿಜಯ ಸಂಕೇಶ್ವರ ತಮ್ಮ ಪತ್ರಿಕೆಗಳನ್ನು ಟೈಮ್ಸ್ ಗ್ರೂಪಿನವರಿಗೆ ಮಾರಿ ಕರೆಂಟು ತಯಾರಿಸಲು ಎತ್ತಲೋ ಹೋಗಿದ್ದು ಹಳೇ ಸುದ್ದಿ. ಆದರೆ ಇತ್ತ ಪತ್ರಿಕೆ ಖರೀದಿಸಿರುವ ಟೈಮ್ಸ್‌ನವರು ಬೇರೆ ಪತ್ರಿಕೆಗಳ ಫ್ಯೂಸ್ ತೆಗೆಯಲು ಹೊರಟಿರುವುದೇ ಇವತ್ತಿನ ತಾಜಾ ಸುದ್ದಿ.

ಮುಂಬೈನ ಪ್ರಖ್ಯಾತ ಡೈಲಿ 'ಮಿಡ್ ಡೇ' ಈಗ ಬೆಂಗಳೂರಿನಿಂದಲೂ ಪ್ರಕಟಣೆ ಶುರು ಮಾಡಿದೆ. ಪತ್ರಿಕೆ ರೇಟು 2 ರೂಪಾಯಿ ಇದ್ದರೆ ಏಜೆಂಟರಿಗೆ ಕಮಿಷನ್ನೇ 1 ರೂ ನೀಡಲಾಗುತ್ತಿದೆ. ಸರ್ಕುಲೇಷನ್ ಜಾಸ್ತಿ ಮಾಡಲು 'ಮಿಡ್ ಡೇ' ಕಂಡುಕೊಂಡಿರುವ ಫಾರ್ಮುಲಾ ಇದು.

ಇದೇ ತಂತ್ರವನ್ನು ಈ ಹಿಂದೆ ಟೈಮ್ಸ್ ಆಫ್ ಇಂಡಿಯಾ, ವಿಜಯ ಕರ್ನಾಟಕ ಎಲ್ಲರೂ ಮಾಡಿದ್ದಾರೆ. ಆದರೆ 'ಮಿಡ್ ಡೇ' ಅದನ್ನೇ ಮಾಡಲು ಹೊರಟಾಗ ಟೈಮ್ಸ್‌ನ ಜನ ಬೆಂಗಳೂರಿನ ಏಜೆಂಟರು ಮತ್ತು ಅಂಗಡಿಗಳಿಗೆ ಹೋಗಿ 'ಮಿಡ್ ಡೇ ಮಾರಬೇಡಿ' ಎಂದು ಧಮಕಿ ಹಾಕಿದರೆ 'ಮಿಡ್ ಡೇ'ಗೆ ಸಿಟ್ಟು ಬರುವುದಿಲ್ಲವೆ? ಕಳೆದ ವಾರ ಬೆಳ್ಳಂಬೆಳಗ್ಗೆ 5 ಗಂಟೆಯಲ್ಲಿ 'ಮಿಡ್ ಡೇ' ಜನ ಸ್ಟಾಲ್ ಹತ್ತಿರ ಬೆದರಿಸಲು ಬಂದಿದ್ದ 'ಟೈಮ್ಸ್' ಖದೀಮರಿಗೆ ಗೂಸಾ ಕೊಟ್ಟಿದ್ದಾರೆ. ಬ್ರಾಡ್ ಡೇ ಲೈಟಲ್ಲಿ ಇಬ್ಬರೂ ಕಪಕಪಾಳಕ್ಕೆ ಹೊಡೆದುಕೊಂಡು ಪೊಲೀಸ್ ಕೇಸ್ ಮಾಡಿಕೊಂಡಿದ್ದಾರೆ.


MiD DAY
France 3-1 Spain
Brazil 3-0 Ghana
She shouldn't have done it

'ಮಿಡ್ ಡೇ'ನ ಸೆನ್ಸೇಷನಲ್ ನ್ಯೂಸ್!!

ಇರುವ ಇಂಗ್ಲಿಷ್ ಓದುಗರ ಸೀಮಿತ ಮಾರ್ಕೆಟ್ ಹರಿದುಕೊಳ್ಳಲು 'ಮಿಡ್ ಡೇ'-'ಟೈಮ್ಸ್' ಕಚ್ಚಾಡುತ್ತಿರುವಾಗಲೇ ಹೈದರಾಬಾದಿನಿಂದ ಇನ್ನೊಂದು ಸುದ್ದಿ ಹೊರಟಿದೆ. ಅಲ್ಲಿನ ಪ್ರಸಿದ್ಧ 'ಡೆಕ್ಕನ್ ಕ್ರಾನಿಕಲ್' ಪತ್ರಿಕೆ ಬೆಂಗಳೂರಿನ ವಿಠಲ ಮಲ್ಯ ರಸ್ತೆಯಲ್ಲಿ ಅತ್ಯಂತ ಹೆಚ್ಚಿನ ಸರ್ಕುಲೇಷನ್ ಇರುವ 'ಏಶಿಯನ್ ಏಜ್' ಪತ್ರಿಕೆ ಜೊತೆ ಕೂಡಿಕೆ ಮಾಡಿಕೊಂಡು ಇದೇ ಬೆಂಗಳೂರಿನಲ್ಲೇ ಇನ್ನೊಂದು ಇಂಗ್ಲಿಷ್ ಡೈಲಿ ಲಾಂಚ್ ಮಾಡುತ್ತಿದೆಯಂತೆ!

'ಏಶಿಯನ್ ಏಜ್' ಯು.ಬಿ. ದೊರೆ ವಿಜಯ ಮಲ್ಯನ ಪತ್ರಿಕೆ.

ಅಂದಹಾಗೆ 'ಮಿಡ್ ಡೇ'ಯ ಮೊದಲ ದಿನ ಮುಖಪುಟ ಸುದ್ದಿ ಏನಿತ್ತು ಗೊತ್ತೆ?

ನಂದನ್ ನಿಲೇಕಣಿ ಸುಪುತ್ರಿ ಜಾಹ್ನವಿ ಎಂಬ ಹದಿನೆಂಟರ ಹುಡುಗಿ ಡ್ರೈವಿಂಗ್ ಟೆಸ್ಟ್‌ನಲ್ಲಿ ಎರಡು ಬಾರಿ ಫೇಲಾಗಿ ಕೊನೆಗೆ ಯಾರೋ ದಲ್ಲಾಳಿಗಳಿಗೆ ಲಂಚ ಕೊಟ್ಟು ಲೈಸೆನ್ಸ್ ತಗೊಂಡಿದ್ದಾಳೆ ಎಂಬ ಸೆನ್ಸೇಷನಲ್ ನ್ಯೂಸ್ ಅದು!! ಮರುದಿನ ರೋಹಿಣಿ ನಿಲೇಕಣಿ ಮಗಳು ಜಾಹ್ನವಿ ಪರವಾಗಿ ಕ್ಷಮೆ ಯಾಚಿಸಿದ್ದೂ ಸೆನ್ಸೇಷನಲ್ ನ್ಯೂಸೇ!

ಕನ್ನಡ ಡೈಲಿಗಳಲ್ಲಿ ಸೈಕಲ್ ಕಳ್ಳನ ಬಂಧನದಂತಹ ಲೆವೆಲ್ಲಿನ ಈ ನ್ಯೂಸ್ 'ಮಿಡ್ ಡೇ'ಗೆ ಫ್ರಂಟ್ ಪೇಜ್ ಬ್ಯಾನರ್ ಹೆಡ್ ಲೈನ್‌ನಲ್ಲಿ 'ಹೆವಿ' ನ್ಯೂಸ್ ಆಗುತ್ತದೆಯೆಂದರೆ...

ಇಂಗ್ಲಿಷ್ ಪತ್ರಿಕೋದ್ಯಮ ಯಾವ 'ಲೆವೆಲ್ಲಿಗೆ' ಹೋಗಿದೆ, ಲೆಕ್ಕಹಾಕಿ!

ಯುದ್ಧ

'ಯುದ್ಧ ಮತ್ತು ಪ್ರೀತಿಯಲ್ಲಿ ಎಲ್ಲವೂ ಚೆಂದ' ಎಂಬ ಮಾತಿದೆ. ಇನ್ನೊಬ್ಬರನ್ನು ಆಕ್ರಮಿಸುವ ಕನಸ್ಸು ಎಲ್ಲರದ್ದೂ ಆದಾಗ, ಮಾನವರ ವಿಶ್ವಾತ್ಮಕ ಪ್ರಜ್ಞೆಗೆ ಗಡಿಗಳು ಉಂಟಾದಾಗ ಯುದ್ಧಗಳು ನಡೆಯುತ್ತವೆ. ತುಂಡು ನೆಲದ, ಸಂಪತ್ತಿನ, ಕೀರ್ತಿಯ ಮೇಲಿನ ಪ್ರೀತಿ ಇನ್ನೊಬ್ಬರ ರಕ್ತವನ್ನು ಬಯಸುತ್ತದೆಯಾದರೆ ಇದು ಮಾನವ ಬದುಕಿನ ದುರಂತವಲ್ಲವೇ....?

ಈ ಸಲದ ಸೂಕ್ತಿಗಳು 'ಯುದ್ಧ' ಕುರಿತವು. ಇವುಗಳನ್ನು ರಾಮಚಂದ್ರ ಎಸ್. ಕುಲಕರ್ಣಿ ಸಂಗ್ರಹಿಸಿ ಕಳಿಸಿದ್ದಾರೆ.

-ಮೂರ್ತಿ

ಮಲೆಯಾಳಿಗಳಿಗೆ ಚೆಲ್ಲಾಟ ಅಂಬಿಗದೇ ಪ್ರಾಣ ಸಂಕಟ



ಇದು ಕೆಲ ವರ್ಷಗಳ ಹಿಂದಿನ ಕತೆ.

'ಜೂಲಿ' ಲಕ್ಷ್ಮಿ-ಅಂಬರೀಷ್ ಜೊತೆಯಾಗಿ ನಟಿಸಿಕೊಂಡು ಒಳ್ಳೆ ಫ್ರೆಂಡ್ಸ್ ಆಗಿದ್ದಾಗ ನಡೆದಿದ್ದು ಈ ಪ್ರಕರಣ. ಲಕ್ಷ್ಮಿಯ ಪರಿಚಿತ ಕೇರಳ ನಿರ್ಮಾಪಕರು ಸಂಗೀತಗಾರನೊಬ್ಬನ ಬದುಕಿನ ಸಿನಿಮಾ ಮಾಡಲು ಹೀರೋಗಾಗಿ ಹುಡುಕುತ್ತಿದ್ದರು. ಈ ಸುದ್ದಿ ಕೇಳಿದ ಲಕ್ಷ್ಮಿ ಹಿಂದೆಮುಂದೆ ಯೋಚಿಸದೆ ಅಂಬರೀಷ್ ಹೆಸರು ರೆಕಮಂಡ್ ಮಾಡಿ ಚಾನ್ಸ್ ಕೊಡಿಸೇಬಿಟ್ಟಳು.

ಸರಿ, ಅಂಬಿ ಸಂಗೀತಗಾರನ ಪಾರ್ಟು ಮಾಡಲು ಕೇರಳಕ್ಕೆ ಹೋದರು. ಒಂದು ಸೀನ್‌ನಲ್ಲಿ ಅಂಬಿ ಸಂಗೀತ ಕಛೇರಿ ನಡೆಸುವಾಗ ರಾಗಾಲಾಪನೆ ತೆಗೆಯಬೇಕು.... ಯೂನಿಟ್‌ನವರು, ನಿರ್ದೇಶಕರು ರೆಕಾರ್ಡೆಡ್ ಮ್ಯೂಸಿಕ್ ಹಾಕುವ ಬದಲು ಅಂಬಿಗೆ "ನೀವೇ ಹಾಡಿ ಚಾರ್.... ನಾವೂ ಕೇಳ್ತೀವಿ" ಅಂತಾ ದುಂಬಾಲು ಬಿದ್ದರು. ಅಂಬಿ "ನನಗ್ ಬರಲ್ಲ" ಅಂದರೂ ಬಿಡದೆ ಕಾಡತೊಡಗಿದರು. ಅಂಬಿಗೂ ಸಂಗೀತಕ್ಕೂ ಸಂಬಂಧ ಇಲ್ಲ ಅಂತ ಕನ್ನಡಿಗರಿಗೇನೊ ಗೊತ್ತು, ಆದರೆ ಕೇರಳದವರಿಗೆ ಅದು ಹೇಗೆ ಗೊತ್ತಾಗಬೇಕು?

ಮತ್ತೆ ಮತ್ತೆ "ಹಾಡಿ ಚಾರ್" ಎಂಬ ರಾಗ ತೆಗೆದರು. ಅಂಬಿಗೋ ಪ್ರಾಣ ಸಂಕಟ, ಶೂಟಿಂಗ್ ನೋಡಲು ಸಾವಿರಾರು ಜನ ಸೇರಿದ್ದಾರೆ, ಇಡೀ ಯೂನಿಟ್ ಅಂಬಿಯ ಶಾಸ್ತ್ರೀಯ ಸಂಗೀತ ಕೇಳಲು ಕಾದಿದೆ....

ಮುಖ ಕಿವಿಚಿಕೊಂಡ ಅಂಬಿ "ನಿಮ್ ದಮ್ಮಯ್ಯ ನನಗ್ ಬರಲ್ಲ, ನನ್ ಬಿಟ್ಬಿಡಿ, ಕ್ಯಾಸೆಟ್ ಹಾಕ್ರಪ್ಪ" ಅಂತಾ ಗೋಗರೆದರಂತೆ.

ಅದಕ್ಕೆ ನಿರ್ದೇಶಕ "ಏನ್ ಚಾರ್, ಲಕ್ಷ್ಮಿ ಎಲ್ಲಾ ವಿಳವ್ವೆ, ಹಾಡಿ ಚಾರ್" ಅಂದನಂತೆ. ಗಾಬರಿಯಾದ ಅಂಬಿ "ಏನಂತ ಹೇಳಿದ್ಲು ಲಕ್ಷ್ಮಿ?" ಅಂತಾ ಕೇಳಿದಾಗ,


"ನೀವು ಪ್ರಸಿದ್ಧ ಸಂಗೀತಗಾರ ಪಿಟೀಲು ಚೌಡಯ್ಯನವರ ಮೊಮ್ಮಗ ಅಂತ."

"ಅದಕ್ಕೇನೀಗ?"

"ಇದೇನ್ ಸಾರ್ ಹೀಗಂತಿದ್ದೀರಿ? ನಿಮಗೂ ಸಂಗೀತ ಬರುತ್ತೇಂತಾನೆ ನಾವೀ ಪಾತ್ರಕ್ಕೆ ನಿಮ್ಮನ್ನು ಕರೆಸಿದ್ದು. ಪೇಪರ್‌ನಲ್ಲೂ ಹಾಗೇ ಬರೀತಿದ್ದಾರೆ" ಎಂದನಂತೆ ಆ ನಿರ್ದೇಶಕ.

ಅಂಬಿ ಅವತ್ತೆ ಆ ಸಿನಿಮಾ ಬಿಟ್ಟು ಪರಾರಿ!!

ಸಗಣಿಯಲ್ಲಿ ಹಲ್ಲುಜ್ಜುತ್ತೀರಾ?




ಗೋಮಾತೆಯ 'ರಕ್ಷಕ'ರಾದ ಚೆಡ್ಡಿಗಳು ಈಗ ಹೊಸವರಸೆಯೊಂದನ್ನು ಶುರುಮಾಡಿದ್ದಾರೆ. ಹಸುವಿನ ಸಗಣಿ ಮತ್ತು ಗಂಜಲದಿಂದ ಹಲವಾರು 'ಔಷಧಿ'ಗಳನ್ನು 'ಗೋರತ್ನಾ' ಬ್ರಾಂಡಿನಡಿ ಮಾರಾಟ ಮಾಡುತ್ತಿದ್ದಾರೆ. ಮಲಬದ್ಧತೆಗೆ ತಯಾರಿಸಲಾಗಿರುವ ಮಾತ್ರೆಯೊಂದು ತುಂಬಾ ಬೇಡಿಕೆ ಪಡೆದಿದ್ದರೆ, ಪೈಲ್ಸ್‌ನಿಂದ ಹಿಡಿದು ಮಹಿಳೆಯರ 'ಸಮಸ್ಯೆ'ಗಳನ್ನು ಬಗೆಹರಿಸುವ ಒಂದು ಮಾತ್ರೆ ಅಪಾರ ಜನಪ್ರಿಯತೆಯನ್ನು ಪಡೆದಿದೆಯಂತೆ. ಅಷ್ಟೇ ಅಲ್ಲ, ಬಾಟಲಿಯಲ್ಲಿ 'ಸಂಜೀವಿನಿ' ಎಂದು ಇವರು ಮಾರುವ ದ್ರವ ಕ್ಯಾನ್ಸರ್, ಮಾನಸಿಕ ಅಸಮತೋಲನ, ಅವ್ಯವಸ್ಥೆಗೊಂಡಿರುವ ಮುಟ್ಟು, ಎಲ್ಲವನ್ನೂ ನಿವಾರಿಸುತ್ತದೆಯಂತೆ.

ಇದಿಷ್ಟೇ ಅಲ್ಲದೆ ಅವರ ಬಳಿ 'ಗಂಜಲ, ಆಫ್ಟರ್ ಶೇವ್', ಚರ್ಮವನ್ನು ಬೆಳ್ಳಗಾಗಿಸುವ ಸಗಣಿ ಕ್ರೀಂ, ಬೋಡುತನವನ್ನು ತಡೆಯುವ 'ಪಂಚಜನ್ಯ' ಮಾತ್ರೆಗಳೂ ಇದ್ದು ಈಗ ಹೊಸ ಐಟಮ್ ಅನ್ನು ಸದ್ಯದಲ್ಲೇ ಮಾರಾಟ ಮಾಡಲಿದ್ದಾರಂತೆ.

ಅದು ಸಗಣಿಯಿಂದ ತಯಾರಿಸಲಾಗುವ ಟೂತ್‌ಪೇಸ್ಟ್! ಎಲ್ಲಾ ರೋಗಗಳಿಗೂ ನಾಲ್ಕೈದು ಔಷಧಿಗಳನ್ನು ಕೊಡುವ ಇವರ ಸಗಣಿ-ಗಂಜಲದ ಪ್ರಾಡೆಕ್ಟ್‌ಗಳು ಎಷ್ಟು ಪರಿಣಾಮಕಾರಿ ಎಂಬುದು ಸಂಶೋಧನೆಗೆ ಬಿಟ್ಟದ್ದು. ಆದರೆ ಅವರ ಸಗಣಿ ಟೂತ್‌ಪೇಸ್ಟ್‌ನ್ನು ಕ್ಲೋಸ್ ಅಪ್ 2 ಎಂದು ಜನ ಪರಿಗಣಿಸುವುದಿಲ್ಲ ಎಂಬುದಂತೂ ಗ್ಯಾರಂಟಿ!

ಲಿಂಗ ಉದ್ಭವಿಸಿದ್ದು



ಲಿಂಗ ಪಂಥ ಹೇಗೆ ಉದಯವಾಯ್ತು ಎಂಬುದು ಕುತೂಹಲಕರವಾಗಿದೆ. ಸುಮಾರು 100 ವರ್ಷಗಳ ಹಿಂದೆ ಗ್ರ್ಯಾಂಟ್ ಅಲೆನ್ ಎನ್ನುವ ಸಮಾಜವಿಜ್ಞಾನಿ ಬರೆದ "ದೇವರ ಕಲ್ಪನೆಯ ಉಗಮ" (The Evolution of the idea of God" ಎಂಬ ಪುಸ್ತಕದಲ್ಲಿ ಲಿಂಗವನ್ನು ಆರಾಧಿಸುವ ಪಂಥ ಹೇಗೆ ಉದಯವಾಯ್ತು ಎಂದು ವಿವರಿಸಿದ್ದಾನೆ. ಆತನ ಪ್ರಕಾರ, ಯಾವುದೋ ಆದಿವಾಸಿ ಸಮಸ್ಯೆಯ ಕಾರಣಕ್ಕೆ ತಮ್ಮ ಗುರುವಿನ ಆಜ್ಞೆಯಂತೆ ಪುರಾತನ ಹಿಬ್ರೂ ಆದಿವಾಸಿಗಳು ಅಕ್ಕಾದಿಯನ್ ಆದಿವಾಸಿಗಳ ನಾಯಕನೊಬ್ಬನನ್ನು ಕೊಂದು ಹಾಕಿದರು. ಕೊಲ್ಲಲ್ಪಟ್ಟ ಆದಿವಾಸಿ ನಾಯಕನ ಹೆಸರು ಜೆಹುವೆ (Jehuwe) ಅಥವಾ ಜೆಹುವಾ. ಈ ಕೊಲೆ ಮರೆಸಲು, ಆ ಆದಿವಾಸಿ ಗುರು ಒಂದು ಕಲ್ಲಿನ ಶಿಶ್ನ ಮಾಡಿಸಿ, "ಜೆಹುವಾನ ಸ್ಫೂರ್ತಿ ಆ ಲಿಂಗದಲ್ಲಿ ಸದಾ ನೆಲೆಸಿರುತ್ತದೆ ಮತ್ತು ಅದು ಫಲವತ್ತತೆಯ ಸಂಕೇತ" ಎಂದು ಸಾರಿದ. ಜಗತ್ತಿನ ಬಹುತೇಕ ಆದಿವಾಸಿಗಳು ಪವಿತ್ರ ಪ್ರಾಣಿಗಳನ್ನು ತಮ್ಮ ಪಶುದೇವತೆಗಳೆಂದು ಭಾವಿಸಿದ್ದರು. ಹಾಗೆಯೇ ಈ ಆದಿವಾಸಿಗಳೂ ಸರ್ಪ ಮತ್ತು ಗೂಳಿಗಳನ್ನು ಪಶುದೇವತೆಗಳೆಂದು ಭಾವಿಸಿ ಅವುಗಳನ್ನು ತಮ್ಮ ದೇವರು ಅಥವಾ ಸ್ಫೂರ್ತಿ ಜೆಹುವಾನ ಸಂಗಡ ಕಾಣುತ್ತಿದ್ದರು. ಇತಿಹಾಸದ ದಾಖಲೆ ಪ್ರಕಾರ ಈ ಹಿಬ್ರೂ ಆದಿವಾಸಿಗಳು ಜೀಸಸ್‌ಗೂ ಮೊದಲೇ ಕಾಶ್ಮೀರಕ್ಕೆ ಬಂದು ನೆಲೆಸಿದರು. ಹಿಬ್ರೂ ಆಗಿದ್ದ ಜೀಸಸ್‌ನೂ ಕಾಶ್ಮೀರಕ್ಕೆ ಬಂದಿರಬಹುದು ಎನ್ನಲಾಗಿದೆ. ಕಾಶ್ಮೀರದಿಂದ ಕರಾವಳಿ ಕರ್ನಾಟಕಕ್ಕೆ ವಲಸೆ ಬಂದ ಕೇ[illegible] ಬ್ರಾಹ್ಮಣ ವರ್ಗಗಳು ಶೈವರಾಗಿದ್ದರು. ಆದ್ದರಿಂದ ಆ ಪಂಥ ಶಿವಲಿಂಗ, ಗೂಳಿ, ಸರ್ಪಗಳನ್ನು ಶಿವನ ಸಂಕೇತಗಳಂತೆ ಕಾಣತೊಡಗಿದರು. ಲಿಂಗಾಯತರು (ವೀರಶೈವರು) ಪುರೋಹಿತಶಾಹಿಯ ಕಪಿಮುಷ್ಠಿಯಿಂದ ಹೊರಬರಲು ಯೋಚಿಸಿದರಾದರೂ, ಬೌದ್ಧರಿಗಾದ ಗತಿ ನೆನೆದು ಆಗಿನ ಪುರೋಹಿತರಿಗೆ ಹೆದರಿ ಸುಮ್ಮನಾದರು. ಅದಕ್ಕಾಗಿ ಅವರು ಹೊಂದಾಣಿಕೆ ಮಾಡಿಕೊಂಡು ಕಲ್ಲನ್ನೇ ಲಿಂಗದ ಸಂಕೇತ ಎಂದು ಒಪ್ಪಿಕೊಂಡು, ಪುರೋಹಿತರ ಕೆಂಗಣ್ಣಿಗೆ ಗುರಿಯಾಗುವುದರಿಂದ ತಪ್ಪಿಸಿಕೊಂಡರು. ಸಮಾನತೆಯ ಸಮಾಜಕ್ಕಾಗಿ ಬಸವಣ್ಣ ಬರದೇ ಇದ್ದಿದ್ದರೆ, ಅಂದು ಲಿಂಗ ಧರಿಸಿದವರೆಲ್ಲ ಇಂದು ದಲಿತರು, ಶೂದ್ರರಾಗಿರುತ್ತಿದ್ದರು.

ಬಂದ ಪತ್ರ

-ಜೆ.ಕೆ.ಎಸ್. ರೇವಣಕರ

(ಇ-ಮೇಲ್ ಮೂಲಕ)

ಯುದ್ಧ ಅನಾಗರಿಕರ ವ್ಯವಹಾರ -ನೆಪೋಲಿಯನ್

ರೈತರ ಆತ್ಮಹತ್ಯೆ ಹಾಗು ಅಮ್ಮನ ತೋಟ

ಕಂಡಹಾಗೆ



"ಏನನ್ನುಸುತ್ತೆ?" ಎಂದು ಕೇಳಿದ ನಾನು ಆತಂಕದಿಂದ ಅವನತ್ತ ನೋಡಿದೆ.

ಸುತ್ತಲೂ ಕಣ್ಣು ಹಾಯಿಸಿದ ಆತ "ಇರ್ತೀನಿ" ಅಂತಷ್ಟೇ ಹೇಳಿ ದನಗಳ ಕೊಟ್ಟಿಗೆಯತ್ತ ಕಾಲು ಹಾಕಿದ. ನಾನು ನಿಧಾನವಾಗಿ ನಿಟ್ಟುಸಿರು ಬಿಟ್ಟೆ. ಕೊನೆಗೂ, ನಾನು ಎರಡು ತಿಂಗಳಿಂದ ನಡೆಸಿದ ಹುಡುಕಾಟ, ಅನುಭವಿಸಿದ ಚಿಂತೆ ಅಂತ್ಯಗೊಂಡಿದ್ದವು. ಅಮ್ಮನ ನೆಲಮಂಗಲದ ಐದು ಎಕರೆ ತೋಟವನ್ನು ನೋಡಿಕೊಳ್ಳಲು ಕೊನೆಗೂ ಒಬ್ಬರು ಸಿಕ್ಕಿದ್ದರು.

ಈ ಹಿಂದೆ ಇದ್ದ ಕಲ್ಲಪ್ಪನ ಕಳ್ಳತನ, ವಂಚನೆ, ಸೊಂಭೇರಿತನದಿಂದ ರೋಸತ್ತು ಅವನಿಗೆ ಗೇಟ್‌ಪಾಸ್ ನೀಡಿದ್ದೆ. ಅವನ ಜಾಗಕ್ಕೆ ಬರಬೇಕಿದ್ದವರು ಇದ್ದಕ್ಕಿದ್ದಂತೆ ಅನಾರೋಗ್ಯದಿಂದ ತತ್ತರಿಸಿ ಕೈ ಕೊಟ್ಟಿದ್ದರು. ಅಲ್ಲಿಂದ ಪ್ರಾರಂಭವಾಯಿತು ತೋಟವನ್ನು ನೋಡಿಕೊಳ್ಳುವವರಿಗಾಗಿ ನನ್ನ ಹುಡುಕಾಟ. ಈ ಹುಡುಕಾಟದಲ್ಲಿ ನಾನು ಹಲವಾರು ಅಂಶಗಳನ್ನು ಅರಿತೆ. ಅದರಲ್ಲಿ ಪ್ರಮುಖವಾದದ್ದು ಇವತ್ತು ನಮ್ಮ ರಾಜ್ಯದ, ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಏನಾಗುತ್ತಿದೆ ಎಂಬುದು.



ಪಕ್ಕದ ಮಹಾರಾಷ್ಟ್ರ ರಾಜ್ಯದ ವಿಧರ್ಭಾ ಪ್ರದೇಶದಲ್ಲಿ ನೂರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಬಗ್ಗೆ, ಇವತ್ತು ಗ್ರಾಮೀಣ ಪ್ರದೇಶದಲ್ಲಿನ ಬಿಕ್ಕಟ್ಟಿನ ಬಗ್ಗೆ 'ದಿ ಹಿಂದೂ' ಪತ್ರಿಕೆಯಲ್ಲಿ ಪಿ. ಸಾಯಿನಾಥ್‌ರವರು ದಾಖಲಿಸುತ್ತಲೇ ಬಂದಿದ್ದಾರೆ. ಆದರೆ ಅವರ ಲೇಖನಗಳೆಲ್ಲವೂ ಅರಣ್ಯ ರೋದನದಂತಿದ್ದವು. ಕೊನೆಗೂ ಪ್ರಧಾನಿ ಮನಮೋಹನ್ ಸಿಂಗ್‌ರವರು ವಿಧರ್ಭಾ ಪ್ರದೇಶಕ್ಕೆ ಭೇಟಿ ನೀಡಿದರು. ಅಲ್ಲಿನ ರೈತರ ಆತ್ಮಹತ್ಯೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಒಂದು ಹೊಸ 'ಸಮಿತಿ'ಯನ್ನು(!) ಸ್ಥಾಪಿಸುವುದಾಗಿ ಘೋಷಿಸಿದರು. ಸಾಯಿನಾಥ್‌ರವರು ಹೇಳಿರುವಂತೆ ಈ ಸಮಿತಿಯಿಂದ ಸತ್ತಿರುವ, ಸಾವಿನ ಅಂಚಿನಲ್ಲಿರುವ ರೈತರಿಗೆ ಯಾವುದೇ ಪ್ರಯೋಜನವಿಲ್ಲ. ಅಂದಹಾಗೆ ಮನಮೋಹನ್ ಸಿಂಗ್‌ರವರ ಭೇಟಿಯ ಹತ್ತು ದಿನಗಳ ಮುನ್ನ ವಿಧರ್ಭಾ ಪ್ರದೇಶದಲ್ಲಿ 34 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಹಾಗೆಯೇ ಅವರು ಭೇಟಿ ಇತ್ತು ಹೋದ ಹತ್ತು ದಿನಗಳಲ್ಲಿ ಇನ್ನೂ 34 ರೈತರು ಆತ್ಮಹತ್ಯೆಗೆ ಶರಣಾದರು.

ವಿಧರ್ಭಾಕ್ಕೂ ನೆಲಮಂಗಲದ ತೋಟಕ್ಕೂ ಏನು ಸಂಬಂಧ ಅಂತ ನೀವು ಅಂದುಕೊಳ್ಳುತ್ತಿರಬಹುದು. ಸಂಬಂಧ ಇದೆ. ಏಕೆಂದರೆ ಮಹಾರಾಷ್ಟ್ರದ ವಿಧರ್ಭಾಕ್ಕೂ ನಮ್ಮ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ಪರಿಸ್ಥಿತಿಗೂ ಅಷ್ಟೇನು ವ್ಯತ್ಯಾಸ ಇಲ್ಲ.

ನನ್ನ ಹುಡುಕಾಟ, ಶಿವಮೊಗ್ಗೆ, ಶೃಂಗೇರಿ, ಕನಕಪುರ, ಉತ್ತರ ಕರ್ನಾಟಕ, ಪಕ್ಕದ ಆಂಧ್ರ ಮತ್ತು ತಮಿಳುನಾಡನ್ನೂ ಒಳಗೊಂಡಿತ್ತು. ಎಲ್ಲೆಡೆಯಿಂದ ಮೊದಲು ಕೇಳಿಬಂದದ್ದು: 'ನಮ್ಮೂರಿನಲ್ಲಿ ಶ್ರಮಜೀವಿಗಳು ಉಳಿದಿಲ್ಲ. ಇಲ್ಲಿ ಇರುವವರು ಮುದುಕರು ಮತ್ತು ಕುಡುಕರು ಮಾತ್ರ.' ಆನಂತರ ಕೇಳಿ ಬಂದಿದ್ದು ಏನೆಂದರೆ: ಊರೂರುಗಳೇ ಚಿಕೂನ್ ಗುನ್ಯಾಗೆ ಬಲಿಯಾಗಿರುವುದು. ಇದೆಲ್ಲ ನಿಜ ಕೂಡ ಆಗಿತ್ತು. ಇತ್ತೀಚೆಗೆ ನಮ್ಮ ಬಿ. ಚಂದ್ರೇಗೌಡರ ಊರಿಗೆ ಹೋಗಿದ್ದಾಗ ಅಲ್ಲಿ ಕಣ್ಣಿಗೆ ಕಂಡಿದ್ದು ಬರೀ ಮುದುಕರು. ಕೆಲವು ಯುವಕರು ಇದ್ದರಾದರೂ ಅವರೆಲ್ಲ ಇನ್ನೂ ಕೃಷಿಯಲ್ಲಿ ನಂಬಿಕೆ ಇಟ್ಟು ತಮ್ಮ ಹೊಲಗಳಲ್ಲೇ ಬೆವರು ಸುರಿಸಿಕೊಳ್ಳುತ್ತಿರುವವರು. ಅವರೇ ತಮ್ಮ ಕೃಷಿ ಕೆಲಸಗಳಿಗೆ ಜನರಿಲ್ಲದೇ ಪರದಾಡುವ ಸ್ಥಿತಿ ತಲುಪಿದ್ದಾರೆ. ಆದ್ದರಿಂದಲೇ ಇವತ್ತು ಹಳ್ಳಿಹಳ್ಳಿಗಳಲ್ಲಿ ಜೆಸಿಬಿ ಯಂತ್ರಗಳನ್ನು ಕಾಣಬಹುದು. ಈ ಜೆಸಿಬಿಗಳನ್ನು ಇವತ್ತು ಸಸಿಗಳನ್ನು ನೆಡಲು ಗುಂಡಿಗಳನ್ನು ತೋಡುವುದಕ್ಕೂ ಬಳಸಲಾಗುತ್ತಿದೆ. ಅಂದಹಾಗೆ ಇವತ್ತು ಭತ್ತದ ತೆನೆ ಬೇರ್ಪಡಿಸುವ ಯಂತ್ರಗಳೂ ರಾಜ್ಯದ ಎಲ್ಲಾ ಹಳ್ಳಿಗಳಲ್ಲೂ ಕಂಡುಬರುತ್ತವೆ. ಇವತ್ತು ಕೃಷಿ ಕೆಲಸಗಳಿಗೆ ಹೆಚ್ಚಾಗಿ ಯಂತ್ರಗಳನ್ನೇ ಉಪಯೋಗಿಸುತ್ತಿದ್ದರೆ, ಹಳ್ಳಿಗಳಲ್ಲಿನ ಜನ ಎಲ್ಲಿಗೆ ಹೋದರು?

ಉತ್ತರ ಸುಲಭ: ನಗರಗಳಿಗೆ. ಅವರುಗಳಲ್ಲಿ ಲಕ್ಷಾಂತರ ಜನ ಬರೋಡಾ, ಮುಂಬೈ ಮತ್ತು ಬೆಂಗಳೂರುಗಳಿಗೆ ವಲಸೆ ಬಂದಿದ್ದಾರೆ. ಹೋಗಲಿ ಬೆಂಗಳೂರಿನಂತಹ ನಗರಗಳಿಗೆ ಬಂದು ನೆಮ್ಮದಿಯ, ಸಂತೃಪ್ತಿಯ ಜೀವನವನ್ನಾದರೂ ನಡೆಸುತ್ತಿದ್ದಾರೆಯೇ?

ಬಹಳಷ್ಟು ಜನಕ್ಕೆ ಗೊತ್ತಿಲ್ಲದಿರುವುದೇನೆಂದರೆ ಇವತ್ತು ಬೆಂಗಳೂರಿನಲ್ಲಿ ಐಟಿ-ಬಿಟಿ ಕಟ್ಟಡಗಳನ್ನು, ಐಷಾರಾಮಿ ಫ್ಲಾಟ್‌ಗಳನ್ನು ನಿರ್ಮಿಸುತ್ತಿರುವ ರಹೇಜ, ಪ್ರೆಸ್ಟಿಜ್, ರಾಂಕ, ಮಂತ್ರಿ ಡೆವಲಪರ್ಸ್, ಇತ್ಯಾದಿಗಳು ಪರೋಕ್ಷವಾಗಿ ಈ ಹಳ್ಳಿಗರನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅವರೆಲ್ಲಾ ಕಾಂಟ್ರಾಕ್ಟರುಗಳ ಮೂಲಕ ಕೂಲಿಗಳನ್ನು ಪಡೆಯುತ್ತಾರೆ. ಈ ಕಾಂಟ್ರಾಕ್ಟರುಗಳು ಕೂಲಿಗಳಿಗೆಂದೇ ಬೆಂಗಳೂರಿನ ಹೊರವಲಯದಲ್ಲಿ 'ಲೇಬರ್ ಕ್ಯಾಂಪ್'ಗಳನ್ನು ಸ್ಥಾಪಿಸಿದ್ದಾರೆ. ಈ ಕ್ಯಾಂಪುಗಳಲ್ಲಿ ಆರಡಿ ಎತ್ತರ, ಆರಡಿ ಅಗಲ, ಹತ್ತು ಅಡಿ ಉದ್ದದ ತಗಡಿನ ಶೆಡ್‌ಗಳನ್ನು ಹಾಕಲಾಗಿರುತ್ತದೆ. ಆ ಶೆಡ್‌ಗಳಲ್ಲೇ ತಮ್ಮ ಸಂಸಾರಗಳನ್ನು ಹೂಡುವ ವಲಸೆ ಬಂದಿರುವ ರೈತರು, ಹಂದಿ ಗೂಡಿನಂತಿರುವ ಕ್ಯಾಂಪ್‌ಗಳಲ್ಲಿ ಬರ್ಬರ ಜೀವನ ನಡೆಸುತ್ತಿದ್ದಾರೆ. ಕಾರ್ಮಿಕರ ಹಣವನ್ನೇ ದೋಚಿ ಮಾಯವಾದ ಕಾಂಟ್ರಾಕ್ಟರುಗಳಿಗೆ, ಅಸುರಕ್ಷಿತ ಜಾಗಗಳಲ್ಲಿ ಕೆಲಸ ಮಾಡುತ್ತಾ ಸತ್ತ ರೈತರಿಗೆ ಲೆಕ್ಕವಿಲ್ಲ. ಹಾಗೆಯೇ ರಸ್ತೆಬದಿ ಗುಂಡಿಗಳನ್ನು ತೋಡುವಾಗ ವಿದ್ಯುತ್ ವೈರ್‌ಗಳಿಗೆ ತಾಕಿ ಜೀವತೆತ್ತ ಕಾರ್ಮಿಕರಿಗೂ ಕೂಡ. ಇವರೆಲ್ಲರ ಬದುಕು-ಸಾವುಗಳು 'ನಾಗರಿಕ'ರಾದ ನಮ್ಮ ಕಣ್ಣುಗಳಿಗೆ ಕಾಣಿಸದಂತೆ ಸಾಗುತ್ತಿವೆ, ಅಂತ್ಯಗೊಳ್ಳುತ್ತಿವೆ.

ಅಂದಹಾಗೆ, ಹೀಗೆ ಕೊಳಗೇರಿಗಿಂತಲೂ ಭೀಕರವಾಗಿರುವ ಲೇಬರ್ ಕ್ಯಾಂಪಿನಲ್ಲಿ ವಾಸಿಸುವುದಕ್ಕಿಂತ ತೋಟದಲ್ಲಿ ಕೆಲಸ ಮಾಡುತ್ತಾ ಸಿಗುವ ಪುಟ್ಟಮನೆಯಲ್ಲಿ ಬದುಕಲು ಅವರ್‍ಯಾರಿಗೂ ಇಷ್ಟವಿಲ್ಲ. ಏಕೆಂದರೆ ಅವರೆಲ್ಲಾ ಆಗಲೇ ಮೈತುಂಬ ಸಾಲ ಮಾಡಿಕೊಂಡು, ಸಾಧ್ಯವಾದಷ್ಟು ಬೇಗ ಕೈಲಾದಷ್ಟು ದುಡಿಯ ಬಯಸುವವರು. ಹಾಗೆ ದುಡಿಯಬೇಕಾದರೆ ಕನಿಷ್ಠ ಸೌಕರ್ಯಗಳೂ ಇಲ್ಲದ, ಜೀವ ಸುರಕ್ಷತೆಯೂ ಇಲ್ಲದ ಕ್ಯಾಂಪುಗಳಲ್ಲಿ, ಕೆಲಸಗಳಲ್ಲಿ ಇರಲು ಬಯಸುತ್ತಾರೆಯೇ ಹೊರತು ಬೇರಡೆಯಲ್ಲ.

ಇವತ್ತು ನಮ್ಮ ರಾಜಕಾರಣಿಗಳ ಆರ್ಥಿಕ ನೀತಿ ಹಳ್ಳಿಗಳಿಂದ ಜನರನ್ನು ನಿಖಾಲಿ ಮಾಡುತ್ತಿದ್ದರೆ ಅದನ್ನು ಎದುರಿಸುತ್ತಾ ಹಳ್ಳಿಗಳಲ್ಲೇ ಉಳಿದಿರುವವರ ಜೀವನ ಆರಾಮಾಗೇನಿಲ್ಲ. ಉದಾಹರಣೆಗೆ ಬೆಂಗಳೂರಿನ ಹತ್ತಿರದ ಹಳ್ಳಿಗಳ ಭೂಮಿ ಬೆಲೆ ಏರುತ್ತಿರುವಾಗ, ತಂಗಿಯ ಮದುವೆಗೊ, ತಂದೆಯ ಆರೋಗ್ಯಕ್ಕೊ, ತಮ್ಮ ಒಂದು-ಎರಡು ಎಕರೆ ಜಮೀನನ್ನು ಮಾರಿ ದಿನಗೂಲಿ ಮಾಡುತ್ತಿರುವವರು ಅದೆಷ್ಟೋ ಜನ. ಹೋಗಲಿ, ಅವರ ಭೂಮಿಯನ್ನು ಕೊಂಡವರಾದರೂ ಕೃಷಿಯಲ್ಲಿ ತೊಡಗಿದ್ದಾರೆಯೇ? ಇಲ್ಲ, ಅವರದ್ದು ಒಂದೋ ಫಾರ್ಮ್ ಹೌಸ್ ಎಂಬ ಪ್ರತಿಷ್ಠೆಯ ಯೋಜನೆ, ಅಥವಾ ಸೈಟುಗಳನ್ನಾಗಿಸಿ ಮಾರುವ ರಿಯಲ್ ಎಸ್ಟೇಟ್ ದಂಧೆ!

ಇದೆಲ್ಲದರೊಂದಿಗೆ ಇವತ್ತು ಕಾರ್ಪೊರೇಟ್ ಫಾರ್ಮಿಂಗ್ ಶುರುವಾಗಿದೆ. ಬೆಂಗಳೂರಿನ ಹೊರವಲಯದ ಯಾವುದೇ ರಸ್ತೆಯಲ್ಲಿ ಸಾಗಿ ನೋಡಿ. ಮುಂಗಾರಿನ ದಿನಗಳಲ್ಲಿ ತಮ್ಮ ಹೊಲಗಳನ್ನು ಉಳುತ್ತಿದ್ದ ರೈತರನ್ನು ಈಗ ಕಾಣುವುದೇ ಅಪರೂಪವಾಗಿದೆ. ಬದಲಾಗಿ, ಕಲ್ಲಿನ ಕಾಂಪೌಂಡ್‌ಗಳನ್ನು ಹಾಕಿಕೊಂಡು ನೂರಾರು ಎಕರೆಗಳಲ್ಲಿ **GM** ಕೃಷಿಗಳನ್ನು ಬೆಳೆಯುತ್ತಿರುವ ಎಂಎನ್‌ಸಿ ಕಂಪನಿಗಳ ಕಾರ್ಪೊರೇಟ್ ತೋಟಗಳನ್ನು ಕಾಣಬಹುದು.

ಇಂತಹ ಪರಿಸ್ಥಿತಿಯಲ್ಲಿ ಅಮ್ಮನ ಪುಟ್ಟ ತೋಟವನ್ನು ನೋಡಿಕೊಳ್ಳಲು, ಅಲ್ಲಿನ ತೆಂಗು, ಅಡಿಕೆ, ಬಾಳೆಯ ಜವಾಬ್ದಾರಿಯನ್ನು ಹೊರಲು ಜನ ಬೇಕೆಂದರೆ ಅವರು ಸಿಗುವುದಾದರೂ ಎಲ್ಲಿಂದ?


ಈಗೇನೋ, ರವಿ ಮತ್ತಾತನ ಹೆಂಡತಿ ಬಂದಿದ್ದಾರೆ, ತೋಟವನ್ನು ಉತ್ತು, ಕಳೆ ಕಿತ್ತು, ಹಸನು ಮಾಡುತ್ತಿದ್ದಾರೆ. ಆದರೆ ಇದೆಷ್ಟು ದಿನ? ವಿಪರ್ಯಾಸವೆಂದರೆ ಒಂದೆಡೆ ನಮ್ಮ ರೈತರ ಬದುಕು ನರಕ ಸದೃಶ್ಯವಾಗುತ್ತಿರುವಾಗಲೇ ಇನ್ನೊಂದೆಡೆ ಐಟಿ-ಬಿಟಿ ವಲಯಗಳಲ್ಲಿ ಫಾರ್ಮ್ ಟೂರಿಸಂ ಎಂಬುದು ಜನಪ್ರಿಯವಾಗುತ್ತಿದೆಯಂತೆ. ಪ್ರತಿ ದಿನ ಹವಾನಿಯಂತ್ರಿತ ಕೊಠಡಿಗಳಲ್ಲಿ ಕೂತು ಕೆಲಸ ಮಾಡುವವರಿಗೆ ಗ್ರಾಮೀಣ ಪ್ರದೇಶಗಳ ತೋಟಗಳಿಗೆ ಭೇಟಿ ನೀಡುವುದು ಈಗ ಇಷ್ಟವಾಗುತ್ತಿದೆಯಂತೆ. ಇದರಿಂದ ಮುಂದೊಂದು ದಿನ ಹೈಟೆಕ್ ಕೂಲಿಗಳು ಸಿಗುವಂತಾಗುತ್ತಾ?!

ತಮಾಷೆ ಬೇಡ. ನಮ್ಮ ಹಳ್ಳಿಗಳಲ್ಲಿನ ಜನ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ, ಹಳ್ಳಿಗಳೇ ನಶಿಸುತ್ತಿವೆ. ಇದು ಹೀಗೆ ಮುಂದುವರಿದರೆ ಭಾರತ ಹಳ್ಳಿಗಳ ದೇಶವಾಗಿರುವುದಿಲ್ಲ; ಬದಲಾಗಿ ಕೊಳಗೇರಿಗಳ ದೇಶವಾಗಿ, ಎಲ್ಲೆಡೆ ಅರಾಜಕತೆ, ಅಸಮಾನತೆ ತಾಂಡವವಾಡುತ್ತಿರುತ್ತವೆ.


ಆಗಲೂ ನಮ್ಮ ನಾಯಕರು ಮತ್ತೊಂದು 'ಸಮಿತಿ'ಯನ್ನು, ಇನ್ನೊಂದು 'ಪ್ಯಾಕೇಜ'ನ್ನು ಘೋಷಿಸಬಹುದಷ್ಟೇ...

-ಗೌರಿ ಲಂಕೇಶ್

ಪುರುಷರ ವಿಕಾಸ



ಮಹಿಳೆಯರ ವಿಕಾಸ



No Comments



ಕೃಪೆ : 'ಟೈಮ್ಸ್ ಆಫ್ ಇಂಡಿಯಾ'

ಅರಮನೆ-ಗುರುಮನೆ-ಗೌಡರ ಮನೆ

ಸಿದ್ದುಗೆ ಸ್ಕೆಚ್

ಇನ್ನೊಂದು ಮೂರ್ನಾಲ್ಕು ತಿಂಗಳೊಳಗೆ ನಡೆಯುವ ಚಾಮುಂಡೇಶ್ವರಿ ವಿಧಾನಸಭಾ ಉಪಚುನಾವಣೆಯಲ್ಲಿ ಮರು ಆಯ್ಕೆ ಬಯಸಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲಿರುವ ಸಿದ್ಧರಾಮಯ್ಯನವರ ವಿರುದ್ಧ ಮೈಸೂರು ರಾಜವಂಶದ ಒಡೆಯರ್ ಪತ್ನಿ ಪ್ರಮೋದಾ ದೇವಿಯವರನ್ನು ಅಖಾಡಕ್ಕಿಳಿಸಿ ಸಿದ್ಧರಾಮಯ್ಯನವರನ್ನು ರಾಜಕೀಯವಾಗಿ ಮುಗಿಸಿಬಿಡುವ ಸ್ಕೆಚ್ ಇದು.


ಶ್ರೀಕಂಠದತ್ತ

ಸಿದ್ಧರಾಮಯ್ಯನವರ ರಾಜೀನಾಮೆ ಇನ್ನೂ ಅಂಗೀಕಾರವಾಗಿಲ್ಲದಿದ್ದರೂ.... ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಮರು ಚುನಾವಣೆ ಯಾವತ್ತು ಎಂಬುದು ನಿಗಧಿ ಆಗದಿದ್ದರೂ..... ಎಲ್ಲರೂ ತಣ್ಣಗಿದ್ದರೂ ದೇವೇಗೌಡರದ್ದು ಕುಳಿತ್ತಿದ್ದಾರೆ. ಭವಿಷ್ಯದ ಕಾಂಗ್ರೆಸ್ ನಾಯಕ ಸಿದ್ಧರಾಮಯ್ಯನನ್ನು ಫಿನಿಷ್ ಮಾಡಲು ಏನೇನು ಮಾಡಬೇಕೆಂದು ಊರಿಗೆ ಮೊದಲೇ ಸ್ಕೆಚ್ ಹಾಕುತ್ತಿರುವ ಗೌಡರನ್ನು ನೋಡಿ ಕೋ-ಜಾ ಪರಿವಾರದವರು ಬೆರಗಾಗಿದ್ದಾರೆ.

ದೇವೇಗೌಡರ ಸ್ವಭಾವವೇ ಹೀಗೆ....!

ಸಂತೆ ಸೇರುವ ಮೊದಲೇ ಗಂಟುಕಳ್ಳರು ಸೇರುವಂತೆ ಈಗ ದೇವೇಗೌಡರ ಸುತ್ತಾ ಪಿತೂರಿಗಾರರ ಹಿಂಡೇ ಆಣಿನೆರೆಯುತ್ತಿದೆ.

'ಶತ್ರು ಶೇಷ ಉಳಿಸಬಾರದು' ಎಂಬ ರಾಜಕೀಯ ನೀತಿಯನ್ನು ಚೆನ್ನಾಗಿ ಬಲ್ಲ ದೇವೇಗೌಡರು ಅಳೆದು ಸುರಿದು, ಜಾತಿ ಲೆಕ್ಕಾಚಾರ ಹಾಕುತ್ತಾ, ವಾಸ್ತು ಗ್ರಹಗತಿ, ಹಲ್ಲಿಶಕುನದವರನ್ನೂ ಬಿಡದೆ ಎನ್‌ಕ್ವಯರಿ ಮಾಡಿ ಕೊನೆಗೊಂದು ನಿರ್ಧಾರ ಮಾಡಿಬಿಟ್ಟಿದ್ದಾರೆ. ಇನ್ನೊಂದು ಮೂರ್ನಾಲ್ಕು ತಿಂಗಳೊಳಗೆ ನಡೆಯುವ ಚಾಮುಂಡೇಶ್ವರಿ ವಿಧಾನಸಭಾ ಉಪಚುನಾವಣೆಯಲ್ಲಿ ಮರು ಆಯ್ಕೆ ಬಯಸಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲಿರುವ ಸಿದ್ಧರಾಮಯ್ಯನವರ ವಿರುದ್ಧ ಮೈಸೂರು ರಾಜವಂಶದ ಒಡೆಯರ್ ಪತ್ನಿ ಪ್ರಮೋದಾ ದೇವಿಯವರನ್ನು ಅಖಾಡಕ್ಕಿಳಿಸಿ ಸಿದ್ಧರಾಮಯ್ಯನವರನ್ನು ರಾಜಕೀಯವಾಗಿ ಮುಗಿಸಿಬಿಡುವ ಸ್ಕೆಚ್ ಇದು.

ಈ ಸುದ್ದಿ ಈಗಾಗಲೇ ಪದ್ಮನಾಭನಗರದಿಂದ ಹೊರಟು ರಿಂಗ್ ರೋಡನ್ನು ಹಾದು, ನೈಸ್ ರಸ್ತೆಯಗುಂಟ ಸಾಗಿ ಮೈಸೂರು ತಲುಪಿದೆ. ಲೋಕಲ್ ಪುಢಾರಿಗಳಿಗೆ, ಪಾರ್ಟಿ ವರ್ಕರುಗಳಿಗೆ, ಜಾತಿ ಲೀಡರ್‌ಗಳಿಗೆ ಶಾಕ್‌ನಂತ ಸುದ್ದಿ ಇದು.

ಈ ವಾರದೊಳಗೆ ಸಿದ್ಧರಾಮಯ್ಯನವರ ರಾಜೀನಾಮೆ ಅಂಗೀಕಾರವಾಗಲಿದೆ. ಅವರು ದೆಹಲಿಗೂ ಹೋಗಿ ಬರುತ್ತಾರೆ, ಅಲ್ಲಿ ಸ್ವತಃ ಸೋನಿಯಾಗಾಂಧಿ ಖುದ್ದು ಸಿದ್ಧರಾಮಯ್ಯನವರನ್ನು ಕಾಂಗ್ರೆಸ್‌ಗೆ ಬರಮಾಡಿಕೊಳ್ಳುತ್ತಾರೆ.

ಇದಿಷ್ಟು ಎಲ್ಲರಿಗೂ ಗೊತ್ತಿರುವ ಕಾಂಗ್ರೆಸ್ ಸಂಪ್ರದಾಯಗಳು. ಆದರೆ ಕಾಂಗ್ರೆಸ್ ಸೇರುವ ಎಲ್ಲರಿಗೂ ಇಂತಾ ಸ್ವಾಗತ, ಮರ್ಯಾದೆ ಸಿಗುವುದಿಲ್ಲ, ಅದಕ್ಕೂ ಒಂದಿಷ್ಟು ತೂಕ, ತಾಕತ್ತು ಬೇಕಾಗುತ್ತದೆ. ನಮ್ಮ ಕರ್ನಾಟಕದಲ್ಲೇ 'ನಾನೇ ದೊಡ್ಡ ಕಾಂಗ್ರೆಸ್ ಲೀಡರ್' ಎಂದು ಹೇಳಿಕೊಳ್ಳುವ ಲೀಡರ್‌ಗಳೇ ಸೋನಿಯಾ ಮುಖ ಸ್ಪಷ್ಟ ನೋಡಲು ಸಾಧ್ಯವಾಗದೆ ಬರೀ ಪೇಪರ್‌ಗಳಲ್ಲಿ ಫೋಟೋ ನೋಡಿಕೊಂಡು ತಮ್ಮಿಡೀ ಜೀವಮಾನ ಕಳೆದಿರುವ ಉದಾಹರಣೆಗಳಿರುವಾಗ ಈಗ ಸಿದ್ಧರಾಮಯ್ಯ ಮೂರನೇ ಬಾರಿ ಸೋನಿಯಾರನ್ನು ಭೇಟಿಯಾಗಲಿದ್ದಾರೆ. ಇದು ಅವರ ಸೇರ್ಪಡೆಯನ್ನು ಕಾಂಗ್ರೆಸ್ ಎಷ್ಟು ಗಂಭೀರವಾಗಿ ಪರಿಗಣಿಸಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಆದರೆ ಸಿದ್ಧರಾಮಯ್ಯ ಜೆಡಿಎಸ್ ಶಾಸಕತ್ವ ತ್ಯಜಿಸಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಮತ್ತೆ ಗೆದ್ದು ಬರಬೇಕೆಂಬ ಷರತ್ತನ್ನು ಕಾಂಗ್ರೆಸ್ ಹಾಕಿದೆ. ಸಿದ್ಧರಾಮಯ್ಯ ಇದಕ್ಕೆ ಒಪ್ಪಿ ಸವಾಲು ತೆಗೆದುಕೊಂಡಿದ್ದಾರೆ. ನಾಳೆ ಇದರಲ್ಲಿ ಸಿದ್ದು ಗೆದ್ದರೆ ಅದು ಅವರ ರಾಜಕೀಯ ಜೀವನದ ಮಹತ್ವದ ಎರಡನೇ ಇನ್ನಿಂಗ್ಸ್ ಆಗುತ್ತದೆ, ಅಷ್ಟೇ ಅಲ್ಲ ರಾಜ್ಯ ರಾಜಕಾರಣದ ಸಮೀಕರಣವೂ ಬದಲಾಗಲಿದೆ.

ದೇವೇಗೌಡರು ಸಿದ್ದು ಬಗ್ಗೆ ಭಯಪಡುತ್ತಿರುವುದು ಈ ಕಾರಣಕ್ಕೇನೆ. ಹಾಗಾಗಿ ಗೌಡರೀಗ ಸಿದ್ಧರಾಮಯ್ಯ ಎಂಬ ಶತ್ರುಶೇಷವನ್ನು ಬುಡ ಸಮೇತ ಕಿತ್ತು ನಾಶಮಾಡಲು ಒಂದು ಪ್ಲಾನ್ ರೆಡಿ ಮಾಡಿಕೊಂಡಿದ್ದಾರೆ.

ಅದೇ ಒಡೆಯರ್ ಕುಟುಂಬದ ರಾಣಿ ಪ್ರಮೋದಾದೇವಿಯ ರಾಜಕೀಯ ಪ್ರವೇಶ.

ಸುತ್ತೂರು ಸ್ವಾಮಿ-ಒಡೆಯರ್ ಲೆಕ್ಕಾಚಾರ


ಮೈಸೂರು ನಗರದ ಕೆಲಭಾಗವೂ ಸೇರಿದಂತೆ ಹೊರವಲಯದ ಪ್ರದೇಶದಲ್ಲಿ ಹರಡಿಕೊಂಡಿರುವ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಸಕಲೆಂಟು ಜಾತಿಗಳ ಮತದಾರರೂ ಇದ್ದಾರೆ. ಮುಖ್ಯವಾಗಿ ಕುರುಬರು, ಲಿಂಗಾಯತರು, ದಲಿತರು, ಒಕ್ಕಲಿಗರು ಹಾಗೂ ನಾಯಕ ಜಾತಿಗಳಲ್ಲಿ ಜಾತಿಪ್ರಜ್ಞೆ ಬಲವಾಗಿ ಬೇರೂರಿದೆ.

2004 ರ ಅಸೆಂಬ್ಲಿ ಚುನಾವಣೆಯಲ್ಲಿ ಸಿದ್ಧರಾಮಯ್ಯ ಕಾಂಗ್ರೆಸ್‌ನ ರೇವಣಸಿದ್ಧಯ್ಯನವರನ್ನು ಭಾರಿ ಅಂತರದಿಂದ ಸೋಲಿಸಿದ ನಂತರ ಕ್ಷೇತ್ರದ ರಾಜಕೀಯ ನಕ್ಷೆ ಬದಲಾಗಿ ಹೋಗಿದೆ.

ಕಾಂಗ್ರೆಸ್‌ನಲ್ಲಿದ್ದ ಎಂ.ಪಿ. ರಾಜಶೇಖರಮೂರ್ತಿ ಪಾರ್ಟಿ ತ್ಯಜಿಸಿ ಜೆಡಿಎಸ್ ಸೇರಿ ರಾಜ್ಯಸಭೆಗೆ ಹೋಗಿದ್ದಾರೆ. ಅದೇ ಕಾಂಗ್ರೆಸ್‌ನಲ್ಲಿದ್ದು 1999 ರ ಎಲೆಕ್ಷನ್‌ನಲ್ಲಿ ಸಿದ್ಧರಾಮಯ್ಯನವರನ್ನೇ ಸೋಲಿಸಿದ್ದ ಗುರುಸ್ವಾಮಿ ಈಗ ಜೆಡಿಎಸ್‌ನಲ್ಲಿದ್ದಾರೆ. ಗುರುಸ್ವಾಮಿಯನ್ನು

ಬಿಳಿದಾಳೆ ಈಶ

ಕ್ಷೇತ್ರದ ಈ ಪ್ರಮುಖರ ಪೈಕಿ ದೇವೇಗೌಡರ ಕಣ್ಣು ಮೊದಲು ಇದ್ದಿದ್ದು ಮಾಜಿ ಶಾಸಕ ಗುರುಸ್ವಾಮಿ ಮೇಲೆ. ಆದರೆ ಇವತ್ತು ಸಿದ್ಧರಾಮಯ್ಯನವರಿಗಿರುವ ಜನಪ್ರಿಯತೆ, ಬೆಂಬಲಗಳನ್ನೆಲ್ಲಾ ಗಮನಿಸಿದ ಗೌಡರು ಗುರುಸ್ವಾಮಿ ಸಿದ್ದುಗೆ ಸವಾಲೇ ಅಲ್ಲ ಎಂದು ಅರ್ಥಮಾಡಿಕೊಂಡರು. ಒಬ್ಬ ತಾಕತ್ತಿರುವ ಕ್ಯಾಂಡಿಡೇಟ್ ಬೇಕೆಂದು ಲೆಕ್ಕಾ ಹಾಕಿ ಕೊನೆಗೆ ಸುತ್ತೂರು ಸ್ವಾಮಿ ಸೋದರ ಮಂಜುಬುದ್ಧಿ ಅಥವಾ ಷಡಕ್ಷರಸ್ವಾಮಿ ನಿಂತರೆ ಹೇಗೆ ಎಂಬ ಲೆಕ್ಕಾಚಾರವೂ ಕೆಲದಿನ ನಡೆಯಿತು. ಈಗಿನ ಕೋ-ಜಾ ಸರ್ಕಾರ ಹುಟ್ಟಿದಾಗ ದೇವೇಗೌಡರು ಅದನ್ನು ವಿರೋಧಿಸುವವರಂತೆ ಕೆಲವು ದಿನ ನಾಟಕ ಮಾಡಿದ್ದರಲ್ಲವೆ? ಆಗ ಇದೇ ಸುತ್ತೂರು ಸ್ವಾಮಿಗಳು



ಮಧ್ಯೆ ಪ್ರವೇಶಿಸಿ "ಈ ಸರ್ಕಾರ ಒಪ್ಪಿಕೊಳ್ಳಿ" ಎಂಬ ಗುರುಬೋಧನೆ ನೀಡಿದ್ದರು. ಜೆ.ಎಚ್. ಪಟೇಲ್ ನಂತರ ಲಿಂಗಾಯತನೊಬ್ಬ ಕನಿಷ್ಠ ಉಪಮುಖ್ಯಮಂತ್ರಿಯಾದನಲ್ಲ ಎಂಬ ನೀತಿ ಅವರದಾಗಿತ್ತು. ಇನ್ನೂ ಮೇಲಾಗಿ ಕೋ-ಜಾ ಸರ್ಕಾರ ರಚನೆಯಾಗಿದ್ದೇ ಲಿಂಗಾಯತ-ಒಕ್ಕಲಿಗ ಮೇಲ್ಜಾತಿ ಶಾಸಕರ ಮಿಲಾಕತ್‌ನಿಂದಾಗಿ ತಾನೆ? ಇದು ಲಿಂಗಾಯತ ಮಠಾಧೀಶರು ಸರ್ಕಾರದ ವ್ಯವಹಾರದಲ್ಲಿ ಮೂಗು ತೂರಿಸಲು ಅವಕಾಶ ನೀಡಿದೆ. ಆ ಒಡನಾಟದಿಂದಲೇ ಗೌಡರು ಸಿದ್ಧರಾಮಯ್ಯನವರ ರಾಜಕೀಯಕ್ಕೆ ಇತಿಶ್ರೀ ಹಾಡಲು ಸುತ್ತೂರು ಸ್ವಾಮಿಯ ಸೋದರರತ್ತ ನೋಡಿದ್ದರು. ಆದರೆ ಯಾವ ಪಾರ್ಟಿಯೊಂದಿಗೂ ನಿಷ್ಠುರ ಕಟ್ಟಿಕೊಳ್ಳಲು ಸುತ್ತೂರು ಸ್ವಾಮಿ ಬಯಸುವುದಿಲ್ಲವಾದ ಕಾರಣ ಈ ಪ್ರಸ್ತಾವನೆ ಚಿಗುರೊಡೆಯಲಿಲ್ಲ.


ಪ್ರಮೋದಾದೇವಿ

ಕೊನೆಗೆ ಈ ಸಿದ್ಧರಾಮಯ್ಯನೆಂಬ ಹುಲಿಯನ್ನು ಹೊಡೆಯುವ ಬೇಟೆಗಾರ ಯಾರೆಂದು ಹುಡುಕಿ ತಡಕಿ ಈಗ ರಾಣಿ ಪ್ರಮೋದಾದೇವಿಯನ್ನು ಕರೆತಂದು ಕೋವಿ ಕೈಗೆ ಕೊಡಲು ದೇವೇಗೌಡರು ನಿರ್ಧರಿಸಿದ್ದಾರೆ. ಕೋವಿ ಆಕೆಯ ಕೈಲಿದ್ದರೂ ಟ್ರಿಗರ್ ಎಳೆಯುವುದು ತಾವೇ ತಾನೆ ಎಂಬ ಭಂಡಧೈರ್ಯ ಗೌಡರದ್ದು.

ಒಡೆಯರ್-ಗೌಡ ಗೆಳೆತನ

ಮೈಸೂರಿನ ಮಾಜಿ ಸಂಸದ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಈಗ ಕಾಂಗ್ರೆಸ್‌ನಲ್ಲಿದ್ದಾರೆ. ದೇವೇಗೌಡರಿಗೋಸ್ಕರ ಒಡೆಯರ್ ಕಾಂಗ್ರೆಸ್ ತ್ಯಜಿಸಿ ಸಿದ್ಧರಾಮಯ್ಯನವರ ವಿರುದ್ಧ ಸೆಣಸಾಡಲು ಕೋ-ಜಾಗಳ ಜೊತೆ ಸೇರುತ್ತಾರಾ ಎಂಬ ಅನುಮಾನಗಳಂತೂ ಇದ್ದೇ ಇವೆ.

ಆದರೆ ಯಾಕಾಗಬಾರದು ಎಂಬುದಕ್ಕೂ ಕೆಲ ಆಧಾರಗಳಿವೆ.

ಒಡೆಯರ್ ಕುಟುಂಬಕ್ಕೆ ಸೇರಿರುವ 455 ಎಕರೆ ಬೆಂಗಳೂರು ಅರಮನೆ ಜಾಗದ ವಿಚಾರವೂ ಇದರಲ್ಲಿ ಪ್ರಮುಖವಾಗಿದೆ.


ಕೋ-ಜಾ ಸರ್ಕಾರ ಅಸ್ತಿತ್ವಕ್ಕೆ ಬಂದ ಹೊಸದರಲ್ಲೇ 2006 ರ ಮಾರ್ಚ್ 24 ರಂದು ಒಡೆಯರ್ ಕುಟುಂಬದ ಐವರು ಹೆಣ್ಣುಮಕ್ಕಳು ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ಭೇಟಿ ಮಾಡಿ 'ಅರಮನೆ ಆಸ್ತಿ ವಿಚಾರ' ಬಗೆಹರಿಸಿಕೊಡುವಂತೆ' ಮನವಿ ಮಾಡಿದ್ದು ವ್ಯಾಪಕ ಪ್ರಚಾರ ಪಡೆದಿತ್ತು. 1996 ರಲ್ಲಿ ಆಗಿನ ಸರ್ಕಾರ 'ಬೆಂಗಳೂರು ಅರಮನೆ ಆಸ್ತಿ ಸ್ವಾಧೀನ' ಕುರಿತಂತೆ ಒಂದು ಮಸೂದೆ ತಂದಿತ್ತು. ಅದರ ಪ್ರಕಾರ ಪರಿಹಾರವಾಗಿ ರಾಜ್ಯ ಸರಕಾರ ಹನ್ನೊಂದು ಕೋಟಿ ರೂಪಾಯಿಗಳನ್ನು ನೀಡುವುದಾಗಿ ನಿಗಧಿಯಾಗಿತ್ತು. ಒಡೆಯರ್ ಕುಟುಂಬ ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿನಲ್ಲಿ ಕೇಸ್ ಹಾಕಿದೆ. 10 ವರ್ಷಗಳಾದರೂ ಇದಿನ್ನೂ ಬಗೆಹರಿದಿಲ್ಲ. ಅಲ್ಲಿರುವ 455 ಎಕರೆ ಆಸ್ತಿಯ ಇವತ್ತಿನ ಮಾರುಕಟ್ಟೆ ಮೌಲ್ಯ ಎಷ್ಟು ಗೊತ್ತೆ? ಅಂದಾಜು ರೂ. 30000000000...... ಅರ್ಥಾತ್ 3 ಸಾವಿರ ಕೋಟಿ ರೂ.ಗಳು!

ಈ 455 ಎಕರೆಯಲ್ಲಿ ಒಡೆಯರ್ ಕುಟುಂಬದ ಐವರು ಹೆಣ್ಣುಮಕ್ಕಳಾದ ಗಾಯಿತ್ರಿ ದೇವಿ, ಮೀನಾಕ್ಷಿ ದೇವಿ, ಕಾಮಾಕ್ಷಿ ದೇವಿ, ಇಂದಿರಾಕ್ಷಿ ದೇವಿ, ವಿಶಾಲಕ್ಷಿ ದೇವಿಯವರಗೆ ಪಾಲಿಗೆ ತಲಾ 28 ಎಕರೆಯಂತೆ ಒಟ್ಟು 140 ಎಕರೆ ಬಂದಿದೆ. ಸುಮಾರು 45 ಎಕರೆಯಷ್ಟು ಜಮೀನು ಕುಖ್ಯಾತ ಚಾಮರಾಜ ಗ್ರೂಪ್‌ನವರ ಪಾಲಾಗಿದೆ. ಮಸಾಲೆ ದೋಸೆ, ಕುದುರೆ ರೇಸು, ಮತ್ತಿತರ ಮೋಜುಗಳಿಗೆ, ರಾಜವಂಶದ ಅಂತಸ್ತು ಸ್ಥಾನಮಾನ ಕಾಪಾಡಿಕೊಳ್ಳಲು ಒಡೆಯರ್ ಕುಟುಂಬ ಈ ಚಾಮರಾಜಗಳ ಹತ್ತಿರ ಕೋಟ್ಯಂತರ ರೂಪಾಯಿ ಸಾಲ ಎತ್ತಿ ತೀರಿಸಲಾಗದೆ ಬರೆದುಕೊಟ್ಟಿರುವ ಜಮೀನು ಅದು. ಇಷ್ಟು ಬಿಟ್ಟರೆ ಉಳಿದೆಲ್ಲಾ ಜಮೀನು ಶ್ರೀಕಂಠದತ್ತ ಒಡೆಯರ್ ಪಾಲಿಗೆ ಸೇರಿದೆ. ಸಾವಿರಾರು ಕೋಟಿ ಬೆಲೆಯ ಇಷ್ಟು ಆಸ್ತಿ ಇದ್ದರೂ ಅದರಿಂದ ಒಡೆಯರ್ ಕುಟುಂಬಕ್ಕೆ ನಯಾಪೈಸೆ ಆದಾಯವೂ ಹುಟ್ಟುತ್ತಿಲ್ಲ. ಕೋರ್ಟಿನಲ್ಲಿ ಕೇಸ್ ಇರುವುದರಿಂದ ಮಾಲೀಕತ್ವ ಯಾರದೆಂಬುದು ಖಚಿತವಾಗಿಲ್ಲ, ಆದರೆ ಇನ್‌ಕಂಟ್ಯಾಕ್ಸ್, ಆಸ್ತಿ ತೆರಿಗೆಯ ಹೊರೆ ಒಡೆಯರ್ ಕುಟುಂಬದವರ ಮೇಲೆ ಬೆಟ್ಟದಷ್ಟು ಬೆಳೆದು ಕುಳಿತಿವೆ.


ಈ ಆರ್ಥಿಕ ಸಂಕಷ್ಟದಿಂದ ಒಮ್ಮೆಗೆ ಪಾರಾಗಲು ಒಡೆಯರ್ ಹಾಗೂ ಸೋದರಿಯರು ಒಂದು ಉಪಾಯ ಕಂಡು ಹಿಡಿದಿದ್ದರು. ಸರ್ಕಾರದೊಂದಿಗೆ ಸೇರಿ ಕೇಸ್ ಹಿಂತೆಗೆದುಕೊಂಡು ಜಾಯಿಂಟ್ ವೆಂಚರಿನಲ್ಲಿ ಅದೇ


ಜೆಡಿಎಸ್‌ಗೆ ಕರೆತಂದಿದ್ದೇ ಸಿದ್ಧರಾಮಯ್ಯ. ಆದರೆ ಈಗ ಸಿದ್ದು ಜೆಡಿಎಸ್ ಬಿಟ್ಟಿದ್ದಾರೆ. ಗುರುಸ್ವಾಮಿ ದಳದಲ್ಲೇ ಉಳಿಯುತ್ತಿದ್ದಾರೆ.

ಮತ್ತೊಂದೆಡೆ ನಾಯಕ ಜನಾಂಗದ ಲೀಡರ್ ಅಪ್ಪಣ್ಣ ಮೊದಲು ಬಿಜೆಪಿಯಲ್ಲಿದ್ದವರು ಸಿದ್ಧರಾಮಯ್ಯ ಕರೆದರೆಂದು ಜೆಡಿಎಸ್ ಸೇರಿ ಈಗ ಸಿದ್ದು ಜೊತೆ ಕಾಂಗ್ರೆಸ್‌ಗೂ ಹೋಗುತ್ತಿದ್ದಾರೆ.



ಸ್ವಾಮಿಗೆ ಇಬ್ರಾಹಿಂ ಆಹ್ವಾನ


ಇಬ್ರಾಹಿಂ


ಸುತ್ತೂರು ಸ್ವಾಮೀಜಿ

ಕಳೆದ ವಾರ ಮೈಸೂರಿನಲ್ಲಿ ಕ್ಷೇತ್ರದ ಜನರೊಂದಿಗೆ ಸಿದ್ಧರಾಮಯ್ಯ ಸಮಾಲೋಚನಾ ಸಭೆ ನಡೆಸಿದಾಗ ಅಲ್ಲೇ ಇದ್ದ ಸಿ.ಎಂ. ಇಬ್ರಾಹಿಂ ಮತಾನಾಡುತ್ತಾ 'ಸುತ್ತೂರು ಸ್ವಾಮಿಯವರ ಆಶೀರ್ವಾದ ಬೆಂಬಲ ನಮಗೆ ಬೇಕು. ಸ್ವಾಮೀಜಿಯವರು ನಮ್ಮ ಜೊತೆ ಬರಬೇಕು' ಎಂದಿದ್ದರು.

ಸುತ್ತೂರು ಸ್ವಾಮಿಗಳ ಒಲವು ಬಿಜೆಪಿಯ ಯಡ್ಡಿ ಅಂಡ್ ಗ್ರೂಪ್ ಮೇಲಿದೆ ಎಂಬುದು ಜಗಜ್ಜಾಹೀರಾದ ಸಂಗತಿ. ನಾಳಿನ ಎಲೆಕ್ಷನ್‌ನಲ್ಲಿ ಸಿದ್ದು V/s ಗೌಡರ ಪ್ರಾಕ್ಸಿ ರಾಣಿ ಪ್ರಮೋದಾ ದೇವಿ ಸೆಣಸಾಟ ನಡೆಯುವಾಗ ಅಲ್ಲಿ ಬಿಜೆಪಿ ಅಭ್ಯರ್ಥಿ ಕಣದಲ್ಲಿರಬಾರದೆಂದು ಈಗಾಗಲೇ ಅರಮನೆ-ಗುರುಮನೆಗಳಿಗೆ ಗೌಡರು ಸಂದೇಶ ಕಳುಹಿಸಿಯಾಗಿದೆ. ರಾಜ್ಯ ಬಿಜೆಪಿ ಸಹ ಇದಕ್ಕೆ ಒಪ್ಪಿಕೊಂಡಿದೆಯಂತೆ. ಸಿದ್ದು ವಿರೋಧಿ ಓಟುಗಳು ಹಂಚಿಹೋಗಬಾರೆಂಬುದೇ ಗೌಡಜ್ಜನ ಹುನ್ನಾರ.

...ರಾಮಯ್ಯನವರತ್ತಲೇ ಗುರಿ ಮಾಡಿಕೊಂಡಿರುವ ಅಗೋಚರ ಬಾಣಗಳು ಇನ್ನೆಷ್ಟಿವೆಯೊ... ಗೌ... ಹತ್ತಿರ!

ಪಿ.ಕೆ. ಮಲ್ಲನಗೌಡರ್

ಬಿಟ್ bit ಹಿಡಿ!



ಜಾಗದಲ್ಲಿ ಬೃಹತ್ ಷಾಪಿಂಗ್ ಕಾಂಪ್ಲೆಕ್ಸ್, ಸ್ಟೇಡಿಯಂ ಇತ್ಯಾದಿ ನಿರ್ಮಿಸಿ, ಬರುವ ಆದಾಯವನ್ನು ಸಮನಾಗಿ ಹಂಚಿಕೊಳ್ಳುವ ಪ್ರಸ್ತಾವನೆಯನ್ನು ಮುಖ್ಯಮಂತ್ರಿ ಕುಮಾರಸ್ವಾಮಿಗೆ ಸಲ್ಲಿಸಿದ್ದರು.

'ಭೂ ಹೋರಾಟಗಾರ' ದೇವೇಗೌಡರಿಗೂ ಒಡೆಯರ್ ಕುಟುಂಬದ ಭೂ ಮಾಲೀಕತ್ವದ ಸಮಸ್ಯೆ ಬಗ್ಗೆ ಕರುಣೆ ಉಕ್ಕಿ ಬಂತೆನೋ....! ಅಂತೂ 'ಇದನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ' ಕುಮಾರ ಸ್ವಾಮಿಗಳೂ ಹೇಳಿಬಿಟ್ಟರು.

ಈ ಅರಮನೆ ಡೀಲ್‌ಗಳು ಕುದುರುತ್ತಿರುವಾಗಲೇ ಸಿದ್ಧರಾಮಯ್ಯ ರಾಜೀನಾಮೆ, ಕಾಂಗ್ರೆಸ್ ಸೇರ್ಪಡೆ, ಮರು ಚುನಾವಣೆಗಳ ವಿಚಾರ ರಾಜ್ಯ ರಾಜಕೀಯದಲ್ಲಿ ಮತ್ತೆ ಬಿಸಿ ಏರಿಸಿದೆ.

'ನಮಾಜು ಮಾಡಲು ಹೋದರೆ ಮಸೀದಿಯೆ ತಲೆ ಮೇಲೆ ಬಿತ್ತು' ಎನ್ನುವಂತೆ ಅರಮನೆ ಜಮೀನು ಬಿಡಿಸಿಕೊಡಿ ಎಂದು ಬಂದವರಿಗೆ 'ಹಾಗಾದರೆ ಸಿದ್ಧರಾಮಯ್ಯನ ವಿರುದ್ಧ ಎಲೆಕ್ಷನ್‌ಗೆ ನಿಂತ್ಕಳಿ' ಎಂದು ವಿನೂತನ ಡೀಲು ಕುದುರಿಸಲು ಟ್ರೈ ಮಾಡುತ್ತಿದ್ದಾರೆ ಗೌಡರು.


ಹೀಗೆ ಗೌಡರ ಮನೆ-ಅರಮನೆ-ಗುರುಮನೆಗಳೆಲ್ಲಾ ಒಂದಾಗಿ ಸಿದ್ಧರಾಮಯ್ಯನವರನ್ನು ರಾಜಕೀಯವಾಗಿ ಮುಗಿಸೇ ಬಿಡಲು ಪಿತೂರಿ ನಡೆಸುತ್ತಿರುವುದರ ಅರ್ಥ ಏನು?

ಸಿದ್ಧರಾಮಯ್ಯ ಕರ್ನಾಟಕ ರಾಜ್ಯದ ಪ್ರಮುಖ ಲೀಡರ್... ಅಷ್ಟೇ ಅಲ್ಲ ಚಾಮುಂಡೇಶ್ವರಿ ಕ್ಷೇತ್ರದ ಬೈ ಎಲೆಕ್ಷನ್ ಫಲಿತಾಂಶ ರಾಜ್ಯ ರಾಜಕೀಯದ ಭವಿಷ್ಯದ ಕನ್ನಡಿ ಎಂದು ತಾನೆ?

ದೇವೇಗೌಡ ಗಡಗಡ

ಕರ್ನಾಟಕ ಶಾಸನಸಭೆಯಲ್ಲಿ ಎಂತೆಂತಾ ಘನತೆವೆತ್ತ ಶಾಸಕರಿದ್ದಾರೆಂದರೆ ಒಬ್ಬ ಶಾಸಕ ಇನ್ನೊಬ್ಬನಿಗೆ 'ನೀನು ಕಳ್ಳ' ಎಂದರೆ ಬೈಸಿಕೊಂಡವನು 'ನೀನು ಕೊಲೆಗಾರ' ಎಂದಿದ್ದಾನೆ. ಕೊಲೆ ಆರೋಪಿ 'ಹಾಗಾದ್ರೆ ನಿನ್ನೂ ಈಗ ಕೊಂದುಹಾಕ್ತೀ... ನಿ' ಎಂದು ಆರ್ಭಟಿಸುತ್ತಾ ಮೇಲೇರಿ ಹೋಗುತ್ತಾನೆ.

ಈ ಚಿಲ್ಲರೆ ಸಂಭಾಷಣೆ ನಡೆದ ಸಮಯದಲ್ಲೇ ಸಿದ್ಧರಾಮಯ್ಯ ಜೆಡಿಎಸ್‌ಗೆ ರಾಜೀನಾಮೆ ನೀಡುವುದಾಗಿಯೂ ಆ ಬಗ್ಗೆ ಮಾತಾಡಲು ಅವಕಾಶ ಕೊಡುವಂತೆಯೂ ಕೋರಿ ಸಭಾಧ್ಯಕ್ಷ ಕೃಷ್ಣರಿಂದ ಇಲ್ಲ ಅನ್ನಿಸಿಕೊಂಡಿದ್ದಾರೆ.



ನಮ್ಮ ಶಾಸನಸಭೆಯಲ್ಲಿ ಕಳ್ಳ ಯಾರು, ಕೊಲೆ ಮಾಡಿದವನ್ಯಾರು, ಕಚ್ಚೆಹರುಕನ್ಯಾರೆಂದು ಬೇಕಿದ್ದರೆ ಜಗಳವನ್ನೇ ಮಾಡಬಹುದಂತೆ... ಆದರೆ ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದ 'ನಾನೇಕೆ ರಾಜೀನಾಮೆ ಕೊಡುತ್ತಿದ್ದೇನೆ' ಎಂದು ಸಿದ್ಧರಾಮಯ್ಯ ಮಾತ್ರ ಮಾತಾಡಬಾರದು!

ಈ ವಿಪರ್ಯಾಸಕ್ಕೆ ಏನೆನ್ನಬೇಕು. ಸಿದ್ಧರಾಮಯ್ಯನವರ ಒಂದೇ ಭಾಷಣದಿಂದ ಕೋ-ಜಾ ಸರ್ಕಾರ ಏನು ಬಿದ್ದು ಹೋಗುತ್ತಿರಲಿಲ್ಲ, ಆದರೂ ಗೌಡರು ಭಯಪಟ್ಟು ಅವಕಾಶ ಸಿಗದಂತೆ ನೋಡಿಕೊಂಡಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚರ್ಚೆ, ಪ್ರತಿಭಟನೆ, ಭಿನ್ನಮತ ಎಲ್ಲಾ ಇರಲೇಬೇಕಲ್ಲವೆ. ಆದರೆ ದೇವೇಗೌಡ ಅಂಡ್ ಸನ್ಸ್ ಆ ಪ್ರಬುದ್ಧತೆ ತೋರಲಿಲ್ಲ.



ಜಯಾ ದೀದಿ,

ನಮಸ್ಕಾರ್ರಿ.... ಏನ್ ಈ ಅಯ್ಯಪ್ಪಗಳು ನಿಮಗ್ಯ ಗಂಟ್ ಬಿದ್ದ್ಯಾವಲ್ಲ.. ಈ ವಯಸ್ಸಿನ್ಯಾಗೂ ಚಂದ್ ಇರಾದು ತಪ್ಪನೂ? 'ಶಂಕರ್‌ಗುರು' ಸಿನಿಮಾದಾಗ ಕಾಶ್ಮೀರ ಚೆಲುವಿ ಆಗಿದ್ಯಲ್ಲ ದೀದಿ ನೀನು... ಇವತ್ತೂ ನಿನ್ ಕೆನ್ನೆ ಸೇಬು ತರಹಾ ಲಕಲಕ ಹೊಳೆತಾವ ನೋಡು.... ನಿನ್ನಷ್ಟಕ್ಕ ನೀ ಮೇಕಪ್ ಮಾಡಿಕೊಂತ ಜೀವಿಸಾಕೂ ಬಿಡಂಗಿಲ್ಲ ಈ ಪಾಪಿಗಳು....

ಅವತ್ ಏನೋ ಕಾಲ್ ಜಾರಿ ನೀನು ಅಯ್ಯಪ್ಪನ್ನ ಟಚ್ ಮಾಡಿರ್ಬೇಕು... ಏನಾತೀಗ? ಈ ಹುಚ್ ಅರ್ಚಕರಿಗೆಲ್ಲ ತಲಿ ಕೆಟ್ಟೈತಿ ಅಷ್ಟ.... ದೀದಿ ನೀ ಏನೂ ಹೆದರಬ್ಯಾಡ... "ಈಗ್ಲೂ ಮನಸು ಮಾಡಿದ್ರ ಇನ್ನೊಮ್ಮೆ ಅಯ್ಯಪ್ಪನ್ನ ಟಚ್ ಮಾಡ್ತೀನಿ... ಯಾರ್ ಏನ್ ಮಾಡತೀರಿ ನೋಡಾಣ?" ಅಂತಾ ಒಂದು ಡೈಲಾಗ್ ಹೊಡಿ ದೀದಿ.... ಎಲ್ಲಾವ್ರೂ ಬಾಯ್ ಮುಚಕೊಂತಾನ....

ಅದೆಲ್ಲ ಇರ್ಲಿ ದೀದಿ, ನೀನ್ ಮಾತ್ರ ನಿನ್ ಮೇಕಪ್ ಬಿಡಬ್ಯಾಡ ನೋಡವಾ.... ನಿನ್ ಸೇಬುಕೆನ್ನೆ ಹಂಗss ಇರ್ಬೇಕು ನಮಗss...

-ಮುನ್ನಿ (Zero Hour)

ಧಾರವಾಡ

ಜನರಲ್ ಮೆರಿಟ್‌ಗೆ ಶೇ. 50 ಮೀಸಲಾತಿ!

ಇದು ಸತ್ಯ! ಎಸ್.ಸಿ., ಎಸ್.ಟಿ.ಗಳಿಗೆ 22.5%, ಒಬಿಸಿಗಳಿಗೆ ಶೇ. 27. ಒಟ್ಟು ಶೇ. 49.5 ರಷ್ಟು ಮೀಸಲಾತಿ ಅವಕಾಶವನ್ನು ಸದ್ಯ ಕಲ್ಪಿಸಲಾಗಿದೆ. ಇನ್ನುಳಿದ ಶೇ. 50.5 ರಷ್ಟನ್ನು ಜನರಲ್ ಮೆರಿಟ್ ಕೆಟಗರಿ ಅಥವಾ ಮುಕ್ತ ಕೆಟಗರಿ ಎಂದು ಘೋಷಿಸಲಾಗಿದೆ. ಅಂದರೆ ಮೇಲ್ವರ್ಗಗಳು ಯಾವುದನ್ನು 'ಮೆರಿಟ್' ಎನ್ನುತ್ತವೋ, ಅಷ್ಟು 'ಮೆರಿಟ್'ನ್ನು ಎಸ್.ಸಿ, ಎಸ್.ಟಿ, ಒಬಿಸಿ ವರ್ಗದವರು ಪಡೆದರೆ ಅವರೂ ಮುಕ್ತ ಕೆಟಗರಿ (open category)ಯಲ್ಲಿ ಸೀಟು ಅಥವಾ ಕೆಲಸ ಪಡೆಯಬೇಕು. ಹಾಗಾಗುತ್ತಲೇ ಇಲ್ಲ. ಅವರನ್ನೆಲ್ಲ ಅವರವರ ಗ್ರೂಪ್‌ಗಳಿಗೆ ಸೇರಿಸುವ ಮೂಲಕ ಆ ಗ್ರೂಪ್‌ನಲ್ಲಿನ ಅಷ್ಟೇ ಸಂಖ್ಯೆಯ ಇತರ ಪ್ರತಿಭಾವಂತರಿಗೆ ಸೀಟ್/ಕೆಲಸ ಸಿಗದಂತೆ ಮಾಡಲಾಗುತ್ತಿದೆ. ಅಂದರೆ ಇದರರ್ಥ: ಜನಸಂಖ್ಯೆಯ ಶೇ. 15 ರಷ್ಟಿರುವ, ಮೀಸಲಾತಿ ವ್ಯಾಪ್ತಿಗೊಳಪಡದ ಮೇಲ್ವರ್ಗದ ಬಲಾಢ್ಯರಿಗೆ ಶೇ. 50.5 ರಷ್ಟು ಮೀಸಲಾತಿ ನೀಡುತ್ತಿದ್ದಾರೆ!

ಪಾರ್ಲಿಮೆಂಟ್, ವಿಧಾನಸಭೆ, ವಿಧಾನ ಪರಿಷತ್‌ಗಳ ಆಯ್ಕೆ, ನೇಮಕಗಳಲ್ಲಿ ಈ ರೀತಿ ಮಾಡುವುದಿಲ್ಲ, ಅಂದರೆ ಜನರಲ್ ಕೆಟಗರಿ ಕ್ಷೇತ್ರದಲ್ಲಿ SC, ST, OBC ಯಾರಾದರೂ ಸ್ಪರ್ಧಿಸಿ ಗೆಲ್ಲಬಹುದು. ಇದು ಸಂವಿಧಾನದತ್ತ ಹಕ್ಕು. ಪ್ರವೇಶ, ಉದ್ಯೋಗಾವಕಾಶಗಳಿಗೂ ಇದು ಅನ್ವಯಿಸುತ್ತದೆ. ಸುಪ್ರೀಂಕೋರ್ಟ್, ಹೈಕೋರ್ಟ್‌ಗಳು ಹಲವಾರು ಬಾರಿ ಇದನ್ನು ಎತ್ತಿ ಹಿಡಿದು ತೀರ್ಪು ನೀಡಿವೆ. ಆದರೆ ಈ ದೇಶದ ಪರಮೋಚ್ಛ ನೇಮಕಾತಿ ಸಂಸ್ಥೆ ಕೇಂದ್ರ ಲೋಕಸೇವಾ ಆಯೋಗ (UPSC) ಮೇಲಿನ ನೀತಿಯನ್ನು ರಾಜಾರೋಷವಾಗಿ ಉಲ್ಲಂಘಿಸುತ್ತಾ, SC/ST, OBC ಯ ಮೆರಿಟ್ ಅಭ್ಯರ್ಥಿಗಳನ್ನು ವಂಚಿಸುತ್ತಲೇ ಇದೆ. ಇಲ್ಲೊಂದು ಉದಾಹರಣೆ ನೋಡಿ:

* ಕಳೆದ ಬಾರಿಯ ನಾಗರಿಕ ಸೇವಾ ಪರೀಕ್ಷೆಯನ್ನು 425 ಹುದ್ದೆಗಳಿಗಾಗಿ ನಡೆಸಲಾಯ್ತು. ಜನರಲ್ ಮೆರಿಟ್‌ಗೆ 214 ಹುದ್ದೆಗಳಿದ್ದವು.

ಕೇವಲ ಮಾರ್ಕ್ಸ್ ಆಧಾರದ ಮೊದಲಿನ 214 ರ್‍ಯಾಂಕ್‌ಗಳಲ್ಲಿ 50 ಜನ SC,ST, OBC ಗಳಿಗೆ ಸೇರಿದ ಪ್ರತಿಭಾವಂತರಿದ್ದರು. ಇದರಲ್ಲಿ 40 ಜನ ಒಬಿಸಿಗಳು.


* ಆದರೆ ಈ ಟಾಪ್ 214 ಲಿಸ್ಟ್‌ನ 50 ಜನ (ಮೀಸಲು ವರ್ಗದವರು) ಪ್ರತಿಭಾವಂತರಿಗೆ ಜನರಲ್ ಮೆರಿಟ್‌ನಲ್ಲಿ ಉದ್ಯೋಗ ನೀಡದೇ, ಮೀಸಲು ಕ್ಯಾಟಗರಿಯಲ್ಲಿ ನೀಡುವ ಮೂಲಕ ಆ ಮೀಸಲು ಕ್ಯಾಟಗರಿಯ ಲ್ಲಿದ್ದ ಇತರ 50 ಜನರ ಉದ್ಯೋಗಗಳಿಗೆ ಕಲ್ಲು ಹಾಕಲಾಯ್ತು.

* ಒಟ್ಟು 425 ರಲ್ಲಿ ಒಬಿಸಿಗಳಿಗೆ ಶೇ. 27 ಅಂದರೆ 117 ಹುದ್ದೆ ಲಭ್ಯವಾಗುತ್ತವೆ. ಮೀಸಲಿನ ಈ 117 ಹುದ್ದೆಗಳ ಜೊತೆ, ಟಾಪ್ 214 ರಲ್ಲಿದ್ದ 40 ಜನ ಸೇರಿ ಒಟ್ಟು 157 ಹುದ್ದೆ ಒಬಿಸಿಗಳಿಗೆ ಸಿಗಬೇಕಿತ್ತು.

* ಆದರೆ ಟಾಪ್ 214 ರಲ್ಲಿದ್ದ 40 ಜನ ಒಬಿಸಿಗಳನ್ನು ಜನರಲ್ ಮೆರಿಟ್ ಕ್ಯಾಟಗರಿಯಲ್ಲಿ ಪರಿಗಣಿಸಿದ್ದರಿಂದ ಅಷ್ಟೇ ಸಂಖ್ಯೆಯ (40) ಒಬಿಸಿಗಳು ಉದ್ಯೋಗ ಕಳೆದುಕೊಳ್ಳಬೇಕಾಯ್ತು.

ಹೇಗಿದೆ ನೋಡಿ UPSC ಯ ಸಂವಿಧಾನ ದ್ರೋಹ! ಹಿಂದೆಲ್ಲಾ ಈ ರೀತಿಯಾದಾಗ, ಸ್ಥಿತಿವಂತರಾದ SC, ST, OBC ಗಳು ಸುಪ್ರೀಂಕೋರ್ಟ್ ಮೊರೆ ಹೋಗಿ ಜಯಶಾಲಿ ಆಗಿದ್ದಾರೆ. ಆದರೆ ದುಡ್ಡಿಲ್ಲದವರು ಏನು ಮಾಡುವುದು?

ಹಿಂದೆಲ್ಲ SC, ST ಹುದ್ದೆಗಳು ಖಾಲಿ ಉಳಿಯುತ್ತಿದ್ದವು. ಆದರೆ ಇತ್ತೀಚೆಗೆ SC,STಗಳೂ ಸ್ಪರ್ಧೆಯಲ್ಲಿದ್ದಾರೆ. Written Test ಗಳಲ್ಲಿ SC, ST, OBC ಗಳೂ ಚೆನ್ನಾಗಿಯೇ ಮಾರ್ಕ್ಸ್ ತೆಗೆಯುತ್ತಿದ್ದಾರೆ. ಏಕೆಂದರೆ ಅಲ್ಲಿ ಅಭ್ಯರ್ಥಿಯ ಜಾತಿ ಪೇಪರ್ ಚೆಕ್ ಮಾಡುವವನಿಗೆ ಗೊತ್ತಾಗುವುದಿಲ್ಲ, ಆದರೆ ಸಂದರ್ಶನದಲ್ಲಿ ಜಾತಿ ಗೊತ್ತಾಗುವುದರಿಂದ ಅಲ್ಲಿ SC, ST, OBC ಗಳಿಗೆ ತೀರಾ ಕಡಿಮೆ ಮಾರ್ಕ್ಸ್!



ಇದನ್ನು ಪ್ರತಿಭಟಿಸಿ ಕೋರ್ಟ್‌ಗೆ ಹೋದ ಅಭ್ಯರ್ಥಿಗಳು ಗೆಲುವು ಕಂಡಿದ್ದಾರೆ. ಆದರೆ UPSC ಕೋರ್ಟ್ ತೀರ್ಪುಗಳನ್ನು ಕೇರ್ ಮಾಡುತ್ತಿಲ್ಲ. ಸುಪ್ರೀಂ ಕೋರ್ಟ್ ತನ್ನ ಹಳೆಯ ತೀರ್ಪುಗಳನ್ನೇ Suo-Motu ನೋಟೀಸ್ ಎಂದು ತೀರ್ಮಾನಿಸಿ, UPSC ಯ ಮೇಲೆ ಕ್ರಮ ಕೈಗೊಳ್ಳಬಹುದಲ್ಲ?

ಒಟ್ಟನಲ್ಲಿ ನಿಜಕ್ಕೂ ಮೀಸಲಾತಿ ಪ್ರಮಾಣ ಹೆಚ್ಚಿಗೆ ಇರುವುದು SC, ST, OBC ಗಳಿಗಲ್ಲ... ಶೇ. 15 ಜನಸಂಖ್ಯೆಯ ಜನರಲ್ ಮೆರಿಟ್ ಎಂದುಕೊಳ್ಳುವ ಮೇಲ್ವರ್ಗದ ಉಳ್ಳವರಿಗೆ... ಅವರ ಮೀಸಲು ಪ್ರಮಾಣ ಶೇ. 50.5!

ಜೈ ಭಾರತಮಾತೆ!!

'ಅಗ್ನಿ'ಯ ಬೆನ್ನುಬಿದ್ದ 'ಇನ್ಸಾಟೂ' ಹೊಡೆಯಿತು ಡೈವ್!


ಜುಲೈ 9, 11.03 ಗಂಟೆ ಮಧ್ಯಾಹ್ನ

ಕೌಂಟ್‌ಡೌನ್ ಶುರುವಾಯ್ತು. ಲಿಫ್ಟ್-ಆಫ್ ಕೂಡ ಆಯ್ತು. 12 ಕಿ.ಮೀ. ಹಾರಿತಷ್ಟೇ. ಸೀದಾ ಸಮುದ್ರದ ಪಾಲಾಗಿ ಸ್ವಿಮ್ಮಿಂಗ್ ಕಲಿಯೋಕೆ ಹೋಗಿ ಮುಳುಗಿ ಹೋಯ್ತು.

ಇದು ಅಗ್ನಿ-3 ಎಂಬ 3500 ಕಿ.ಮೀ. ವ್ಯಾಪ್ತಿಯ ಭಾರತದ 'ಹೆಮ್ಮೆಯ' ಕ್ಷಿಪಣಿ!

ಭಾರತದ ದಿನಪತ್ರಿಕೆಗಳ ಬಹುತೇಕ ಸಂಪಾದಕರುಗಳೆಲ್ಲ ರಾತ್ರಿ ಮನೆಗೆ ಹೋಗುವ ಮುನ್ನ DRDO ನ 'ಅಗ್ನಿ' ನೀರಿನಲ್ಲಿ ಶಮನವಾದದ್ದಕ್ಕೆ ಬೇಸರಿಸಿ, ಆದರೂ ವಿಜ್ಞಾನಿಗಳು ಧೃತಿಗೆಡುವ ಅವಶ್ಯಕತೆ ಇಲ್ಲ ಎಂದು ಸಂಪಾದಕೀಯಕ್ಕೊಂದು ಹೆಡ್‌ಲೈನ್ ಗೀಚಿ ನಿದ್ದೆಗೆ ಹೋದರು.

ಅವರಿನ್ನೂ ಮುಂಜಾನೆ ನಿದ್ರಾದೇವಿಯ ವಶದಲ್ಲಿರುವಾಗಲೇ ಅಂದರೆ ಸರಿಯಾಗಿ 5.38 ಕ್ಕೆ ಇನ್ಸಾಟ್ 4C ಯನ್ನು ಹೊತ್ತ GSLV-FO2 ಎಂಬ ಉಡಾವಣಾ ನೌಕೆ ಆಕಾಶದತ್ತ ಚಿಮ್ಮಿತು. 40 ಸೆಕೆಂಡುಗಳಲ್ಲೇ 1 ಡಿಗ್ರಿ ಟರ್ನ್ ತೆಗೆದುಕೊಂಡು ಅಡ್ಡದಾರಿ ಹಿಡಿಯಿತು. ಏಕೆಂದರೆ ಅದಕ್ಕೆ ತನ್ನ ಗರ್ಲ್‌ಫ್ರೆಂಡ್ 'ಅಗ್ನಿ'ಯನ್ನು ಸೇರುವಾಸೆ. ಇದನ್ನು ತಕ್ಷಣ ಅರ್ಥೈಸಿಕೊಂಡ ಇಸ್ರೋ ವಿಜ್ಞಾನಿಗಳು "ಲವ್ ಎದುರು ಏನು ಮಾಡಲಾಗಲ್ಲ" ಎಂದು ಅದನ್ನು 'ಅಗ್ನಿ'ಯಿರುವಲ್ಲಿಗೆ ಕಳಿಸಿಬಿಟ್ಟರು.



ಜುಲೈ 10 ರ ಮುಂಜಾನೆ ಪತ್ರಿಕೆಗಳಲ್ಲಿ 'ವಿಜ್ಞಾನಿಗಳಿಗೆ ಅಭಯ' ನೀಡಿದ್ದ ಸಂಪಾದಕೀಯಗಳನ್ನು ಓದುತ್ತಿದ್ದವರ ಕಣ್ಣೆದುರು ಟಿವಿಯಲ್ಲಿ ಇನ್ಸಾಟ್ ನೀರುಪಾಲಾದ ಸುದ್ದಿ ತೇಲಿಬರುತ್ತಿತ್ತು.

ಮುಂಜಾನೆ ಆಫೀಸ್ ಪಾಲಾದ ಸಂಪಾದಕರುಗಳಿಗೋ ಮುಜುಗುರವೋ ಮುಜುಗುರ!

'ಅಗ್ನಿ'ಯ ವಿನ್ಯಾಸದಲ್ಲೇ ದೋಷವಿತ್ತು. ಇದನ್ನು ತಯಾರಿಸಿದ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ (DRDO)ದಲ್ಲಿ ದಶಕಗಳಿಂದ ರಾಜಕೀಯವೇ ಮೇಲುಗೈ ಪಡೆದಿದೆ. ಹಾಗೆಯೇ ಯುವ ಇಂಜನಿಯರ್‌ಗಳನ್ನು ಕಂಟ್ರಾಕ್ಟ್ ಬೇಸಿಸ್ ಆಧಾರದ ಮೇಲೆ ತುಂಬಿಕೊಳ್ಳುತ್ತಿದ್ದಾರೆ. ಅಧಿಕಾರಿಗಳು ತಮಗೆ ಬೇಕು ಬೇಕಾದ ಕನ್ಸಲ್ಟೆನ್ಸಿಗಳಿಗೆ ಈ ಕೆಲಸ ವಹಿಸಿ ದುಡ್ಡು ನುಂಗುತ್ತಿದ್ದಾರೆ.

ಇಲ್ಲಿ ಸಂಬಳವೂ ಅಷ್ಟಕಷ್ಟೇ.

ಹೀಗಾದರೆ 'ಅಗ್ನಿ'ಯೇನು... ಸೂರ್ಯನೂ ಉರಿದು ಸಮುದ್ರಕ್ಕೆ ಬೀಳುತ್ತಾನಲ್ಲವೇ?

ಆದರೆ ಉತ್ಕೃಷ್ಟ ತಂತ್ರಜ್ಞಾನಕ್ಕಾಗಿ ಹೆಸರು ವಾಸಿಯಾಗಿರುವ ಶ್ರೇಷ್ಠ ಸಂಸ್ಥೆ ಇಸ್ರೋ ನಿರ್ಮಿಸಿದ GSLV ಗೂ ಇದೇ ಗತಿ ಆಗಿದ್ದು ಆಶ್ಚರ್ಯಕರ ವಿಷಯವೇ.

ಆದರೆ ನೆನಪಿಡಿ: ಈ 20 ವರ್ಷಗಳಲ್ಲಿ ಐಐಟಿ ಮತ್ತು ಇತರೆಲ್ಲ ಇಂಜನಿಯರಿಂಗ್ ಕಾಲೇಜುಗಳಿಂದ ಹೊರಬಿದ್ದವರಲ್ಲಿ ಶೇ. 80 ಕ್ಕೂ ಹೆಚ್ಚು ಜನಕ್ಕೆ ಎಂ.ಇ., ಎಂ.ಟೆಕ್ ಮಾಡುವ ಆಶೆ ಇಲ್ಲ; ಸಂಶೋಧನೆ ಎಂದರೆ ಅಲರ್ಜಿ. ಅದು ಅವರ ತಪ್ಪಲ್ಲ ಬಿಡಿ... ಐಟಿ ಎಂಬ 'ಮೋಹಿನಿ' ಕೈ ಹಿಡಿದು ಕರೆಯುತ್ತಿರುವಾಗ ಅವರಾದರೂ ಹೇಗೆ ಸುಮ್ಮನಿದ್ದಾರು?

ಐಟಿ ಕಂಪನಿಗಳಲ್ಲಿರುವ ಇಂಜನಿಯರ್‌ಗಳಿಗಿಂತ ಶ್ರೇಷ್ಠ ತಂತ್ರಜ್ಞರು, ಸಂಶೋಧಕರು ಈ ನಮ್ಮ ಇಸ್ರೋ, ಐಐಎಸ್ಸಿಗಳಲ್ಲಿದ್ದಾರೆ. ಆದರೆ ಸರ್ಕಾರಕ್ಕೆ ಇಸ್ರೋ, ಐಐಎಸ್ಸಿಗಳೆಂದರೆ ಅನಾದರ.... ಐಟಿ ಕಂಪನಿಗಳೆಂದರೆ ಆಲಿಂಗನ!

ಇಸ್ರೋ ಹಾಳಾಗದಿರಲಿ....

ಒಂದು CD ಗವನ

ತನ್ನ ತಾನೇ ಸುಟ್ಟುಕೊಂಡಿದೆ
'ಅಗ್ನಿ' ಭಸ್ಮಾಸುರನಂತೆ...
ತನಗೆ ತಾನೇ ಇನ್ಸಲ್ಟ್ ಮಾಡಿಕೊಂಡಿದೆ
'ಇನ್ಸಾಟ್' ವಿದೂಷಕನಂತೆ...
ಸುರುತ್ತಿದ್ದಾರೆ ಸಮುದ್ರವನ್ನೇ
ವಿಜ್ಞಾನಿಗಳು ಅಗ್ನಿ ಭಕ್ತರಂತೆ....

ಚೆಲುವಾಂತ ಚೆನ್ನಿಗನೆ ನಲಿದಾಡು ಬಾ!



ಬೊಂಬಾಯಿಯಲ್ಲಿ ನಡೆದ ಸರಣಿ ಬಾಂಬಿನ ಅನಾಹುತಗಳ ಬಗ್ಗೆ ಮಾತನಾಡುತ್ತಿದ್ದ ಸೀರ ಇದ್ದಕ್ಕಿದ್ದಂತೆ ಮುಸ್ಲಿಮರ ಮೇಲೆ ಸಿಟ್ಟಾಗಿ,

"ನೀನೇನೆ ಅನ್ನು ಬಂಬಾಯಿಂದ ಸಾಬರನ್ನೆಲ್ಲ ಓಡಿಸಿದ್ರೆ ಸರಿಯಾಯ್ತದೆ ಕಂಡ್ರ" ಎಂದ.

"ಅಯ್ಯಪ್ಪ ನಿನ್ನ ಮಾತಿಗೆ ಬರಿ ಸಾಹೇಬ್ರಾನದಲ್ಲಿ ಬಂಬಾಯಿ ಲಾತಿದಂಗೇ ಬಾಂಬಾಕಿದ್ರು. ಆ ಇಲಾಕೆನಲ್ಲುಂತೂ ಪ್ರತೀ ದಿನ ಹೂಕಿ ವಡದಂಗೆ ಬಾಂಬಾಕತಾ ಅವುರೆ. ಅಲ್ಲಿಂದ ಯಾರ್ರೋ ಡಸುಬೇಕೊ?" ಎಂದ ಉಗ್ರಿ.

"ಅಲ್ಲಿದ್ದಂಗೋ ಗೊತ್ತಿಲ್ಲ, ಆದವುರನೆ ಬರ, ಇಲ್ಲಿ ಮಾತ್ರ ಸಾಬರ ಜಾಗ ಕಾಲಿ ಮಾಡಿದ್ರೆ ಮಾತ್ರ ಬಂಬಾಯುಳಿತದೆ."

"ಹಾಜ್ಲೆ ವರಸ ಮಳಿಬಂದು ನೂರಾರು ಜನ ಕೊಚಗಂಡೋದ್ರು. ಈ ವರ್ಸ ಸಾಬರು ಬಾಂಬಾಕಿ ಡ್ತನ ತರುದ್ರು. ಅಂತೂ ಆ ಬಂಬಾಯಿಗೆ ಏನೋ ಆಗ್ಯದೆ ಕಂಡ್ರ" ಎಂದ ಕಾಳಮಾವ.

"ನಮ್ಮೂರುಡುಗ್ರು ಸುದ್ದಿ ಬತ್ತೇನ್ಲ?" ಎಂದಳು ಜುಮ್ಮಿ.

"ಊ ಕಣೆ, ಅವೆಲ್ಲಿ ಓಡಾಡಕ್ಕೋದವ್ರೂ, ಹೋಟ್ಲು ಕೈಲಸಾಯ್ತು ಅವಾಯ್ತು ಅಂಗವಂತೆ. ಯಲ್ಲ ಚೆನಾಗ್ಯವಂತೆ."

"ನಮ್ಮುಡುಗ್ರು ಬುಡು, ತಲೆ ಮರಿಸಿಗಂಡು ಕಾಲ ಆಕದ್ರಲ್ಲಿ ನಿಸೀಮ್ರು."

"ನೀವ್ಗಳ ಕಲಿಸಿರದೆ ಆದಲವೆ ಮಾವ, ಕಂಡೆ ಕಾಣೆ ಅನ್ನಂಗಿರಬೇಕು, ಯಲೆಮರೆಕಾಯಂಗಿರಬೇಕು ಅಂತ ಯೇಳಿ ಯೇಳಿ ಅವು ಅಂಗೆ ಆಗ್ಯವೆ" ಎಂದ ಉಗ್ರಿ.

"ಅಂಗಿರೊವತ್ತಿಗೆ ಕಂಡ್ರ ಆಟೊಂತರ ಜನ ಸತ್ತರೂ ನಮ್ಮುಡ್ರು ಬದಿಕಂದಿರದು."

"ನೂರ್ರುಪಾಯಿ ಸಂಬಳಕೆ ಬಂಬಾಯಿಗಂಟ ಹೋಗಬೇಕೆ?" ಎಂದಳು ಜುಮ್ಮಿ.

"ನೀನು ಚಿಕ್ಕುಡುಗಿಲಿ ಕೂಲಿಗೋಯ್ತಿದ್ದಾಗ ಹೆಣ್ಣಾಳಿಗೆ ಮೂರ್ರುಪಾಯಿ ಗಂಡಾಳಿಗೆ ಐದು ರೂಪಾಯಿ ಕೂಲಿ ಇತ್ತು, ಆ ಮೂರ್ರುಪಾಯಿಗೆ ಮೂರು ಮೈಲಿ ನೃಡಿದಿದ್ದ ಮರೆತೆಬುಟ್ಟೇನೂ?" ಎಂದ ಸೀರ.

"ಇವತ್ತು ಹೆಣ್ಣಾಳಿಗೆ ದಿನಕೆ ನೂರೈವತ್ತು ರೂಪಾಯಿ ಕೂಲಿ ಕೊಡ್ತಾ ಅವುರೆ ಗೊತ್ತೆ?" ಎಂದ ಉಗ್ರಿ.

"ಅದೆಲ್ಲಿ ಕೊಡ್ತರ್ಲ, ಬರಿ ಸುಳ್ಳನೆ ಯೇಳ್ತಿ ನೀನು" ಎಂದಳು ಜುಮ್ಮಿ.

"ಬಳ್ಳಾರಿಲಿ ಕೊಡ್ತ ಅವುರೆ ಕಣೆ."

"ಬಳ್ಳಾರಿಲಿ ಏನು ಬ್ಯದರೂ, ಆಟೊಂತರ ಕೂಲಿ ಕೊಡಕ್ಕೆ?"

"ಏನೂ ಬ್ಯಳಿತಯಿಲ್ಲ ಕಣೆ, ಅಲ್ಲಿ ಮಣ್ಣಿಗೆ ಅಂತ ಬ್ಯಲೆ ಬಂದವಂತೆ, ಆ ಮಣ್ಣು ಬಗದು ಲಾರಿಗೆ ತುಂಬವರಾಯ್ತು ಸಂಜೆವೊತ್ತಿಗೆ ನಿನ್ನ ಕೈಗೆ ನೂರೈವತ್ತು ರೂಪಾಯಿ ಕೊಡ್ತರೆ."

"ಮಳೆಗೇನೊ ಬ್ಯಲಿಬಂದಿರದ ನೋಡಿದ್ದೀನಿ. ಮಣ್ಣಿಗೂ ಬ್ಯಲೆ ಬಂದಿದ್ವತೆ?"

"ಮಣ್ಣು ಅಂದ್ರೆ ಅಂತಿಂಥ ಮಣ್ಣಲ್ಲ ಕಣಮಾವ, ಅದ ವಸ್ತಿ ತಗಂಡು ಆಡಸಂಗೇಯಿಲ್ಲ ಸೀದ ಕಬ್ಬಿಣದ ಪ್ಯಾಕ್ಟ್ರಿಗೆ ಕಳುಸಬಹುದು."

"ಓಹೊಹೊ, ಈ ಕಮ್ಮಣ್ಣುಗುಂಡಿತಯಿತ್ತಲ್ಲ ಅಂತ ಮಣ್ಣು ಅನ್ನು?"

"ಊ, ಇದೀ ಬಳ್ಳಾರಿ ಗುಡ್ಡಗಳೆಲ್ಲ ಚಿನ್ನದ ಗುಡ್ಡಾಗ್ಯವೆ. ಅವ ಈ ರಾಜಕಾರಣಿಗಳೆಲ್ಲ ಬಗದೂ ಬಗದೂ ವರದೇಸಕ್ಕೆ ಕಳಿಸಿ, ದುಡ್ಡೆಷ್ಟು ಮಾಡ್ಯವುರೆ ಅಂತೀ?"

"ಏಟು ಮಾಡಿದ್ದರೂ?"

"ಈ ಕುಮಾರಸ್ವಾಮಿಗೆ ನೂರೈವತ್ತು ಕೋಟಿ ಕೊಟ್ಟಿದ್ದೀನಿ ಅಂತಾ ಅವುನಲ್ಲ ಅವುನಾದಾಯ ದಿನಕೆ ಒಂದು ಕೋಟಿ ರೂಪಾಯಂತೆ."

"ಅಯ್ಯೋ, ಅಯ್ಯೋ ಒಸಿ ದುಡ್ಡೇನ್ಲ?"

"ಏ ಈ ಉಗ್ರಿ ಸುಳ್ಳೇಳತನೆ ಕಣ ಮಾವ" ಎಂದಳು ಜುಮ್ಮಿ.

"ನಾನ್ಯಾಕೆ ಸುಳ್ಳೇಳಲಿ. ಈ ಪ್ರಪಂಚದಲ್ಲಿರೊ ವಳ್ಳೆ ಕಾರನ್ನೆಲ್ಲ ಖರೀದಿ ಮಾಡ್ತ ಅವುರೆ, ಏಳೆಂಟು ಹೆಲಿಕಾಬುಟ್ರು ತಂದವುರೆ ಅಂದ್ರೆ, ಆ ಗುಡ್ಡ ಆಗಿತಾಯಿರೋರ ಆದಾಯ ನಿನಿಗೇ ಗೊತ್ತಾಗ ಬೇಕಪ್ಪ."

"ಅಲ್ಲ ಕಂಡ್ರ ಅಲ್ಲಿ ಗುಡ್ಡಕ್ಕೆ ಅಂತ ಬ್ಯಲಿಬಂದದೆ ಅನ್ನದಾದ್ರೆ, ಅದು ಸರ್ಕಾರಕ್ಕೆ ಸೇರಬೇಕು. ಅಲ್ಲಿ ಆದಾಯನೂ ಸರ್ಕಾರಕ್ಕೆ ಸೇರಬೇಕಲವೆ?" ಎಂದ ಕಾಳಮಾವ.

"ನೀನೇಳದ ಒಪ್ಪಿಗಳನ ಕಣಮಾವ, ಮೈಸೂರಿಂದ ಬೆಂಗಳೂರಿಗೆ ರೋಡು ಮಾಡಕ್ಕಾಗದೆ ಕೇಣಿ ಕರದು ಕಂತಾಟು ಕೊಟ್ಟರೋರು, ಇನ್ನ ಗುಡ್ಡ ಕೃಸಿಯಕ್ಕಾದತೆ? ಅದ್ಕೆ ಯಾರ್ಯಾರು ಬಗಿತರೊ ಅವುರಿಗೆ ಕೊಟ್ಟವುರೆ ಅವುರು. ಎತ್ತು ಸತ್ತಾಗ ರಣದ್ದು ಬತ್ತವೆ ನೋಡು ಅಂಗೆ ಬಳ್ಳಾರಿ ಗುಡ್ಡಕ್ಕೆ ಮುತ್ತುಗೆ ಹಾಕಿ ಬಗದೂ ಬಗದೂ ಕಾಸು ಮಾಡಿಕತ್ತಾ ಅವ್ರುರೆ."


"ಸರಿ ಕಂಡ್ರ ಸರ್ಕಾರ್ರುಂಗೆ ಬುಟ್ಟದೆ ಅಂತ."

"ಸರ್ಕಾರಕ್ಕೆ ಮೂರು ಕಾಸು ಟ್ಯಾಕ್ಸ್ ಕೊಟ್ಟು ರಾಜಕಾರಣಿ ಜೇಬಿಗೆ ಮೂರು ಕೋಟಿ ಕೊಟ್ಟಾಯ್ತು, ನೀನೇಟಾರ ಬಗದು ತುಂಬಕಂಡೋಗಬವುದು."

"ಅಂಗರೆ ಬಳ್ಳಾರಿ ಗುಡ್ಡದಿಂದ ರಾಜಕಾರಣಿಗಳು ಬದಿಕೋದ್ರು ಅನ್ನು?"

"ಬದಕದ? ಇನ್ನು ಐದು ತಲೆಮಾರು ತಿಂದ್ರು ಮುಗಿಯದಿಲ್ಲ ಅಷ್ಟು ಆಸ್ತಿ ಆಡವು ಮಾಡಿಕಂಡು ಬುಟ್ರು. ಅಷ್ಟಕೆ ಸುಮ್ಮನಾಗಿಲ್ಲ ಕಣಮಾವ, ಕೋಟಿಗಟ್ಲೆ ಖರ್ಚು ಮಾಡಿ ಯಲಕ್ಷನ್ನಿಗೂ ನಿಲ್ತರೆ, ಗೆಲ್ತರೆ, ಮಂತ್ರಿ ಆಯ್ತರೆ. ಅಂತೂ ಇನ್ನ ಮುಂದೆ ನಮ್ಮ ಆಳೋರೆ ಅವ್ರುರು. ಸಣ್ಣ ಪುಟ್ಟ ಲೀಡ್ರು ಕತೆ ಮುಗಿತು."

"ಅಂಗರೆ ಊರ ಕೈಲಸ ಮಾಡಿಕಂಡು ಜನಗಳ



ಜ್ವತೆ ಇದ್ದಕಂಡು ಅರ್ಧ ಟೀ ಕುಡುಕಂಡು ಓಟು ಕೇಳೋರ ಕತೆ ಮುಗಿತು ಅನ್ನು?"

"ಅಂಥ ಸಾಮಾನ್ಯ ಲೀಡ್ರು ಕತೆ ಮುಗದಂಗೆಯ."

"ಇಸಿಸಿ ಕೋಟಿ ಶ್ಯಾಟದೆದ್ದಿಗೆ ಲಕ್ಷದ ಕೂದ್ದೇನು ಮಾಡ್ನವುಲ? ಯಲ್ಲ ಹುದಿರೋಯ್ತವೆ" ಎಂದ ಸೀರ.

"ಏನು ಬ್ಯಾಡಪ್ಪ, ಚೆನ್ನಿಗಪ್ಪ ಸುಮ್ಮನೆ ಬಳ್ಳಾರಿ ಕಡಿಕೆ ಹೋಗಿದ್ಕೆ ಜನಾರ್ದನ ರೆಡ್ಡಿ ಅನ್ನೋನು ನೂರೈವತ್ತು ಕೋಟಿ ಕೊಟ್ಟು ಕಳಿಸ್ಯವುನೆ. ಇನ್ನುಳಿದೋರು ಏಟು ಕೊಟ್ರು, ಇವುನೇನು ಮಡಿಕಂಡ, ಕುಮಾರಣ್ಣನ ಕೈ‌ಗೆ ಟು ಕೊಟ್ಟ ಅನ್ನದೆ ಒಂದು ಗಲಾಟ ನ್ನಡಿತಾ ಅದೆ."

"ಚೆನ್ನಿಗಪ್ಪಾರ್ಲ?"

"ವಾಟಸ್ಸೆ ಬತ್ತಾ ಅವುನೆ, ಅವುನ್ನೆ ಕೇಳು?"

"ಚೆಲುವಾಂತ ಚೆನ್ನಿಗನೆ ನಲಿದಾಡು ಬಾ. ಬಳ್ಳಾರಿ ಗಣಿಯೊಡನೆ ಕುಣಿದಾಡುಬಾರ, ಚೆಲುವಾಂತ..." ಎಂದು ವಾಟಸ್ಸೆ ಶರಾಪಿನ ಉಯಿಲನ್ನು ಭರತನಾಟ್ಯದ ಭಂಗಿಗೆ ಬಳಸಿಕೊಂಡು ನಿಂತ. ನಗಾಡಿದ ಜುಮ್ಮಿ,

"ಚೆನ್ನಿಗಪ್ಪನ ಸುದ್ದಿ ಹೇಳ್ಲ" ಎಂದಳು.

"ಒಬ್ಬ ನಾಯಿ ಮಾತಾಡಿದಂಗೆ ಮಾತಾಡೊ ಮಂತ್ರಿಯವನಲ್ಲಕ್ಕ, ಅವುನೆ ಚೆನ್ನಿಗಪ್ಪ. ಅವುನು ಮೊದ್ಲು ಪೊಲೀಸ್ ಇಲಾಖೆಲಿದ್ದ, ಒನ್ನಾಪಾನೆ ಟೈಂ ಇ ಈಸ್ ಮೈ ಕ್ರೋಜ್ ಪ್ರೆಂಡ್."

"ಇನಿಸ್‌ಪೆಟ್ಟಾಗಿದ್ದೇ?"

"ಇನ್ಸ್‌ಪೆಕ್ಟರಾಗಿದ್ದೋರು ಅಂಗೆ ಮಾತಾಡ್ತರೆ? ಇವುನು ಕಾನ್ಸ್‌ಟೇಬಲ್ಲಾಗಿ, ಪಿಸಿಯಾಗಿ ಕಟ್ಟ ಕಡಿಗೆ ಹೆಡ್‌ಕಾನ್ಸ್‌ಟೇಬಲ್ಲಾಗಿ ಕೋದಂಡರಾಮಯ್ಯನಿಗೆ ಹೆದ್ವೇಕಾದನಂತೆ."

"ಕೋದಂಡರಾಮಯ್ಯಾರು?"

"ಅವುನು ಕಾಂಗ್ರೆಸ್ಸಿಗೋಗಕ್ಕೆ ರೆಡಿಯಾಗಿರೊ ಆಪಿಂದ ಲೀಡ್ರು. ಇದ್ರು ಮೊದ್ಲು ಪೊಲೀಸ್ ಕಮಿಷನರ್ರಾಗಿದ್ದ, ಅದ್ಕು ಮುದ್ಲು ಎಸ್ಪಿಯಾಗಿದ್ದ, ಆಗ ಈ ಚೆನ್ನಿಗಪ್ಪ ಕೋದಂಡರಾಮಯ್ಯನ ಹೆಸರೇಳಿ ದುಡ್ಡು ಕಲಕ್ಟ್ ಮಾಡಿದ್ದನಂತೆ."

"ಓ ಅಂಗರಿವುನು ಹಳೆ ಗಿರಾಕಿ ಅನ್ನು?" ಎಂದ ಸೀರ.

"ಊ ಚಿಗಪ್ಪ, ಓಲ್ಡ್ ಪರಸನ್ಸ್ ಚಟಗೇಡಿ. ಚಟಬುಡು ಅಂದ್ರೆ ಗಂಡನ್ನ ಬುಟ್ರು ಆದ ಬುಡದಿಲ್ಲ ಅಂದಳಂತೆ ಚೆನ್ನಿ. ಅಂಗೆ, ಈ ಚೆನ್ನಿಗಪ್ಪ ಮಂತ್ರಿಯಾದ್ರು ಕಲಕ್ಷನ್ ಬುಟ್ಟಿಲ್ಲ, ಅದ್ಕೆ ಈಗ ಕುಮಾರಣ್ಣನ ಕುತ್ತಿಗೆಗೆ ಬಂದಿರದು" ಎಂದ ವಾಟಸ್ಸೆ.

"ಏನು ಆಗದಿಲ್ಲ ಕಣೊ, ಯಲ್ಲಾ ಸರಿಯಾಯ್ತದೆ."

"ಅದ್ಯಂಗೊ ಉಗ್ರಿ?"

"ಬಿಜೆಪಿಗಳಾಗ್ಲೆ ಜನಾರ್ದನ ರೆಡ್ಡಿ ಹಿಡುದು ಆದಿಮ್ಯವುರೆ."

"ಆದುಮ್ಲಿ ಕಣೊ. ಆದ್ರು ಅವುನು ಮಾಡೊ ಡ್ಯಾಮೇಜ ಮಾಡಿ ಮುಗಿಸಿದ್ನೇ?"

"ಈ ಬಿಜೆಪಿ ಬಡ್ಡೆತ್ತವು ಜ್ವತೆ ದಳದೋರು ಸೇರಿದ್ದ ಅಲ್ಲ ಕಂಡ್ರ" ಎಂದ ಸೀರ.

"ಗತಿಗೆಟ್ಟೋರ ಜ್ವತೆ ಮತಿಗೆಟ್ಟೋರು ಸೇರಿಕಂಡ್ರೆ ಏನಾಗಬೇಕೊ, ಅದಾಯ್ತಾ ಅದೆ."

"ದ್ಯಾವೇಗೌಡ್ರಾಕೊ ಸುಮ್ಮನವುನಲ್ಲಾ" ಎಂದ ಸೀರ.

"ಸುಮ್ಮನವುನೆ ಅಂದ್ರೆ, ಏನೊ ಮಾಡ್ತ ಅವುನೆ ಅಂತ ಚಿಗಪ್ಪಾ."

"ಅಂಗಂತಿಯಾ?"

"ಅನ್ನದೇನು, ನಿನಿಗೊತ್ತಿಲ್ಲವೆ?"

" !?"


-ಬಿ. ಚಂದ್ರೇಗೌಡ

Zero Hour ಮುನ್ನ

1. ಅಗ್ನಿ ಇನ್ಸಾಟ್ ನೀರು ಪಾಲಾಗಿದ್ದೇಕೆ?
   a) ರಾಹುಕಾಲದಲ್ಲಿ ಹಾರಿಸಿದ್ದಕ್ಕೆ.
   b) ತಿರುಪತಿ ತಿಮ್ಮಪ್ಪನಿಗೆ ಪೂಜೆ ಮಾಡದೇ ಇದ್ದದ್ದಕ್ಕೆ
   c) ಹಾರಿಸುವಾಗ ಬೆಕ್ಕು ಎಡಕ್ಕೆ ಹೋಗಿದ್ದಕ್ಕೆ
   d) 'ಹಾರವ(ರ)ತಟ್ಟೆ'ಗಳು 'ಇನ್ನೇನಾಗುತ್ತವೆ?
   e) ಪಟಾಕಿಗಳು ಉರಿದುರಿದು ಬೀಳಲೇಬೇಕಲ್ಲವೆ?
   f) d & e ಸರಿ
2. ಬಳ್ಳಾರಿಯ 150 ಕೋಟಿ ಕೇಸ್ ಏನನ್ನು ಸೂಚಿಸುತ್ತದೆ?
   a) ಕಳ್ಳ ಬಳ್ಳಾರಿ ರೆಡ್ಡಿಗಳು V/s ಅಡುವಿದೊಂಗ ಚೆನ್ನಿಗಪ್ಪ
   b) "150 ಕೋಟಿ.... It is 'mine'...." ಎಂದಿರುಂತೆ ಚೆನ್ನಿಗ
   c) ಅದುರಿಗಾಗಿ ಉದುರಿ ಹೋಗಲಿರುವ ಚಿಟ್ಟಿಗಳು
   d) ಮೇಲಿನೆಲ್ಲವೂ!
3. ವೆನ್‌ನ ನಕ್ಷೆ ಹಾಕಿ ಬಿಡಿಸಿ
   ಪ್ರಜಾಪ್ರಭುತ್ವದ ಒಂದು ಶಾಲೆಯ 224 ವಿದ್ಯಾರ್ಥಿಗಳ ಪೈಕಿ 100 ಜನ ದರೋಡೆತನದಲ್ಲಿ, 165 ಜನ ರೋಡ್ ರಾಬರಿಯಲ್ಲಿ ನಿರತರಾಗಿದ್ದಾರೆ. 9 ಜನ ಕಣ್‌ಕಣ್ ಬಿಡ್ತಾ ಸುಮ್ಮನೆ ಕುಳಿತಿದ್ದಾರೆ. ಹಾಗಾದರೆ ದರೋಡೆತನ, ರೋಡ್‌ರಾಬರಿ ಎರಡರಲ್ಲೂ ನಿರತರಾದ ಆಲ್‌ರೌಂಡರ್ಸ್ ಎಷ್ಟು?
4. "ಮುಸ್ಲಿಮರ ದಮನಕ್ಕೆ ನಕ್ಸಲರ ನೆರವು ಪಡೆಯುತ್ತೇವೆ" - ಬಾಳ್‌ಠಾಕ್ರೆ. ನೀವೇನು ಹೇಳ್ತೀರಿ?
   a) ಹೇಳೋದೇನ್ ಬಂತು ಮಣ್ಣು.. ಮೊದಲು ಹೇಳಿದವನನ್ನು ಮಣ್ಣು ಮಾಡಿ
   b) ಹೇಳೋದೇನ್ ಬಂತು ಮಣ್ಣು.. ಮೊದಲು ಹೇಳಿದವನನ್ನು ಮಣ್ಣು ಮಾಡಿ
   c) ಹೇಳೋದೇನ್ ಬಂತು ಮಣ್ಣು.. ಮೊದಲು ಹೇಳಿದವನನ್ನು ಮಣ್ಣು ಮಾಡಿ
   d) ಹೇಳೋದೇನ್ ಬಂತು ಮಣ್ಣು.. ಮೊದಲು ಹೇಳಿದವನನ್ನು ಮಣ್ಣು ಮಾಡಿ
5. 'ಕೊಲೆಗಡುಕ' ಎಂದ ಕಳ್ಳ ಡಿ.ಟಿ. ಜಯಕುಮಾರ್, ಅನಿಸಿಕೊಂಡ ರಮೇಶ್ ಕುಮಾರ್ ಸದನದಲ್ಲೇ ಕಿತ್ತಾಡಿದ್ದು ಏನನ್ನು ಸೂಚಿಸುತ್ತದೆ?
   a) ಕಳ್ಳರು ಒಮ್ಮೊಮ್ಮೆ ಸತ್ಯ ಹೇಳುತ್ತಾರೆ.
   b) ಕೊಲೆಗಡುಕರು ವೈರಿಗಳನ್ನು ಕೊಲ್ಲುವ ಮೊದಲು ಮೈಮೇಲೇರಿ ಹೋಗಿ ಒಂದು ಧಮಕಿ ಕೊಡುತ್ತಾರೆ.
   c) ರೌಡಿಗಳ ಅಡ್ಡಾದಲ್ಲಿ ಇವೆಲ್ಲ ಕಾಮನ್ ಬಿಡಿ....
   d) ಮೇಲಿನೆಲ್ಲವೂ.



ಉತ್ತರಗಳು :
1. f 2. d
3. ಒಟ್ಟು ವಿದ್ಯಾರ್ಥಿಗಳು =T=224
ಕಳ್ಳಕುಳಿತವರು=G=9
So, ಒಟ್ಟು ಕಲಿಯುವವರು=224-9=215
ದರೋಡೆಕೋರರು=D=100
ರೋಡ್ ರಾಬರಿಯವರು=RR=165



ದರೋಡೆಕೋರರು+ರೋಡ್‌ರಾಬರಿಯವರು
=100+165=265
ಆದರೆ ಒಟ್ಟು ಕಲಿಯುವವರ ಸಂಖ್ಯೆ 215 ಇದೆ. ಅಂದರೆ (265-215)=50 ಜನರು ದರೋಡೆಕೋರರೂ ಹೌದು, ರೋಡ್ ರಾಬರಿ ಮಾಡುವವರೂ ಹೌದು.
4. a, b, c, d 5. d

ಘಮಾಡಸ್ತದ ಕೇದಿಗೆ

ನೋಡಿ ಎಷ್ಟು 'ದಿನವಾಗಿತ್ತು! ಮೂಸಿ ವರ್ಷಗಳೇ ಉರುಳಿದ್ದವು.

ಹಸಿರು ಗರಿಗಳ ಅಂಚಿನಲ್ಲಿ ಮೊನಚಾದ ಮುಳ್ಳು. ಒಳಗಿನ ಗರಿಗಳ ಸುತ್ತು ನಸುಹಸಿರು, ನಸು ಹಳದಿ, ಅಲ್ಲಿಯೂ ಚಿಕ್ಕ ಮುಳ್ಳುಗಳು. ಒಳಗಿನ ಸುತ್ತು ಪೂರ್ಣ ಹಳದಿ. ಮುಟ್ಟಲೂ ತುಂಬ ಕೋಮಲ. ಗರಿಗಳನ್ನು ಬಿಡಿಸಿ ಇಣುಕಿದರೆ ಪರಾಗಗಳುಳ್ಳ ತೆನೆ.

ಕೇದಿಗೆಯ ಹೂ ಕೊಂಡುಕೊಂಡೆ. ಮೈಸೂರಿನಿಂದ ಬರುವಾಗ ರಾಮನಗರದ ಈಚೆಗಿರುವ ಗುಡ್ಡಗಳ ಜಾಗದಲ್ಲಿ ಬೆಳೆಯುತ್ತವೆ. ಅಲ್ಲಿ ಸೀತಾಫಲ, ರಾಮಫಲದ ಹಣ್ಣುಗಳೂ ಅಷ್ಟೇ ಹುಲುಸಾಗಿ ಬರುತ್ತವೆ. ಕೇದಿಗೆ ಹೂ ಹಿಡಿದು ನಿಂತ ಪುಟಾಣಿ ಹುಡುಗರು.

ಸಂಪಿಗೆ ಮತ್ತು ಗುಲಾಬಿಯನ್ನು ಸೇರಿಸಿ ಪಾಕ ಇಳಿಸಿದಂತೆ ಸುಗಂಧ. ಒಂದು ಎಸಳು ಕೇದಿಗೆ ಇದ್ದರೆ ಸುತ್ತ ಪರಿಮಳ ಹರಿಹಾಯುತ್ತಿರುತ್ತದೆ. ಕೇದಿಗೆ ಹೂ ಗುಪ್ತ ಪೊದೆಯಲ್ಲಿ ಬಿಡುತ್ತದೆ. ಪೊದೆಯಲ್ಲಿ ಹೂ ಅರಳಿರುವುದು ಗೊತ್ತಾಗುವುದೂ ವಾಸನೆಯ ಮೂಲಕ. ವಾಸನೆ ಬಂದ ಕಡೆಗೆ ಹೋಗಿ ಹುಡುಕಿ ಹೂ ಕೀಳುತ್ತಾರೆ.

ಎರಡಡಿ ಉದ್ದದ ಹೂವು. ನನ್ನ ಕಚೇರಿಯ ಕೋಣೆಯಲ್ಲಿ ಇಟ್ಟೆ. ಕಚೇರಿಯ ಎದುರಿಗೂ ಪಸರಿಸಿದ ವಾಸನೆ. ಪ್ರವೇಶಿಸಿದೊಡನೆ ಕ್ರಮೇಣ ಬಾಡುತ್ತಿರುವ, ಆದರೆ ಸುಗಂಧ ಕಳೆದುಕೊಳ್ಳದ ಹಳದಿ ಅದ್ಭುತ.

ಮಳವಳ್ಳಿ ಕಡೆಗೆ ಇದನ್ನು ತಾಳೆಹೂವು ಅನ್ನುತ್ತಾರಂತೆ. ಗುಂಡ್ಲುಪೇಟೆಯ ವ್ಯಕ್ತಿಯೊಬ್ಬ ಕೂಡ ಅದನ್ನೇ ಹೇಳಿದ. ನಾನು 'ಕೇದಿಗೆ' ಎಂದು ಒತ್ತಾಯದಿಂದ ವಾದಿಸಿದೆ. ಅಷ್ಟರಲ್ಲಿ ದಾವಣಗೆರೆಯ




ಹನುಮಂತಪ್ಪ ಬಂದ. ನೆಲ, ಸಸ್ಯಗಳ ಬಗ್ಗೆ ಅಪಾರ ಪ್ರೀತಿಯುಳ್ಳ ಹುಡುಗ ಈತ. ದಲಿತ ಸಂಘರ್ಷ ಸಮಿತಿಯ ಸಂಚಾಲಕ.

ಈತ ಕೇದಿಗೆ ಹೂ 'ತಾಳೆ' ಎಂಬುದನ್ನು ಅಲ್ಲಗಳೆದ. ತನ್ನ ಹೊಲದ ಹತ್ತಿರ ತಾಳೆ, ಈಚಲು, ಸಂಪಿಗೆ ಮೂರೂ ಇರುವುದನ್ನು ವರ್ಣಿಸಿದ; ಮೂರಕ್ಕೂ ಇರುವ ವ್ಯತ್ಯಾಸ ವಿವರಿಸಿದ.

ಈ ಹುಡುಗ ಎಷ್ಟು ಸರಳ, ವ್ಯಾವಹಾರಿಕ, ಭಾವುಕ ವ್ಯಕ್ತಿ!

ಸಂಪಿಗೆಯ ಸುಗಂಧ ನಮ್ಮ ಮಾತುಗಳನ್ನು ಆವರಿಸಿತ್ತು.



ಮೇ 22, 1988


ಫ್ರಾನ್ಸ್‌ನಲ್ಲಿ ಗುಲಾಬಿ

ಆದರೆ ಈ ಸಲ ರಾಜಕೀಯ ಸುದ್ದಿಯಲ್ಲಿ ಗುಲಾಬಿ ಇದೆ.

ಫ್ರಾನ್ಸಿನ ಸಮಾಜವಾದಿ ಮಿತ್ತೆರಾ ಮತ್ತೆ ಏಳು ವರ್ಷಕ್ಕೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಸೋಷಲಿಸ್ಟ್ ಸಂಕೇತವಾದ ಗುಲಾಬಿ ನಳನಳಿಸತೊಡಗಿದೆ.

ಸೋಷಲಿಸಂ ಭಾರತದಲ್ಲಿ ಬಾಡುತ್ತಿರುವಾಗ ಫ್ರಾನ್ಸ್, ಸ್ಪೇನ್, ಗ್ರೀಸ್ ದೇಶಗಳಲ್ಲಿ ಸಮಾಜವಾದಿಗಳು ವಿಜೃಂಭಿಸುತ್ತಿರುವುದು ಕುತೂಹಲಕರ.


ಫ್ರಾನ್ಸ್‌ನಲ್ಲಿ ಸೋಷಲಿಸ್ಟರ ಏಳಿಗೆಯತ್ತ ನೋಡಬಹುದು. ಅಲ್ಲಿಯ ಕಮ್ಯುನಿಸ್ಟ್ ಪಕ್ಷ ತುಂಬ ಪ್ರಬಲವಾಗಿತ್ತು, ಅದಕ್ಕೆ ಪ್ರತಿಸ್ಪರ್ಧಿಯಾಗಿ ದಿಗಾಲ್ ಅವರ ಬಲಪಂಥೀಯ ಗಾಲಿಸ್ಟ್ ಪಕ್ಷವಿತ್ತು, ದಿಗಾಲ್ ಬಲಪಂಥರ ರಾಜಕೀಯ ಮಾಡುತ್ತ ಹೋದಂತೆ ಕಮ್ಯುನಿಸ್ಟರು ಫ್ರಾನ್ಸಿನ ಕಾರ್ಮಿಕರ ಮೂಲಕ ಜೋರಾಗಿ ಬೆಳೆದರು. ಇವರಿಬ್ಬರ ನಡುವೆ ಇದ್ದ ಸೋಷಲಿಸ್ಟ್ ಪಕ್ಷ ದಿಗಾಲ್‌ರ ಸಾವಿನ ನಂತರದ ರಾಜಕೀಯದ ನಡುವೆ ಬೆಳೆಯುತ್ತಾ ಹೋಯಿತು. ಕಮ್ಯುನಿಸ್ಟರ ಸರ್ವಾಧಿಕಾರದ ನಿಲುವು ಮತ್ತು ಗಾಲಿಸ್ಟರ ಶ್ರೀಮಂತರ ಪರ ನಿಲುವು-ಇವೆರಡೂ ಫ್ರೆಂಚರಿಗೆ ಇಷ್ಟವಾಗಲಿಲ್ಲ. ಮಿತ್ತೆರಾ ತಮ್ಮ ಸೋಷಲಿಸ್ಟ್ ಯಕ್ಷಿಣಿ ಶುರುಮಾಡಿದರು. ಇವರ ಸಿದ್ಧಾಂತದ ಪ್ರಕಾರ ಸಮಾಜವಾದದ ಜನತಂತ್ರ, ಆರ್ಥಿಕ ಕಾರ್ಯಕ್ರಮ, ಸಮಾಜೀಕರಣ ಮತ್ತು ಕಾರ್ಮಿಕರ ಹಿತಾಸಕ್ತಿಗಳೆಲ್ಲವೂ ಒಟ್ಟಾಗಿ ಹೋಗುವುದು ಸಾಧ್ಯವೆಂದು ಫ್ರೆಂಚರು ಮನಗಂಡರು. 1981 ರಲ್ಲಿ ಮಿತ್ತೆರಾ ಅವರ ಸಮಾಜವಾದಿ ಸರ್ಕಾರ ಬಂದು ಕಮ್ಯುನಿಸ್ಟರೂ ಮಿತ್ತೆರಾ ಸರ್ಕಾರದಲ್ಲಿ ಪಾಲ್ಗೊಂಡರು. ಪಾಲ್ಗೊಂಡ ಕೆಲಕಾಲದಲ್ಲೇ ಕಮ್ಯುನಿಸ್ಟರ ವರಸೆಗಳನ್ನು ಜನಕ್ಕೆ ತೋರಿಸಿ ಅವರನ್ನು ಸಂಪುಟದಿಂದ ಹೊರಗೆ ಹಾಕಲಾಯಿತು. ಒಮ್ಮೆ ಶೇ. ಹದಿನೈದರಷ್ಟು ಮತಗಳನ್ನು ಪಡೆದಿದ್ದ ಕಮ್ಯುನಿಸ್ಟ್ ಪಕ್ಷ ಇತ್ತೀಚೆಗೆ ಶೇ. ಆರಕ್ಕೆ ಇಳಿದು ವಿನಾಶದ ಅಂಚು ತಲುಪಿತು.



ಒಮ್ಮೆ ಕಮ್ಯುನಿಸ್ಟ್ ಮಾರ್ಗಕ್ಕೆ ಹೆದರುತ್ತಿದ್ದ ಫ್ರೆಂಚರು ಈಗ ತೀವ್ರ ಬಲಪಂಥೀಯ ಲೇಪೆನ್ ಎಂಬ ಉಗ್ರಗಾಮಿಗೆ ಹೆದರುತ್ತಿದ್ದಾರೆ. ಪರದೇಶದ ಜನರು ಫ್ರಾನ್ಸ್‌ಗೆ ವಲಸೆ ಬರುವುದನ್ನು, ಫ್ರಾನ್ಸ್‌ನ ಸಂಪತ್ತು ಬಳಸುವುದನ್ನು ವಿರೋಧಿಸುವ ಲೇಪೆನ್ ಫ್ಯಾಸಿಸ್ಟ್ ಸಂಕೇತದೊಂದಿಗೆ ಅರಚುತ್ತಾನೆ; ಹಿಟ್ಲರನ ಸ್ವಾಸ್ತಿಕಾದ ಇನ್ನೊಂದು ರೂಪ ಬಳಸುತ್ತಾನೆ. ಈತನ ಫ್ಯಾಸಿಸ್ಟ್ ಗುಂಪನ್ನು ಬಗ್ಗು ಬಡಿಯುವುದು ಅಧ್ಯಕ್ಷ ಮಿತ್ತೆರಾ ಅವರ ಮುಂದಿನ ಕ್ರಮ.

ಎಪ್ಪತ್ತೊಂದು ವರ್ಷದ ಮಿತ್ತೆರಾ ಸೋಷಲಿಸಂನ ಆರ್ಥಿಕ ಸಿದ್ಧಾಂತವನ್ನು ಮಾತ್ರ ಪ್ರತಿನಿಧಿಸುವುದಿಲ್ಲ. ಸ್ಮಿಮಿತ ಕಳೆದುಕೊಳ್ಳದೆ ಸರಳಸುಂದರವಾಗಿ, ವ್ಯಂಗ್ಯ ವಿನೋದಗಳನ್ನು, ಗಂಭೀರ ಚಿಂತನೆಯನ್ನು ಬೆರೆಸಿ ಅದ್ಭುತ ಭಾಷಣ ನೀಡಬಲ್ಲ ಮಿತ್ತೆರಾ ಫ್ರಾನ್ಸ್‌ನ ಜಾಣತನ, ಸೂಕ್ಷ್ಮಜ್ಞತೆ, ಸಾಂಸ್ಕೃತಿಕ ಕಾಳಜಿಗಳನ್ನು ಕೂಡ ಪ್ರತಿನಿಧಿಸುತ್ತಾರೆ. ಪ್ರಕೃತಿ, ಸಂಸ್ಕೃತಿ, ರಾಜಕೀಯ, ಘಾಟಿತನವೆಲ್ಲ ಈತನಲ್ಲಿ ಮತ್ತು ಈತನ ಸಮಾಜವಾದದಲ್ಲಿ ಮೇಳೈಸಿವೆ.

ಕುಮಾರಸ್ವಾಮಿ ಏಕೆ ಯಾವಾಗಲೂ ಕಪ್ಪು ಪ್ಯಾಂಟು, ಬಿಳಿ ಶರ್ಟ್ ಹಾಕಿಕೊಳ್ಳುತ್ತಾರೆ?



ಎಂ. ಶಿವಕುಮಾರ್, ಕುಮಟಾ
ಕಲಿಸದೇ ಬರುವ ವಿದ್ಯೆ ಯಾವುದು?
* ತಾಯಿಯ ಸ್ಪರ್ಶ ಗುರುತಿಸುವ ಜ್ಞಾನ.

ಎನ್.ವಿ. ಹಾಲಪ್ಪ, ಶಿವಮೊಗ್ಗ
ದೇವೇಗೌಡರು ಭಾರತರತ್ನ ಪ್ರಶಸ್ತಿಗೆ ಅರ್ಹರಲ್ಲವೇ?
* ಕುಮಾರ ಪ್ರಧಾನಿ ಆದಾಗ ಅದು ಗ್ಯಾರಂಟಿ ಅಂತೆ.


ಕೆ.ಎನ್. ನಾರಾಯಣರೆಡ್ಡಿ, ಕೆಜಿಎಫ್
ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ, ಆದರೆ ದೂರದ ಹೆಣ್ಣು?
* ಮನಸ್ಸಿಗೆ ತಣ್ಣಗೆ.

ಮಂಚಾಲಿ ಗುರುರಾಜಚಾರು, ಬಳ್ಳಾರಿ
ಈಗಿನ ಕಾಲದ ರಾಜಕೀಯ ನಾಯಕರು ತಮ್ಮ ಸಂಸಾರಕ್ಕೆ ಗಮನ ಕೊಡಲ್ಲ ಏಕೆ?
* ಅಯ್ಯೋ ಪಾಪಿ, ದೇವೇಗೌಡ ಕಣ್ಣೆದಿರು ಇರುವಾಗ ಈ ಪ್ರಶ್ನೆ ಕೇಳ್ತಿಯಲ್ಲಾ...

ಕೆ.ಪ್ರಾಣೇಶ್ ರಾವ್, ಹಗರಿಬೊಮ್ಮನಹಳ್ಳಿ
ಕುಂಬಮೇಳಗೆ ಮಾಲೆ ಹಾಕಿದರೆ ಮಾತ್ರ ಪ್ರವೇಶನಾ?
* ಜಯ'ಮಾಲೆ'ಗೆ ಸಿಕ್ಕಿತಂತೆ!

ಈಶ್ವರ್, ಬೆಂಗಳೂರು
ಗೌರಿ ದೇವೇಗೌಡ್ರಿಗೆ 'ಸಿಸ್ಟರ್' ಅಂತೆ?
* ಒಡಹುಟ್ಟಿದ ಬ್ರದರ್‌ಗೇ ಚೆಂಬು, ಜಾತ್ಯತೀತ ಸಿಸ್ಟರ್‌ಗೆ ನಾಮ, ಬಿಡ್ರಿ ಅತ್ಲಾಗೆ.

ಶ್ರೀಶೈಲ, ಮೈಸೂರು
ಲವ್‌ಗೂ, ಡವ್‌ಗೂ ಏನು ವ್ಯತ್ಯಾಸ?
* ಲವ್ ಜಗಳದ ಪ್ರತೀಕ, Dove ಶಾಂತಿಯ ಸಂಕೇತ.



ಬಿ.ಎಸ್. ಇಮ್ಮಾನುವೇಲ, ಮಸರಕಲ
ದೇವೇಗೌಡರದ್ದು 'ನಿದ್ದೆ ಮತ್ತು ಮುದ್ದೆ' ರಾಜಕೀಯ, ಜೆ.ಎಚ್. ಪಟೇಲರದ್ದು 'ಮಾನಿನಿ ಮತ್ತು ಮದಿರೆ' ರಾಜಕೀಯ, ಧರ್ಮಸಿಂಗ್‌ರದ್ದು 'ಶೇರ್‌ಶಾಯರಿ'ಗಳ ರಾಜಕೀಯ, ಕುಮಾರಸ್ವಾಮಿಯವರದ್ದು?
* 'ಹೆದ್ದಾರಿ-ಬಳ್ಳಾರಿ' ಎಂಬ ಕೋಟಗಳ ರಾಜಕೀಯ.

ನ್ಯಾನ್ಸಿ, ಅರಳಗಡಕಳು
ರೈತರಾಗಿರಲು ಬಯಸುವವರು ಯಾರು?
* ಒರಿಜಿನಲ್ ರೈತರಂತೂ ಅಲ್ಲ.

ಗೌರೀಶ, ಬೆಂಗಳೂರು
Software Engineerಗಳು ಕಂಪ್ಯೂಟರ್‌ಗಳನ್ನು ಮದುವೆ ಆಗುತ್ತಿದ್ದಾರಂತೆ?
* ಆದರೆ ಕಂಪ್ಯೂಟರ್‌ಗಳು Hardware Engineer ಗಳನ್ನು ಬಯಸುತ್ತಿವೆಯಂತೆ.

ಅಂಗಡಿ ತಿಮ್ಮೇಗೌಡ, ಹೆಬ್ಬಾಳ
ನನ್ನ ಹುಡುಗಿಗೆ ನೀರಿನಲ್ಲಿ ಪ್ರೇಮಪತ್ರ ಬರೀಬೇಕು ಅಂತಿದ್ದೀನಿ?
* ಅವಳ ಹೆಸರು ಕಾವೇರಿ ಆಗಿದ್ರೆ ತಮಿಳುನಾಡಿನ ಪಾಲಾಗುತ್ತಾಳೆ, ಹುಷಾರ್!

ವಿಜಯಾ, ಕೊಪ್ಪಳ
ಅಗ್ನಿ, ಇನ್ಸಾಟ್ ಬಂಗಾಳಕೊಲ್ಲಿಗೆ ಉದುರಿಬಿದ್ದವಲ್ಲ?
* ಆಷಾಢದಲ್ಲಿ ಹಾರಿಸಿದರೆ ಇನ್ನೇನಾಗುತ್ತೆ ಅಂತ ಬ್ರಾಹ್ಮಣ ವಿಜ್ಞಾನಿಗಳು ಜನಿವಾರಗಳನ್ನು ತೀಡಿಕೊಳ್ಳುತ್ತಿವೆಯಂತೆ.

ಅಶೋಕ. ಎಂ., ಭದ್ರಾವತಿ
ಸಾಲಕ್ಕೆ ಬಡ್ಡಿ ಅನ್ನೋದು ಇರದಿದ್ದರೆ ಹೇಗಿರುತ್ತಿತ್ತು?
* ಕೊಡೋ ಕೊಡಂಗಿಗಳು ಎಲ್ಲೂ ಇರುತ್ತಿರಲಿಲ್ಲ.

ಬಹುಮಾನಿತ ಪ್ರಶ್ನೆ

ವನಮಾಲ, ಗಬದಿ
ಕುಮಾರಸ್ವಾಮಿ ಏಕೆ ಯಾವಾಗಲೂ ಕಪ್ಪು ಪ್ಯಾಂಟು, ಬಿಳಿ ಶರ್ಟ್ ಹಾಕಿಕೊಳ್ಳುತ್ತಾರೆ?
* ಆತನ ವ್ಯವಹಾರವೆಲ್ಲ ಬ್ಲ್ಯಾಕ್ ಅಂಡ್ ವೈಟ್‌ನಲ್ಲಿ ಕೋಡದಿಂದ.

ಥೀ ತುಂಟಿ!

ಸತ್ತು ಸ್ವರ್ಗಕ್ಕೆ ಹೋದ ವೆಂಕ, ನಾಣಿ, ಸೀನನ ಸೆಕ್ಸ್ ಜೀವನದ ವಿಚಾರಣೆ ಶುರುವಾಯಿತು.

ಅಧಿಕಾರಿ: ನೀನು ಹೆಂಡತಿಗೆ ನಿಷ್ಠನಾಗಿದ್ದೆಯಾ?
ವೆಂಕ: ಇಲ್ಲ, ಆರು ಹೆಂಗಸರೊಂದಿಗೆ ಸಂಬಂಧ ಇತ್ತು!
ಅಧಿಕಾರಿ: ನೀನು?
ನಾಣಿ: ಒಂದೇ ಒಂದು ಸಾರಿ ವಂಚಿಸಿದೆ!
ಅಧಿಕಾರಿ: ನೀನು?
ಸೀನ: ಐವತ್ತು ವರ್ಷದ ಸಾಂಸಾರಿಕ ಬದುಕಿನಲ್ಲಿ ಒಮ್ಮೆಯೂ ವಂಚಿಸದೆ ನಿಷ್ಠೆಯಿಂದ ಇದ್ದೆ!!!

ಕೊನೆಗೆ ತೀರ್ಪು ಹೊರಬಿತ್ತು.

ವೆಂಕನಿಗೆ ಲಡಾಸು ಲೂನಾ, ನಾಣಿಗೆ ಹೊಸ ಬೈಕು, ಸೀನಿಗೆ ಕಾರು ಕೊಡಲಾಯಿತು.

ಆದರೆ ಮಾರನೇ ದಿನ ಸೀನ ರಸ್ತೆ ಬದಿ ಕಾರ್ ನಿಲ್ಲಿಸಿ ಅಳುತ್ತಾ ಕುಳಿತಿದ್ದದ್ದನ್ನು ನೋಡಿ ವೆಂಕ-ನಾಣಿಗೆ ಆಶ್ಚರ್ಯವಾಗಿ 'ಏನಾಯಿತಯ್ಯ?' ಎಂದರು.

"ನನ್ನ ಹೆಂಡತಿ ನಡೆದುಕೊಂಡು ಓಡಾಡ್ತಿದ್ದಾಳಲ್ಲಯ್ಯ" ಎಂದ.



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಈ ವಾರದ ಪ್ರಶ್ನೆ:

ರೆಡ್ಡಿ-ಯಡ್ಡಿಗಳ ಚಡ್ಡಿ ಕಳೆದು ಹೋಗಿದ್ದೆಲ್ಲಿ?

ಕಳೆದ ವಾರದ ನಮ್ಮ ಪ್ರಶ್ನೆ: ಬಳ್ಳಾರಿ ಅದಿರಿಗೆ ಸರ್ಕಾರ ಅದುರುವುದೇಕೆ?
ನಿಮ್ಮ ಉತ್ತರ: ಗಣಿ ರೆಡ್ಡಿ ಸಿಡಿಸಿದ ಡೈನಾಮೈಟ್ ಪ್ರಭಾವ!
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಚ್. ಆರ್. ಎಗಲ್ಟ್, ಹಾಸನ

ಬಸವಣ್ಣ, ಪೆರಿಯಾರ್, ಅಂಬೇಡ್ಕರ್, ಗಾಂಧಿ ಬದುಕಿದ್ದರೆ ಏನು ಮಾಡುತ್ತಿದ್ದರೋ? ಇವನನ್ನು ಮನುವೆನ್ನಿ, ಕೌಟಿಲ್ಯನ ಶನಿ ಸಂತತಿಯೆನ್ನಿ ಅಥವಾ ಶಂಕರಾಚಾರ್ಯರ ಅಪರಾವತಾರವೆನ್ನಿ-ಕುನ್ನಿಯೆನ್ನಿ. ಮೊದಲು ಇವನ ಅಧಿಕ ಪ್ರಸಂಗಿತನವನ್ನು ಕೇಳಿಬಿಡಿ-

ಹೋಮ-ಹವನ, ಯಜ್ಞ-ಯಾಗ, ಜಪ-ತಪ, ಸಾಧನೆ ಇತ್ಯಾದಿ ಯಾವಾಗಲೂ ದೈವಿಕವಾದ ಕಾರ್ಯ ನಡೆಸುವ ಉತ್ತಮ ಜಾತಿಯವರ ಮನೆಗೆ ಏಕಾಏಕಿ ಶೂದ್ರಾದಿಗಳು ಪ್ರವೇಶಿಸುವುದು ಅಷ್ಟು ಶ್ರೇಯಸ್ಸಲ್ಲ!

ಒಂದು ವೇಳೆ ಬಂದರೂ ಅವರು ಯಾವುದೇ ಪದಾರ್ಥವನ್ನೂ ಮುಟ್ಟದಂತೆ ನೋಡಿಕೊಳ್ಳಬೇಕು!


ಅಡುಗೆ ಮನೆ, ದೇವರ ಕೋಣೆ, ಮಲಗುವ ಕೋಣೆಗೆ ಶೂದ್ರಾದಿಗಳು ಅರ್ಥಾತ್ ಎಕೆ-ಎಡಿಗಳು ಪ್ರವೇಶಿಸಲೇಬಾರದು!

ಒಂದು ವೇಳೆ ಪ್ರವೇಶಿಸಿದರೆ ಗೋಮೂತ್ರ ಸಿಂಪಡಿಸಬೇಕು ಅಥವಾ ಪುಣ್ಯಾಹ (ಶುಭದಿನ) ಮಾಡಿಸಬೇಕು!

ಅದು ಸಾಧ್ಯವಾಗದಿದ್ದರೆ, ಅರಿಶಿನ ನೀರನ್ನು ಇಡೀ ಮನೆಗೆ ಪ್ರೋಕ್ಷಣೆ ಮಾಡಬೇಕು ಮತ್ತು ದೇವರನ್ನು ತೊಳೆಯಬೇಕು!

ಮನೆಗೆ ಪ್ರವೇಶಿಸಿದ ಶೂದ್ರಾದಿಗಳ ಪ್ರಭಾವದಿಂದ ಮನೆಯಲ್ಲಿ ವಾಸ್ತು ಕದಲುವುದು; ಯಾರಿಗೂ ನೆಮ್ಮದಿ ಇರುವುದಿಲ್ಲ ಮತ್ತು ಆಗಾಗ ಅಶಾಂತಿ, ಕಲಹದ ವಾತಾವರಣವಿರುತ್ತದೆ!

ಈ ಮಾತನ್ನು ಸಹಸ್ರಾರು ವರ್ಷಗಳ ಹಿಂದೆ ಮನುಧರ್ಮ ಶಾಸ್ತ್ರದಲ್ಲೋ, ಇನ್ನಾವುದೋ ಪುರಾಣದಲ್ಲೋ ಹೇಳಿರಬೇಕೆಂದುಕೊಂಡಿದ್ದೀರಾ?



ಪ್ರಕಾಶ ಶಾಸ್ತ್ರಿ

ಹೋಮ-ಹವನ, ಯಜ್ಞ-ಯಾಗ, ಜಪ-ತಪ, ಸಾಧನೆ ಇತ್ಯಾದಿ ಯಾವಾಗಲೂ ದೈವಿಕವಾದ ಕಾರ್ಯ ನಡೆಸುವ ಉತ್ತಮ ಜಾತಿಯವರ ಮನೆಗೆ ಏಕಾಏಕಿ ಶೂದ್ರಾದಿಗಳು ಪ್ರವೇಶಿಸುವುದು ಅಷ್ಟು ಶ್ರೇಯಸ್ಸಲ್ಲ! ಒಂದು ವೇಳೆ ಬಂದರೂ ಅವರು ಯಾವುದೇ ಪದಾರ್ಥವನ್ನೂ ಮುಟ್ಟದಂತೆ ನೋಡಿಕೊಳ್ಳಬೇಕು! ಮನೆಗೆ ಪ್ರವೇಶಿಸಿದ ಶೂದ್ರಾದಿಗಳ ಪ್ರಭಾವದಿಂದ ಮನೆಯಲ್ಲಿ ವಾಸ್ತು ಕದಲುವುದು; ಯಾರಿಗೂ ನೆಮ್ಮದಿ ಇರುವುದಿಲ್ಲ ಮತ್ತು ಆಗಾಗ ಅಶಾಂತಿ, ಕಲಹದ ವಾತಾವರಣವಿರುತ್ತದೆ!.... ಇದು ಮನುವಾದಿ ಜ್ಯೋತಿಷಿ ಪ್ರಕಾಶ ಶಾಸ್ತ್ರಿಯ ಸಿದ್ಧಾಂತ....

ವಿದ್ಯಾಪೀಠ ಸರ್ಕಲ್ಲಿನಲ್ಲೊಬ್ಬ ಆಧುನಿಕ ಮನು

ಹರಿಜನರು ಮನೆ ಹೊಕ್ಕರೆ ಗೋಮೂತ್ರ ಹಾಕೆಂದ!

ತಪ್ಪು; ಸದ್ಯ ಯಾವುದೇ ಪತ್ರಿಕೆ ಮಾರುವ ಅಂಗಡಿಗೆ ಹೋಗಿ ಇದೇ ಜುಲೈ ತಿಂಗಳ 'ಜ್ಯೋತಿಷ ತರಂಗ' ಎಂಬ ಪತ್ರಿಕೆಯನ್ನು ಕೊಂಡು ಅದರಲ್ಲಿ ಇಪ್ಪತ್ತೆರಡನೇ ಪುಟ ತೆರೆದು ನೋಡಿ. ಧರ್ಮ ಸಂದೇಹಗಳು ಎಂಬ ಅಂಕಣದಲ್ಲಿ ನಾಡಿನ ಖ್ಯಾತ ಜ್ಯೋತಿಷಿ ಗುಂಜೂರು ಪ್ರಕಾಶ ಶಾಸ್ತ್ರಿ ಎಂಬಾತ ಪ್ರಶ್ನೆಯೊಂದಕ್ಕೆ ಕೊಡುವ ಉತ್ತರವಿದು. ಅದೂ ಎಂಥಾ ವಿಚಿತ್ರ ಪ್ರಶ್ನೆಯೆಂದರೆ; ಶೇಷಾಚಲಮೂರ್ತಿ, ಶಿರಾ-ಎಂಬಾತ ಮನೆಗೆ ಕಾಗೆ ಹೊಕ್ಕರೆ ಏನು ಮಾಡಬೇಕು? ಗೂಬೆ ಮನೆ ಹೊಕ್ಕರೆ ಏನಾಗುತ್ತದೆ? ಮತ್ತು ಉತ್ತಮ ಜಾತಿಯವರ ಮನೆಗೆ ಶೂದ್ರ (ಎ.ಕೆ.-ಎ.ಡಿ.) ಜಾತಿಯವರು ಏಕಾಏಕಿ ಪ್ರವೇಶ ಮಾಡಿದರೆ? ಇತ್ಯಾದಿ ಅಸಂಬದ್ಧವಾಗಿ ಪ್ರಶ್ನೆ ಹಾಕಿದ್ದಾನೆ. ಅದಕ್ಕೆ ಜ್ಯೋತಿಷಿ ಗುಂಜೂರು ಪ್ರಕಾಶ ಶಾಸ್ತ್ರಿ ಮೇಲಿನಂತೆ ಉತ್ತರ ಕೊಡುತ್ತಾನೆ!



ಡಾ.ಬಿ.ಆರ್. ಅಂಬೇಡ್ಕರ್

ಪ್ರಶ್ನೆ ಮತ್ತು ಉತ್ತರಗಳೆರಡೂ ಜುಲೈ ತಿಂಗಳ 'ಜ್ಯೋತಿಷ ತರಂಗ' ಪತ್ರಿಕೆಯಲ್ಲಿ ಯಥಾವತ್ತಾಗಿ ಅಚ್ಚಾಗಿವೆ. ಅದರ ಸಾವಿರಾರು ಪ್ರತಿಗಳು ಪ್ರಿಂಟಾಗಿ ಮಾರಾಟಗೊಂಡಿವೆ. ಉಳಿದ ಪತ್ರಿಕೆಗಳಿನ್ನೂ ಕಂಡಕಂಡ ಪೇಪರ್ ಸ್ಟಾಲುಗಳಲ್ಲಿ ನೇತಾಡುತ್ತಲೇ ಇವೆ. ಹೇಳಿಕೇಳಿ ಈ 'ಜ್ಯೋತಿಷ ತರಂಗ' ಯಾವುದೋ ಅನಾಮಧೇಯ ಪತ್ರಿಕೆಯಲ್ಲ. ಕಳೆದ ಏಳೂವರೆ ವರ್ಷಗಳಿಂದ ತಿಂಗಳಿಗೊಂದಾವರ್ತಿ ನಿರಂತರವಾಗಿ ಅಚ್ಚಾಗುವ, ದೂರದ ಮುಂಬೈ, ದೆಹಲಿ, ದುಬೈಗಳ ಸ್ಟಾಲುಗಳನ್ನು ತಲುಪುವ, ಸರಿಸುಮಾರು ಇಪ್ಪತ್ತು ಸಾವಿರಕ್ಕೂ ಅಧಿಕ ಪ್ರಸಾರವುಳ್ಳ ಜ್ಯೋತಿಷ್ಯ ಸಂಬಂಧಿ ಕನ್ನಡ ಮಾಸ ಪತ್ರಿಕೆ. ಬೆಂಗಳೂರಿನ ರಾಜಾಜಿನಗರದ ಅನುರಾಗ್ ಪಬ್ಲಿಕೇಷನ್ಸ್ ಹೊರತರುವ ಈ ಪತ್ರಿಕೆಗೆ ಜ್ಯೋತಿಷಿ ಗುಂಜೂರು ಪ್ರಕಾಶ ಶಾಸ್ತ್ರಿಯೇ ಗೌರವ ಸಂಪಾದಕ. ಹೇಳಿಕೇಳಿ ರಾಮಾಜೋಯಿಸರ ಶಿಷ್ಯ. ಇತ್ತೀಚೆಗಷ್ಟೇ ಬೆಂಗಳೂರಿನಲ್ಲಿ ಸಮಾವೇಶಗೊಂಡ ಅಖಿಲ ಕರ್ನಾಟಕ ಜ್ಯೋತಿಷ್ಯ ಸಮ್ಮೇಳನದಲ್ಲಿ ಸಾಕ್ಷಾತ್ ರಾಮಾಜೋಯಿಸರಿಂದಲೇ 'ಜ್ಯೋತಿಷ್ಯ ವಿದ್ಯಾ ವಾಚಸ್ಪತಿ' ಎಂಬ ಬಿರುದು ಪಡೆದಾತ.



'ಜ್ಯೋತಿಷ ತರಂಗ'ದ ಮುಖಪುಟ

ಬಹುಶಃ ಬ್ರಿಟಿಷ್ ಕಾಲದಲ್ಲೂ ಯಾರೂ ಇಂಥಾ ದ್ದೊಂದು ದುಸ್ಸಾಹಸಕ್ಕೆ ಕೈ ಹಾಕಿರಲಿಕ್ಕಿಲ್ಲ. ಹಾಗೊಮ್ಮೆ ಯಾರಾದರೂ ಇಂಥ ಉದ್ಧಟತನಕ್ಕೆ ಅವತ್ತು ಕೈ ಹಾಕಿದ್ದರೆ ಅವರ ವಿರುದ್ಧ ಮಹಾತ್ಮಾ ಗಾಂಧಿಯೇ ಬೀದಿಗಿಳಿಯುತ್ತಿದ್ದರು. ಸ್ವಾತಂತ್ರ್ಯ ಬಂದು ಅರ್ಧ ಶತಮಾನ ತುಂಬಿದ ಮೇಲೂ, ಅಂಬೇಡ್ಕರ್ ಜಾತ್ಯತೀತ-ಸೆಕ್ಯೂಲರ್ ಸಂವಿಧಾನ ರಚಿಸಿದ ನಂತರವೂ, ಅಸ್ಪೃಶ್ಯತಾ ನಿಷೇಧ ಕಾಯ್ದೆ ಜಾರಿಯಲ್ಲಿದ್ದಾಗಲೂ, ಮನುಷ್ಯನನ್ನು ಮನುಷ್ಯನನ್ನಾಗಿಯೇ ನೋಡುವ ಈ ಕಾಲದಲ್ಲೂ ಜ್ಯೋತಿಷಿಯೊಬ್ಬ ಇಂಥಾ ಅಧಿಕ ಪ್ರಸಂಗಿತನಕ್ಕೆ ಕೈಹಾಕುತ್ತಾನೆಂದರೆ; ಅಂಥವನನ್ನು ಏನು ಮಾಡಬೇಕು?

ಭಾರತ ಸಂವಿಧಾನದ ಹದಿನೇಳನೇ ಅನುಚ್ಛೇದದ ಪ್ರಕಾರ ಅಸ್ಪೃಶ್ಯತಾ ಆಚರಣೆ ಮಹಾಪರಾಧ. ಅಸ್ಪೃಶ್ಯತಾ ನಿರ್ಮೂಲನೆಗಾಗಿ ಸರ್ಕಾರಗಳು ವರ್ಷಂಪ್ರತಿ ಒಂದಲ್ಲಾ ಒಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲೇ ಇವೆ. ಜಾತಿ ಹಿಡಿದು ಬಯ್ದ ಎಂದು ಸಣ್ಣದೊಂದು ಸಾಕ್ಷಿ ಕೂಡ ಇಲ್ಲದೇ ದಲಿತನೊಬ್ಬ ದೂರು ಕೊಟ್ಟನೆಂದರೆ ಅದೆಂಥವನಿದ್ದರೂ ಪೊಲೀಸರು ಒದ್ದು ಲಾಕಪ್ಪಿಗೆ ದಬ್ಬುತ್ತಾರೆ. ಅಂಥಾ ಮೇಲ್ಜಾತಿಯವರೇ ಜಾತಿ ತಾರತಮ್ಯ ಸರಿಯಲ್ಲ ಎಂದು ತಗ್ಗಿ ಬಗ್ಗಿ ನಡೆಯುವ

ರಾ. ಸೋಮನಾಥ್


ಈ ಕಾಲದಲ್ಲಿ ಗುಂಜೂರು ಪ್ರಕಾಶ ಶಾಸ್ತ್ರಿ ಎ.ಕೆ.-ಎ.ಡಿ.ಗಳು (ಅಂದರೆ ಹರಿಜನರು) ಮನೆಯೊಳಕ್ಕೆ ಬಂದರೆ ಅಂಥಾ ಮನೆಯನ್ನು ಗೋಮೂತ್ರ ಸಿಂಪಡಿಸಿ ಪುಣ್ಯಾಹ ಮಾಡಿಸಬೇಕೆಂದು ಪತ್ರಿಕೆಯೊಂದರಲ್ಲಿ ಲೇಖನ ಬರೆಯುತ್ತಾನೆ! ಜನಮರುಳೋ ಜಾತ್ರೆ ಮರುಳೋ ಗೊತ್ತಾಗುತ್ತಿಲ್ಲ!

ಅಷ್ಟಕ್ಕೂ ಈ ಗುಂಜೂರು ಪ್ರಕಾಶ ಶಾಸ್ತ್ರಿ ಯಾರು? ಆತನ ಉದ್ಧಟತನಕ್ಕೆ ಕಾರಣಗಳೇನೆಂದು ಕೆದಕುತ್ತಾ ಹೋದರೆ; ಅದು ಮತ್ತೊಂದು ಕತೆಯಾಗುತ್ತದೆ. ವಿದ್ಯಾಪೀಠ ಸರ್ಕಲ್ ಹಿಂಭಾಗದ ಸ್ಕೈಲೈನ್ ಸುರಭಿ ಅಪಾರ್ಟ್‌ಮೆಂಟ್ ಎದುರಿಗೇ ಎರಡಂತಸ್ತಿನ ಮನೆ ಮೇಲೆ ಗಾಯಿತ್ರಿ ಜ್ಯೋತಿಷ್ಯಾಲಯ ಎಂಬ ಬೋರ್ಡಿದೆ. ಪ್ರಕಾಶ ಶಾಸ್ತ್ರಿಯ ಪಾಲಿಗೆ ಅದೇ ಮನೆ, ಮಂತ್ರಾಗಾರ, ಕರ್ಮಸ್ಥಾನ, ಎಲ್ಲವೂ ಹೌದು. ಈಗಲೂ ಅಂಚೆ-ತಂತಿ ಇಲಾಖೆಯ ನೌಕರಿಯಲ್ಲಿರುವ ಪ್ರಕಾಶ ಶಾಸ್ತ್ರಿ ಸಂಜೆ ಐದರ ನಂತರವೇ ತನ್ನ ಜ್ಯೋತಿಷ್ಯಾಲಯದ ಬಾಗಿಲು ತೆರೆಯುತ್ತಾನೆ. ರಾತ್ರಿ ಹತ್ತರ ತನಕ ತಾಯತ, ಭಸ್ಮ, ಯಂತ್ರ ಇತ್ಯಾದಿಗೆಂದು ಜನ ಬರುತ್ತಲೇ ಇರುತ್ತಾರೆ. ಒಮ್ಮೆ ಗಾಯಿತ್ರಿ ಜ್ಯೋತಿಷ್ಯಾಲಯ ಹೊಕ್ಕಿಬಿಟ್ಟರೆ ಎಂಥವರೂ ಬುಟ್ಟಿಗೆ ಬೀಳಲೇಬೇಕು. ಮನೆತುಂಬ ಯಾವ್ಯಾವುದೋ ಪುರಾತನ ಗ್ರಂಥಗಳ ರಾಶಿ ರಾಶಿ. ಎದುರಿಗೇ ಶ್ರೀಚಕ್ರಮಾತೆಯ ಭರ್ಜರಿ ಫೋಟೋ. ಎಲ್ಲೆಂದರಲ್ಲಿ ಕುಂಕುಮ, ಭಸ್ಮದ

▶▶▶▶▶

ಹೆಗಲಿಗೆ ಶನಿ: ಜೈಲು ಸನ್ನಿಹಿತ

ಪ್ರಕಾಶ ಶಾಸ್ತ್ರಿ ದಡ್ಡನೇನಲ್ಲ. ಉಪ್ಪುತಿಂದವನು ನೀರು ಕುಡಿಯಲೇಬೇಕೆಂಬುದು ಆತನಿಗೆ ಗೊತ್ತಿಲ್ಲವೆಂದೇನಲ್ಲ. ಬಹುಶಃ ತಾನು ಬೋಧಿಸಿದ ವಿಷಪಾಠವನ್ನು ಬ್ರಾಹ್ಮಣರಷ್ಟೇ ಓದುತ್ತಾರೆಂದು ಆತ ಭಾವಿಸಿರಬೇಕು. ಆದರೆ ಹೇಗೋ ಇದು ದಲಿತ ಸಂಘಟನೆಗಳ ಗಮನಕ್ಕೆ ಬಂದುಬಿಟ್ಟಿದೆ. ಈ ಬಗ್ಗೆ ಮೊದಲು ಪ್ರತಿಕ್ರಿಯಿಸಿದ್ದೇ ಮಾದಿಗ ದಂಡೋರದ ರಾಜ್ಯಾಧ್ಯಕ್ಷ ಶಂಕರಪ್ಪ, ಅದರಲ್ಲೂ ಮಾದಿಗ ದಂಡೋರದ ರಾಜ್ಯಪ್ರಧಾನ ಕಾರ್ಯದರ್ಶಿ ಪಾವಗಡ ಶ್ರೀರಾಮ್ ಥರದ ಯುವಕರು ಈಗಾಗಲೇ ಕಾರ್ಯಕರ್ತರ ಸಭೆ ಕರೆದು ಪ್ರತಿಭಟನೆಗೆ ತಯಾರಿ ನಡೆಸುತ್ತಿದ್ದಾರೆ. ಶ್ರೀರಾಮ್ ಪ್ರಕಾರ ಗುಂಜೂರು ಪ್ರಕಾಶ ಶಾಸ್ತ್ರಿ ತನ್ನ ಹೊಟ್ಟೆಪಾಡಿಗಾಗಿ ಸಮಾಜದ ದಿಕ್ಕು ತಪ್ಪಿಸುತ್ತಿದ್ದಾನೆ. ಈತನ ಬರವಣಿಗೆ ಸಮಾಜಕ್ಕೆ ಒಂದು ಪಿಡುಗಿದ್ದಂತೆ. ಪ್ರಕಾಶ ಶಾಸ್ತ್ರಿ ಕರ್ನಾಟಕದ ದಲಿತರ ಸ್ವಾಭಿಮಾನವನ್ನಷ್ಟೇ ಕೆಣಕಿಲ್ಲ, ಆತ ಅಂಬೇಡ್ಕರ್ ಬರೆದ ಸಂವಿಧಾನವನ್ನು ವಿರೋಧಿಸುತ್ತಿದ್ದಾನೆ. ಆದ್ದರಿಂದ ಈತನ ವಿರುದ್ಧ ದಲಿತರು ಎಚ್ಚೆತ್ತುಕೊಳ್ಳಬೇಕು. ಸಂಬಂಧಪಟ್ಟ ಪೊಲೀಸರು 'ಜ್ಯೋತಿಷ ತರಂಗ' ಪತ್ರಿಕೆಯನ್ನೇ ಆಧಾರವಾಗಿಟ್ಟುಕೊಂಡು ಪ್ರಕಾಶ ಶಾಸ್ತ್ರಿಯನ್ನು ಬಂಧಿಸಿ ಜೈಲಿಗೆ ಹಾಕಬೇಕು...!



ಮಾದಾರ ಚೆನ್ನಯ್ಯ

ಮಾದಿಗ ದಂಡೋರದ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ಜಯರಾಮ್ ಮತ್ತು ಗುಲ್ಬರ್ಗಾ ಜಿಲ್ಲಾ ದಂಡೋರದ ಅಧ್ಯಕ್ಷ ಹುಸೇನಪ್ಪ ಕೂಡಾ ಇಂಥದ್ದೇ ಮಾತಾಡಿದ್ದಾರೆ. ಇವರೆಲ್ಲರಿಗಿಂತಲೂ ರಾಜ್ಯ ಮಾದಿಗ ಸಮುದಾಯದ ಜಗದ್ಗುರು ಚಿತ್ರದುರ್ಗದ ಬಸವಮೂರ್ತಿ ಮಾದಾರ ಚೆನ್ನಯ್ಯರಂಥ ಶರಣರು ಪ್ರಕಾಶ ಶಾಸ್ತ್ರಿಯ ವಿರುದ್ಧ ಕಿಡಿಕಾರುತ್ತಾರೆ. ಅದನ್ನು ಅವರ ಮಾತಲ್ಲೇ ಕೇಳಬೇಕು.

"ಯಾವ ಶೂದ್ರರನ್ನು ಮನುವಾದಿಗಳು ಅಸ್ಪೃಶ್ಯರಂತೆ ಕಾಣುತ್ತಾರೋ, ಇದೇ ಬ್ರಾಹ್ಮಣರು ತಮ್ಮ ಉಪನಯನಕ್ಕೆ ಮಾದಿಗರ ಕೇರಿಯಿಂದ ಚರ್ಮ ಒಯ್ದು ಅದನ್ನು 45 ದಿನಗಳ ಕಾಲ ನೀರಿನಲ್ಲಿಟ್ಟು ಅದನ್ನೇ ತೀರ್ಥವೆಂದು ಕುಡಿಯುತ್ತಾರೆ. ಇನ್ನು ಬ್ರಾಹ್ಮಣರ ಮದುವೆಗಳಿಗೆ ಮಾದಿಗರ ಕೇರಿಯಲ್ಲಿ ಚರ್ಮ ಕೊಳೆಹಾಕುವ ಕರೇಬಾನಿ ಅಂತ ಇರುತ್ತದೆ ನೋಡಿ, ಅಂಥ ಚರ್ಮ ಕೊಳೆತ ನೀರನ್ನೇ ಒಯ್ದು ಮಂಗಳ ಕಾರ್ಯ ಮಾಡುತ್ತಾರೆ. ನೀವೇ ಹೇಳಿ ಈ ಮಂದಿ ಹೇಗೆ ನಮಗಿಂತ ಶ್ರೇಷ್ಠರಾಗುತ್ತಾರೆ? ಪ್ರಕಾಶ ಶಾಸ್ತ್ರಿ ನೇರವಾಗಿ ಜಾತಿ ನಿಂದನೆ ಮಾಡಿದ್ದಾನೆ. ಅಸ್ಪೃಶ್ಯತೆ ಆಚರಣೆಗೆ ಬಹಿರಂಗವಾಗಿ ಕರೆ ಕೊಟ್ಟಿದ್ದಾನೆ. ಇದರ ವಿರುದ್ಧ ನಾನೇ ಪೊಲೀಸರಿಗೆ ದೂರು ದಾಖಲಿಸುತ್ತೇನೆ...!"




ಮಾರಸಂದ್ರ ಮುನಿಯಪ್ಪ

ಇದು ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳ ಆಕ್ರೋಶವಾದರೆ ಪ್ರಜಾ ವಿಮೋಚನಾ ಚಳವಳಿಯ ರಾಜ್ಯಾಧ್ಯಕ್ಷ ಪಟಾಪಟ್ ನಾಗರಾಜ್ ಈಗಾಗಲೇ ಪ್ರತಿಭಟನೆಗೆ ಕರೆ ಕೊಟ್ಟಿದ್ದಾರೆ. ಬಹುಜನ ಸಮಾಜ ಪಕ್ಷದ ರಾಜ್ಯ ಉಪಾಧ್ಯಕ್ಷ ಮಾರಸಂದ್ರ ಮುನಿಯಪ್ಪ, ಸಮಾಜವಾದಿ ಪಕ್ಷದ ಬೆಂಗಳೂರು ನಗರ ಪ್ರಧಾನ ಕಾರ್ಯದರ್ಶಿ ಸಿ.ವಿ. ರಮೇಶ್ ಕುಮಾರ್ ಥರದ ದಲಿತ ಮುಖಂಡರೂ ಗುಂಜೂರು ಶಾಸ್ತ್ರಿಯ ದುರಾಚಾರವನ್ನು ಖಂಡಿಸಿದ್ದಾರೆ. ಯಾರನ್ನೆಲ್ಲ ಜನ್ಮ ಶನಿ, ಅಷ್ಟಮ ಶನಿ ಕಾಟ ಎಂದು ಪ್ರಕಾಶ ಶಾಸ್ತ್ರಿ ನಂಬಿಸಿ ಕಾಸು ಗುಂಜುತ್ತಿದ್ದನೋ ಈಗ ಈ ಎಲ್ಲಾ 'ಶನಿ'ಗಳೂ ಆತನದೇ ಹೆಗಲಿಗೇರಿವೆ.



ಮಾದಿಗ ದಂಡೋರದ ಶಂಕರಪ್ಪ, ಹುಸೇನಪ್ಪ, ಪಾವಗಡ ರಾಮ್ ಮತ್ತು ಜಯರಾಮ್




ಪಟಾಪಟ್ ನಾಗರಾಜ್

ಟೆರರಿಸ್ಟರನ್ನು ತಡಿಬೇಕಂದ್ರೆ ಕೋಟಿ ಗಾಯಿತ್ರಿ ಜಪಿಸಿ!

ಸುನಾಮಿ ಬಂದಿದ್ದಕ್ಕೆ, ಚಿಕುನ್ ಗುನ್ಯಾ ಖಾಯಿಲೆಗೆ, ಮುಂಬಯಿಯಲ್ಲಿ ಉಗ್ರರ ಬಾಂಬ್ ಅಟ್ಟಹಾಸಕ್ಕೆ, ಬರಗಾಲಕ್ಕೆ, ರೈತರ ಆತ್ಮಹತ್ಯೆಗೆ; ಹೀಗೆ ಪ್ರತಿಯೊಂದಕ್ಕೂ ತನ್ನ ಬಳಿ ಪರಿಹಾರವಿದೆ ಎನ್ನುತ್ತಾನೆ ಗುಂಜೂರು ಪ್ರಕಾಶ ಶಾಸ್ತ್ರಿ.

ಅವರಪ್ಪ ರಾಮಚಂದ್ರ ಶಾಸ್ತ್ರಿ ಬರೆದಿಟ್ಟು ಹೋದ ನೂರಾರು ಜ್ಯೋತಿಷ್ಯ ಸಂಬಂಧಿ ಪುಸ್ತಕಗಳನ್ನು ರಾಶಿ ಹಾಕಿದ್ದೇ "ನೋಡಿ ನಮ್ಮಪ್ಪನ ತಪಸ್ಸಿನ ಫಲ. ಶ್ರೀಚಕ್ರಮಾತೆ ರಾಜರಾಜೇಶ್ವರಿಯೇ ಅವರ ಮೈಮೇಲೆ ಬಂದು ಈ ಎಲ್ಲಾ ಪುಸ್ತಕಗಳನ್ನು ಬರೆಸಿದ್ದಾಳೆ. ಎಲ್ಲಾ ಸಮಸ್ಯೆಗಳಿಗೂ ಈ ಪುಸ್ತಕಗಳೇ ಪರಿಹಾರ ಸೂಚಿಸುತ್ತವೆ. ಹಾಗೊಮ್ಮೆ ಈ ಪುಸ್ತಕಗಳಿಂದಲೂ ಪರಿಹಾರ ಸಿಗಲಿಲ್ಲವೆಂದರೆ ನಾನೇ ತಪಸ್ಸಿಗೆ ಕೂತು ಶ್ರೀಚಕ್ರ ಮಾತೆಯನ್ನು ಬೇಡುತ್ತೇನೆ. ಆಕೆ ನನ್ನ ಕನಸಲ್ಲಿ ಬಂದು ದಾರಿ ತೋರಿಸುತ್ತಾಳೆ. ಏನು ಮುಂಬಯಿಯಲ್ಲಿ ಭಯೋತ್ಪಾದಕರು ಬಾಂಬಿಟ್ಟರೋ ಅದು ಶನಿದೆಸೆಯ ಪ್ರತಿಫಲ. ಭಾರತದೇಶಕ್ಕೀಗ ಏಳರಾಟ ಶನಿಕಾಟ ಶುರುವಾಗಿದೆ. ಹೇಗೆ ಅಂತೀರಾ? ಭಾರತ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ಮಕರ ಲಗ್ನದಲ್ಲಿ, ದೆಹಲಿಯನ್ನೇ ಕೇಂದ್ರವಾಗಿಟ್ಟುಕೊಂಡು ಮಕರಲಗ್ನವನ್ನು ಲೆಕ್ಕ ಹಾಕಿದರೆ ಅದರ ಏಳನೇ ಮನೆಯಲ್ಲಿ ಶನಿ ಕೂತಿದ್ದಾನೆ. ಆದ್ದರಿಂದ ದೆಹಲಿಗೆ, ದಕ್ಷಿಣ ಭಾಗದ ಮಹಾರಾಷ್ಟ್ರ, ಕರ್ನಾಟಕ, ಆಂಧ್ರ, ತಮಿಳನಾಡುಗಳಿಗೆ ಅಪಾಯ, ಕೇಡುಗಾಲ, ಕಂಟಕ ತಪ್ಪಿದ್ದಲ್ಲ!"



ಹೀಗೇ ಅಸಂಬದ್ಧವಾಗಿ ಬುರುಡೆ ಬಿಡುವ ಪ್ರಕಾಶ ಶಾಸ್ತ್ರಿ ಇದೆಲ್ಲಕ್ಕೂ ಕೋಟಿ ಗಾಯಿತ್ರಿ ಜಪವೇ ಪರಿಹಾರವೆನ್ನುತ್ತಾನೆ. ಜೊತೆಗೆ ಶತಚಂಡಿ ಹೋಮ, ಪರ್ಜನ್ಯ ಜಪ, ಪವಮಾನ ಪಾರಾಯಣ, ದೇವಿಸಪ್ತಶತಿ, ಮಹಾಸರ್ಪಯಾಗಗಳನ್ನೂ ಸರ್ಕಾರವೇ ಮಾಡಬೇಕೆನ್ನುತ್ತಾನೆ. ದ್ವಾಪರಯುಗದಲ್ಲಿ ಶ್ರೀಕೃಷ್ಣ ಪರಮಾತ್ಮ ಇದೆಲ್ಲವನ್ನೂ ಮಾಡಿಯೇ ದ್ವಾರಕೆಯನ್ನು ಕಾಪಾಡಿದನಂತೆ!

ಆತನ ಪ್ರಕಾರ; ಯಾವ್ಯಾವುದೋ ಹೀನ ಸಂತಾನಗಳು, ಶನಿ ಸಂತಾನಗಳು ಹುಟ್ಟಿಕೊಂಡಿದ್ದರಿಂದಲೇ ಭೂಮಿಯ ಪಾಪ ಹೆಚ್ಚಾಗಿದೆ! 'ಅವರು ಮುಸ್ಲಿಮರೇ?' ಎಂಬ ಪ್ರಶ್ನೆಯಿಟ್ಟರೆ ಶಾಸ್ತ್ರಿ 'ನಾನು ಹೇಳೋಲ್ಲ. ನೀವೇ ಲೆಕ್ಕಾಹಾಕಿ' ಎನ್ನುತ್ತಾನೆ. ದುಷ್ಟ ಯೋಗಗಳಲ್ಲಿ ಜನಿಸಿದವರು, ವಿಷಕನ್ಯಾ ಯೋಗದಲ್ಲಿ ಹುಟ್ಟಿದವರು, ಧ್ವಂಕ್ಷ ಯೋಗದಲ್ಲಿ ಹುಟ್ಟಿದವರು ಲೋಕಕಂಟಕರಾಗುತ್ತಾರಂತೆ, ದುಷ್ಟರಾಗುತ್ತಾರಂತೆ. 'ಇದನ್ನೆಲ್ಲ ನೀವೇ ಪ್ರಧಾನಮಂತ್ರಿ ಮತ್ತು ರಾಷ್ಟ್ರಪತಿ ಕಲಾಮ್‌ಗೆ ಸೂಚಿಸಬಹುದಲ್ಲ?' ಎಂದರೆ 'ನೋಡಿ, ನೀವು ಬಂದು ಕೇಳುತ್ತೀದ್ದೀರಿ. ನಿಮಗಿರೋ ಒಳ್ಳೆ ಮನಸ್ಸು ರಾಷ್ಟ್ರಪತಿ ಕಲಾಂಗಿರಬೇಕಲ್ಲ! ಸರ್ಕಾರ ನನ್ನ ಸಹಾಯ ಕೇಳಿದ ದಿನ ಖಂಡಿತಾ ಸಲಹೆ ಕೊಡ್ತೀನಿ' ಎನ್ನುತ್ತಾನೆ. ತಮಾಷೆಯೆಂದರೆ ಜ್ಯೋತಿಷ್ಯ ಕೇಳಲೆಂದು ಆತನ ಮನೆಗೆ ಯಾರು ಬೇಕಾದರೂ ಬರಬಹುದಂತೆ. ಹಾಗೊಮ್ಮೆ ಶೂದ್ರಾದಿಗಳೇನಾದರೂ ಬಂದರೆ ಮೈಲಿಗೆಯಾಗದಂತೆ once for all ಅಷ್ಟಬಂಧ ಮಾಡಿಸಿದ್ದಾನಂತೆ!

ಕಾಗೆಯೋ, ಗೂಬೆಯೋ, ಶೂದ್ರನೋ; ಒಟ್ಟಾರೆ 'ಹಡಬೆ ದುಡ್ಡು ಬಂದಷ್ಟು ಗುಂಜು' ಎಂಬುದೇ ಗುಂಜೂರು ಶಾಸ್ತ್ರಿಯ ಮೂಲಮಂತ್ರ!

▶▶▶▶

ಕುರುಹುಗಳು. ಅದು ಮಡಿ-ಮೈಲಿಗೆಯ ಕರ್ಮಠ ಖಾರಸ್ಥಾನದಂತಾ ವಿಲಕ್ಷಣ ತಾಣ.

ಶ್ರೀಚಕ್ರ ಮಾತೆಯ ಫೋಟೋಗಿಂತಲೂ ಮೇಲೆ ಈತನ ತಂದೆ ಗುಂಜೂರು ರಾಮಚಂದ್ರಶಾಸ್ತ್ರಿಯ ಫೋಟೋ ನೇತು ಹಾಕಿದ್ದಾನೆ. ಇಲ್ಲಿಗೆ ಮೂರು ವರ್ಷಗಳ ಹಿಂದೆ ತೀರಿಕೊಂಡ ರಾಮಚಂದ್ರಶಾಸ್ತ್ರಿ ಬದುಕಿರುವ ತನಕ 'ಜ್ಯೋತಿಷ ತರಂಗ' ಪತ್ರಿಕೆಗೆ ಗೌರವ ಸಂಪಾದಕನಾಗಿದ್ದ. ಹಂಪಿಯ ವಿರೂಪಾಕ್ಷ ಪೀಠದ ಅಭಿನವೋದ್ದಂಡ ನರಸಿಂಹ ಭಾರತಿಸ್ವಾಮಿಗಳ ಆಸ್ಥಾನ ಜ್ಯೋತಿಷಿಯಾಗಿದ್ದ ರಾಮಚಂದ್ರ ಶಾಸ್ತ್ರಿ ಬೆಳ್ಳಾವೆ ನರಸಿಂಹ ಶಾಸ್ತ್ರಿ ಕಣಗಲ್ ಪ್ರಭಾಕರ ಶಾಸ್ತ್ರಿ ಮತ್ತು ಖ್ಯಾತ ಪಂಚಾಂಗ ಕರ್ತ ವಿಷಪಾಠಂ ವೆಂಕಟಸುಬ್ಬಾ ಶಾಸ್ತ್ರಿಗಳ ಶಿಷ್ಯ. ಕಲಿತ ವಿಷಪಾಠವನ್ನೆಲ್ಲ ತನ್ನ ಮಗ ಪ್ರಕಾಶ ಶಾಸ್ತ್ರಿಗೆ ಕಲಿಸಿಕೊಟ್ಟ. 'ಕನ್ನಡ ಪ್ರಭ'ಕ್ಕೆ ಖಾದ್ರಿ ಶಾಮಣ್ಣ ಸಂಪಾದಕರಾಗಿದ್ದಾಗ ಈತನಿಂದ ಜ್ಯೋತಿಷ್ಯ ಸಂಬಂಧಿ ಲೇಖನ ಬರೆಸುತ್ತಿದ್ದರು. 'ಜನವಾಣಿ'ಯಲ್ಲಿ ಕೆಲ ವರ್ಷ ದಿನಭವಿಷ್ಯ ಬರೆದ ರಾಮಚಂದ್ರ ಶಾಸ್ತ್ರಿ 'ಪ್ರಜಾಮತ'ದಲ್ಲೂ ವಾರಭವಿಷ್ಯವನ್ನು ಬರೆಯುತ್ತಿದ್ದ.

ಸಾಲದ್ದಕ್ಕೆ ಶ್ರೀ ಚಕ್ರಯಂತ್ರರಾಜ ಮುಹೂರ್ತ ದರ್ಶಿನಿ ದುರ್ಗಾಸಪ್ತಸತಿ, ಚಂಡಿ ಹೋಮ, ನಾಡಿ ಜ್ಯೋತಿಷ್ಯ ಗ್ರಂಥ ಮುಂತಾದ ನೂರಕ್ಕೂ ಅಧಿಕ ಪುಸ್ತಕಗಳನ್ನು ಬರೆದ. ಇಂಥವನನ್ನು ಕರೆದು 'ಜ್ಯೋತಿಷ ತರಂಗ'ಕ್ಕೆ ಗೌರವ ಸಂಪಾದಕನನ್ನಾಗಿ ಮಾಡಿದ್ದು ಅನುರಾಗ ಪಬ್ಲಿಕೇಷನ್ಸ್ ಮಾಲೀಕ ಆರ್. ಬಾಲಕೃಷ್ಣ. ಬದುಕಿದ್ದಷ್ಟೂ ದಿನ ರಾಮಚಂದ್ರ ಶಾಸ್ತ್ರಿ ಜ್ಯೋತಿಷ್ಯದ ಬುರುಡೆ ಬಿಟ್ಟೇ ಉದರಂಬರಣೆ ಮಾಡಿಕೊಂಡಿದ್ದ. 2003 ರ ಆಗಸ್ಟ್ 22 ಕ್ಕೆ ರಾಮಚಂದ್ರ ಶಾಸ್ತ್ರಿ ಕಣ್ಣುಮುಚ್ಚಿಕೊಂಡ ನಂತರ 'ಜ್ಯೋತಿಷ ತರಂಗ'ಕ್ಕೆ ಮಗ ಪ್ರಕಾಶ ಶಾಸ್ತ್ರಿ ಗೌರವ ಸಂಪಾದಕನಾದ. ಓದಿದ್ದು ಎಸ್ಸೆಲ್ಸಿ ತನಕ. ಅನಂತರ ಫೋಸ್ಟ್‌ಮ್ಯಾನ್ ಕೆಲಸಕ್ಕೆ ಸೇರಿಕೊಂಡ.

ಜ್ಯೋತಿಷ್ಯ ಶಾಸ್ತ್ರದ ಹೊರತಾಗಿ ಮನುಷ್ಯತ್ವ, ಕಾಯ್ಕಿ ವಾಚ, ಯಾವೊಂದೂ ಗೊತ್ತಿಲ್ಲ, ಜ್ಯೋತಿಷಿಗಳ ಹೊರತಾಗಿ ಜನಸಾಮಾನ್ಯರ ಜೊತೆ ಬೆಳಗಿದವನಲ್ಲ.

ಕಾಲ ಆಧುನಿಕವಾದರೂ ಪ್ರಕಾಶ ಶಾಸ್ತ್ರಿಯ ಮನಸ್ಸು ಮಾತ್ರ ಮನುಯುಗದ್ದಾಗಿತ್ತು, ಜ್ಯೋತಿಷ್ಯದಲ್ಲಿ ಪ್ರೇಮಿಗಳು! ಎಂಥಾ ಜಾತಕಕ್ಕೆ ಎಂಥಾ ಹರಳು? ಹುಡುಗಿಯರು ಮದುವೆ ಆಗದಿರುವುದೇಕೆ? ಮನೆವಾಸ್ತು; ಇತ್ಯಾದಿ ಆಧುನಿಕ ಸಮಸ್ಯೆಗಳಿಗೆಲ್ಲ ಒಂದಲ್ಲಾ ಒಂದು ಗ್ರಹ ಕಾರಣವೆಂದು ಬುರುಡೆ ಬಿಡುವುದು ಈತನ ತಂತ್ರ. ದಿನೇದಿನೇ 'ಜ್ಯೋತಿಷ ತರಂಗ'ದ ಸರ್ಕ್ಯುಲೇಷನ್ ಹೆಚ್ಚಿತು.

ಕೆಲವೊಮ್ಮೆ ಯಾವುದೋ ಹೆಸರಲ್ಲಿ ತಾನೇ ಪ್ರಶ್ನೆ ಕೇಳಿದಂತೆ ಅದಕ್ಕೆ ತಾನೇ ಉತ್ತರ ಕೊಟ್ಟಂತೆ ಬರೆಯುತ್ತಿದ್ದ. ಬಹುಶಃ ಎಷ್ಟಿದ್ದರೂ ಅಪಾಯ ಕಟ್ಟಿಟ್ಟ ಬುತ್ತಿ ಎಂದೇ ಪ್ರಕಾಶಕ ಬಾಲಕೃಷ್ಣ ಪ್ರಕಟಗೊಂಡ ಲೇಖನಗಳಿಗೆ ಆಯಾಯ ಲೇಖಕರೇ ಜವಾಬ್ದಾರರು ಎಂದು ವಿಶೇಷ ಸೂಚನೆ ಮುದ್ರಿಸಲಾರಂಭಿಸಿದ್ದರು.

ಹಾಗೇ ಯಾವುದೋ ಹೆಸರಲ್ಲಿ ತಾನೇ ಪ್ರಶ್ನೆ ಕೇಳಿ ಅದಕ್ಕೆ ತಾನೇ ಉತ್ತರ ಕೊಡುವ ಪ್ರಕಾಶ ಶಾಸ್ತ್ರಿ 2006 ರ ಜುಲೈ ಸಂಚಿಕೆಯಲ್ಲಿ ತನ್ನ ವಿಷಪಾಠವನ್ನು ಯಥಾವತ್ತಾಗಿ ಕಕ್ಕಿಬಿಟ್ಟ. ಶೇಷಾಚಲಮೂರ್ತಿ-ಶಿರಾ ಎಂಬ ಕಾಲ್ಪನಿಕ ಹೆಸರಲ್ಲಿ ಮೊದಲು ಮನೆಗೆ ಕಾಗೆ ಹೊಕ್ಕರೆ, ಗೂಬೆ ಹೊಕ್ಕರೆ? ಎಂದು ಕೇಳುತ್ತಾನೆ.


ಅಲ್ಲಿಯತನಕ ಜಾತಿ ಪ್ರಶ್ನೆಯಿಲ್ಲ, ಆದರೆ ಮೂರನೇ ಪ್ರಶ್ನೆಯ ಹೊತ್ತಿಗೆ ಉತ್ತಮ ಜಾತಿಯವರ ಮನೆಗೆ ಶೂದ್ರಾದಿಗಳು (ಅಂದರೆ ಎ.ಕೆ.-ಎ.ಡಿ.ಗಳು) ಏಕಾಏಕಿ ಮನೆ ಪ್ರವೇಶ ಮಾಡಿದರೆ? ಎಂಬ ಪ್ರಶ್ನೆ ಹಾಕುತ್ತಾನೆ. ಇದರರ್ಥ ಕಾಗೆ-ಗೂಬೆಗಳಿಗಿಂತಲೂ ಆದಿ ಕರ್ನಾಟಕ, ಆದಿ ದ್ರಾವಿಡ ಎಂದೇ ಕರೆಯಲ್ಪಡುವ ದಲಿತರು ಹೀನರೇ?

ಇಂಥ ಜ್ಯೋತಿಷ್ಯವನ್ನು ಓದಿದ ಯಾರೇ ಆದರೂ ಅಸ್ಪೃಶ್ಯತೆ ಆಚರಿಸದಿರುತ್ತಾರಾ? ಬ್ರಾಹ್ಮಣರು ಹಾಳಾಗಲಿ, ಇತ್ತೀಚೆಗೆ ವಿಪರೀತ ಜ್ಯೋತಿಷ್ಯದ ಹುಚ್ಚಿಗೆ ಬಿದ್ದ ಮಧ್ಯಮ ಜಾತಿಯವರೆಲ್ಲ ದಲಿತರ್‍ಯಾರಾದರೂ ಮನೆಗೆ ಬಂದಾಕ್ಷಣ ಗೋಮೂತ್ರ ಹುಡುಕಿ ಹೊರಟರೆಂದರೆ ಗತಿಯೇನು? ಜಾತಿರಹಿತ ಸಮಾಜ ನಿರ್ಮಾಣದ ಬೊಗಳೆ ಬಿಡುತ್ತಲೇ ಇಂಥ ಹಲ್ಲಿ ಶಕುನದವರೆದುರು ಪೊಡಮಡುವ ಮುಖ್ಯಮಂತ್ರಿ ಕುಮಾರಸ್ವಾಮಿ, ಡೆಪ್ಯೂಟಿ ಯಡಿಯೂರಪ್ಪ ವಿಜ್ಞಾನ-ತಂತ್ರಜ್ಞಾನ(!) ಮಂತ್ರಿ ರಾಮಚಂದ್ರಗೌಡರಂಥವರೇ ಅಧಿಕಾರದಲ್ಲಿರುವಾಗ ಧೂರ್ತ ಪ್ರಕಾಶ ಶಾಸ್ತ್ರಿಯನ್ನು ಜೈಲಿಗೆ ಹಾಕುವವರ್‍ಯಾರು? ■

'ಪಂಕಜಕುಮಾರ್ ಕೈಗೆ ಲಾರಿ ಕೊಟ್ಟು ಚೆಡ್ಡಿ ಹಾಕಿದ್ರಲ್ಲಾ ಸಾರ್'



"ಶಬರಿಮಲೈ ಅಯ್ಯಪ್ಪನ ಅಂಗ ಮುಟ್ಟಿದಳೆಂಬ ಕಾರಣಕ್ಕೆ, ನಮ್ಮ ಮಲೆನಾಡ ಹೆಣ್ಣುಮಗಳಾದ ಜಯಮಾಲನ ಮಾನವನ್ನು ಮಲಯಾಳಿಗಳು ಜಾಲಾಡುತ್ತಿದ್ದರೂ, ಕನ್ನಡದ ವಿಚಾರವಾದಿ ಬುದ್ಧಿಜೀವಿಗಳು ಯಾಕೆ ಲದ್ದಿ ಮೆಲ್ಲುತ್ತ ಕುಳಿತಿದ್ದಾರೆ" ಎಂದು ಜಯಮಾಲಾಭಿಮಾನಿಗಳು ಕೇಳುತ್ತಿದ್ದಾರಂತಲ್ಲಾ, ಈ ನಡುವೆ ನಮ್ಮ ಪ್ರಖ್ಯಾತ ಚೆಡ್ಡಿ ಚತುರರು "ಜಯಮಾಲ ಅಯ್ಯಪ್ಪನ ಗರ್ಭ ಗುಡಿ ಪ್ರವೇಶಿಸಿದ್ದು ತಪ್ಪು, ಅಯ್ಯಪ್ಪನ ಅಂಗಮುಟ್ಟಿದ್ದು ತಪ್ಪು, ಆ ಕಾರಣಕ್ಕೆ 50 ದೇಗುಲಗಳಲ್ಲಿ ಶುದ್ಧಿ ಪೂಜೆ ನಡೆಯುವುದು ಸರಿ. ಈ ಶುದ್ಧಿ ಕಾರ್ಯದಲ್ಲಿ ನಮ್ಮ ಬಂಧುಗಳಿಗೆ ಒಳ್ಳೆಯ ಊಟ ಸಿಗುತ್ತದೆ. ರಸಾಯನ, ಶೀಕರಣೆ, ಕಡ್ಡೆ ಪಾಯಸ, ಕೋಸಂಬರಿ, ಹಾಲು ಪಾಯಸವೆಲ್ಲಾ ವಿತರಣೆಯಾಗುತ್ತದೆ. ಪೌಷ್ಟಿಕಾಂಶದಿಂದ ಕೂಡಿದ ಆಹಾರದ ಕೊರತೆಯಿಂದ ನರಳುತ್ತಿರುವ, ವಿಪ್ರರಿಗೆ ಈ ಐವತ್ತು ದೇಗುಲದ ಪೂಜೆಯಿಂದ ಒಳ್ಳೆಯ ಊಟ ಸಿಕ್ಕಿ ಅವರು ನಿರಾಯಾಸವಾಗಿ ಲಾರಿ ತಿರುಗಿಸಲು ಶಕ್ತಿ ಪ್ರಾಪ್ತವಾಗುತ್ತದೆ" ಎಂದು ಹೇಳತೊಡಗಿದ್ದಾರಂತಲ್ಲಾ, ಥೂತ್ತೇರಿ!!!



"ದೇವಸ್ಥಾನಗಳಲ್ಲಿ, ಅದರಲ್ಲೂ ಗರ್ಭಗುಡಿಯೊಳಕ್ಕೆ ಮಹಿಳೆಯರು ಬರಕೂಡದು. ಈ ನಿಯಮವನ್ನು ಪಾಲಿಸುವುದು ಮಹಿಳೆಯರಿಗೂ ಒಳ್ಳೆಯದು. ಹಿಂದೂ ಧರ್ಮಕ್ಕೂ ಒಳ್ಳೆಯದು" ಎಂದು ಚೆಡ್ಡಿ ಲೀಡರುಗಳು ಹೇಳುತ್ತಿದ್ದಾರೇನೋ ನಿಜ. ಆದರೆ ಇದನ್ನು ದೇವೇಗೌಡರ ಟೀಮು ಜೆಡಿಎಸ್ ಹುಟ್ಟಿದಂದಿನಿಂದಲೂ ಪಾಲಿಸಿಕೊಂಡು ಬರುತ್ತಿದೆಯಂತಲ್ಲಾ. ಇದರ ಫಲವಾಗಿ ಜೆಡಿಎಸ್ ಸಂಪುಟದಲ್ಲಾಗಲಿ, ಪಾರ್ಟಿಯಲ್ಲಾಗಲಿ ಮಹಿಳೆಯರಿಗೆ ಮರ್ಯಾದೆ ಸಿಗುತ್ತಿಲ್ಲವಂತಲ್ಲ, ಇದನ್ನು ಒರಟಾಗಿಯೇ ಗಮನಿಸಿರುವ ದೇವೇಗೌಡರ ಮಗ ರೇವಣ್ಣ ಪ್ರೊ. ಶೋಭಾ ಎಂಬ ಹೆಣ್ಣುಮಗಳನ್ನು ಸಾರ್ವಜನಿಕವಾಗಿ "ನಿನ್ನಾಟ ನನ್ನತ್ರ ನ್ನಡೆಯಲ್ಲ, ಬಾಲ ಬಿಚ್ಚಿದ್ರೆ ಕಟ್ ಮಾಡ್ತಿನಿ. ನೀನೆಂಗೆ ಇಲ್ಲಿರಿತಿಯೋ ನಾನ್ ನೋಡ್ತಿನಿ. ನೀರು ನೆರಳಿಲ್ಲದ ಜಾಗಕ್ಕೆ ವರ್ಗ ಮಾಡಿಸ್ತಿನಿ, ಬೇವರ್ಸಿ, ಹಲ್ಕ" ಎಂದು ಹಂದಿಯಂತೆಯೇ ಗುಟುರು ಹಾಕಿದನಂತಲ್ಲಾ, ರೇವಣ್ಣನ ಆಕಾರ, ಸಿಟ್ಟಿನಿಂದ ಆತನ ಮೂಗಿನ ಹೊಳ್ಳೆಗಳು ಅರಳಿಕೊಂಡಿದ್ದನ್ನು ನೋಡಿ ಹೆದರಿ ಹೋದ ಶೋಭಾ ನಿವೃತ್ತಿವರೆಗೂ ರಜಾ ಬರೆದು ಹೋದರಂತಲ್ಲಾ, ಥೂತ್ತೇರಿ!!

* * * * * * *

ಕುಮಾರಸ್ವಾಮಿ ಎಂಬ ಹುಲಿ ಕೆಡವಲು ಬಳ್ಳಾರಿ ಗಣಿಯಿಂದ ಎದ್ದು ಬಂದಂತಹ ಹೆಬ್ಬುಲಿಯೊಂದು ಇದ್ದಕ್ಕಿದ್ದಂತೆ ಹಲ್ಲು-ಉಗುರನ್ನು ಕೀಳಿಸಿಕೊಂಡು ಸಂಬಂಧಪಟ್ಟ ಗಾಯಕ್ಕೆ ಮುಲಾಮು ಹಚ್ಚಿಕೊಂಡು ಮುಲಕತೊಡಗಿತಂತಲ್ಲಾ, ಈ ಹೆಬ್ಬುಲಿಗೆ ಒಂದು ಫೋನ್ ಮಾಡಿ ಅದರ ಸಂಕಟ ತಿಳಿದುಕೊಳ್ಳುವುದು ನಮ್ಮ ಧರ್ಮವಲ್ಲವೆ?

"ಹಲೋ ಸಾರ್, ನಾನು ಯಾಹೂ ಅಂತ ಪತ್ರಕರ್ತ."

"ಪತ್ರಕರ್ತರ ಜೊತೆ ಮಾತನಾಡಬಾರದು ಅಂತ ನಮ್ಮ ಕಟ್ಟಾ ಶೆಟ್ಟರ್ ಹೇಳಿದಾರೆ, ಸಾರಿ ಸಾರ್."

"ಕಟ್ಟಾ ಶೆಟ್ಟರ್ ಅಂದ್ರೆ ಯಾರು ಸಾರ್?"

"ನಮ್ಮ ಜಗದೀಶ್ ಶೆಟ್ಟರ್, ಕಟ್ಟಾ ಸುಬ್ರಮಣ್ಯ ಅವರು."

"ಹಾಗಾದ್ರೆ ಆ ವಿಷಯನೆ ಬೇಡಿ. ತಮ್ಮ ಮಗಳಿಗೆ ಹ್ಯಾಪಿಬರ್ತಡೆ ಶುಭಾಶಯ ತಿಳಿಸಿ ಸಾರ್."

"ಆಯ್ತು ತಿಳಸ್ತಿನಿ."

"ಮಗಳ ಬರ್ತಡೆಗೆ ಬರಕ್ಕಾಗಲಿಲ್ಲ ಸಾರ್ ನಾನು."

"ನಾನು ಬರಕ್ಕೆ ಹೇಳಿರಲಿಲ್ಲ ಅಲ್ಲವೆ?"

"ಅದು, ಪತ್ರಿಕೆಗಳಲ್ಲಿ ನೋಡಿದೆ ಸಾರ್. ಮಕ್ಕಳ ಹುಟ್ಟುಹಬ್ಬಕ್ಕೆ ಹೇಳದೆನೂ ಬರಬಹುದು. ಅದರಲ್ಲೂ ಗಣಿ ಮಾಲೀಕರ ಮಗಳ ಹುಟ್ಟುಹಬ್ಬ ಅಂದ್ರೆ ಅವ್ರುಳ ಮದುವೆಗಿಂತ್ಲೂ ಗ್ರ್ಯಾಂಡ್ ಆಗಿರ್ತದಲ್ಲವೆ?"

"ಹಾಗೆ ಆಯ್ತು ಕಣ್ರಿ, ತುಂಬಾ ಜನ ಬಂದಿದ್ರು, ಜೊತೆಗೆ ಈ ಸರ್ಕಾರ ಬೇರೆ ನನ್ನ ಇಡೀ ಚಲನವಲನ ಗಮನಿಸುತ್ತಾ ಇತ್ತು, ಆ ಕಾರಣಕ್ಕೆ ನಾನು ಮಗಳ ಬರ್ತಡೇನೇ ಎಂಜಾಯ್ ಮಾಡಕ್ಕಾಗಲಿಲ್ಲ, ಅಷ್ಟೊಂದ್ ಗಂಡಾಂತರದಿಂದ ಪಾರಾದೆ ಕಣ್ರಿ."

"ನೀವು ಪಾರಾದಷ್ಟು ಕುಮಾರಸ್ವಾಮಿನೂ ಪಾರಾದ್ರು, ಆ ಎಸ್‌ಪಿ ಕತೆ ಹೇಳ್ರಿ ಸಾರ್."

"ಅವರಿಗೇನಾಗಿದೆ? ಅಧಿಕಾರಿಗಳು ಸಹಜವಾಗಿ ವರ್ಗಾ ಆಗ್ತಾ ಇರಬೇಕಾಗುತ್ತೆ, ಅದೇ ತರ ವರ್ಗಾ ಆಗಿದಾರೆ. ಚೆನ್ನಾಗೇ ಇದಾರಲ್ಲ....."

"ಚೆನ್ನಾಗಿ ಇರದಲ್ಲ ಸಾರ್. ಆತ ಎಲ್ಲೇ ಹೋದ್ರೂ ಬಿಜೆಪಿ ಕಾರ್ಯಕರ್ತನ ತರ ನೋಡೊ ಹಾಗೆ ಮಾಡಿಬಿಟ್ರಲ್ಲ...."

"ಆತ ಬಿಜೆಪಿ ಒಲವಿರುವ ಅಧಿಕಾರಿ ಹೌದು. ಅದಕ್ಕೆ ಅಲ್ಲವೆ ನಾನು ಇಷ್ಟು ಹೋರಾಡಿದ್ದು. ಆದರೆ ಇವತ್ತು ಯಾವುದೇ ಅಧಿಕಾರಿ ನೋಡಿ, ಯಾವುದಾದರೂ ಒಂದ್ ಪಾರ್ಟಿ ಒಲವಿನವನೇ ಆಗಿರ್ತಾನಲ್ಲವೇ?"

"ಖಂಡಿತ ಆಗಿರ್ತಾರೆ. ಆದರೆ ಅದೆಲ್ಲ ಗೌಪ್ಯವಾಗಿ ಇರ್ತದೆ. ಆದ್ರೆ ನೀವು ಈ ವ್ಯಕ್ತಿ ಕೈಗೆ ಲಾರಿ ಕೊಟ್ಟು ಚೆಡ್ಡಿ ಹಾಕಿ ನಿಲ್ಲಿಸಿ ಬಿಟ್ರಲ್ಲ ಹೇಳಿ. ಈ ಕಡೆ ಅವನನ್ನು ಉಳಿಸಿಗಳಕ್ಕಾಗಲಿಲ್ಲ, ಆ ಕಡೆ ಕುಮಾರಸ್ವಾಮಿನೂ ಕೆಡಗಕ್ಕಾಗಲಿಲ್ಲ. ಹೋಗ್ಲಿ ನಿಮ್ಮ ಮಾತನ್ನೂ ಉಳಿಸಿಕೊಳಕ್ಕಾಗಲಿಲ್ಲ. ಯಾಕ್ ಸಾರ್ ಹಿಂಗೆ ಮಾಡಿದ್ರಿ?"

"ನಮ್ಮ ಚೆನ್ನಿಗಪ್ಪನೋರು ಹೇಳಿದಂಗೆ ಯಾವುದೇ ವ್ಯಕ್ತಿಗೆ ಒಂದೊಂದು ಸಾರಿ ತಲೆ ಕೆಟ್ಟೋಗುತ್ತೆ. ಮೊನ್ನೆ ಸದನದಲ್ಲಿ ರಮೇಶ್ ಕುಮಾರ್ ಆಡಿದ ಮಾತನ್ನ ನೋಡಿದ್ರಾ? ಸ್ಪೀಕರ್ ಆಗಿದ್ದೋರು ಪಾಪ ಜಯಕುಮಾರನ್ನ 'ಐ ವಿಲ್ ಕಿಲ್ ಯು' ಅಂತ ಹೋಗಿದ್ರು. ಮರುದಿನ ತಪ್ಪಾಯ್ತು ಅಂದ್ರು. ಹೀಗೆ ಏನೇನೊ ಆಗ್ತಾಯಿರತವೆ."

"ಈಗ ನಿಮ್ಮದು ಅದೇ ತರನಾ?"

"ಹೆಚ್ಚುಕಡಿಮೆ ಅದೇ ತರ. ಆದ್ರೂ ಬಳ್ಳಾರಿ ಗಣಿಗಾರಿಕೆಲಿ ವಸೂಲಾತಿ ನೆಡಿತಾಯಿರದು ನಿಜ."

"ಅದನ್ನ ನೇರವಾಗಿ ಮುಖ್ಯಮಂತ್ರಿನೆ ವಸೂಲು ಮಾಡಿದ್ರು ಅಂತ ಹೇಳಿ ಈಗ ಉಲ್ಟ ಹೊಡೆದಿರಲ್ಲಾ ಸಾರ್?"

"ಉಲ್ಟ ಎಲ್ಲಿ ಹೇಳಿದೆ? ಆವತ್ತೇಳಿದ್ನೆ ಇವತ್ತೂ ಹೇಳ್ತಿನಿ."

"ಡೆಲ್ಲಿಗೋಗಿದ್ರಲ್ಲ, ದೇವೇಗೌಡ್ರು ಸಿಕ್ಕಿದ್ರ ಸಾರ್?"

"ಸಿಕ್ಕಿರಲಿಲ್ಲ, ಆದ್ರು ನಾನು ಕರ್ನಾಟಕಕ್ಕೋಗಿ ಏನೇಳಬೇಕು ಅಂತ ನಮ್ಮ ಲೀಡರುಗಳಿಗೆ ಹೇಳಿದ್ರಂತೆ."

"ಅಂದರೆ, ನಕ್ಸಲೈಟರು ವಸೂಲು ಮಾಡ್ತರೆ ಅಂತ ಹೇಳಿ ಅಂದ್ರ?"

"ಕುಮಾರಸ್ವಾಮಿ ಹೆಸರಲ್ಲಿ ನಕ್ಸಲೈಟರು ಹಣ ವಸೂಲು ಮಾಡ್ತರೆ ಅಂತ ನಾನೇಳಿದ್ದಲ್ಲ, ಚೆನ್ನಿಗಪ್ಪ ಹೇಳಿದ್ದು."

"ಹಾಗಾದ್ರೆ ನಕ್ಸಲೈಟರು ಕುಮಾರಸ್ವಾಮಿ ಹೆಸರಲ್ಲಿ ಹಣ ವಸೂಲು ಮಾಡ್ತರೆ. ಅಂದ್ರೆ ಕುಮಾರಸ್ವಾಮಿ ನಕ್ಸಲೈಟರ ಸಪೋರ್ಟರ್ ಅಂದಂಗಾಯ್ತಲವೆ?"

"ಹಾಗೆ ಆಯ್ತು!"

"ಮತ್ತಿನ್ನೇನು ಮಾಡ್ತಿರಿ?"

"ಚೆನ್ನಿಗಪ್ಪನ ಕೈಲಿ ನಾನಂಗಂದೇಯಿಲ್ಲ ಅಂತ ಹೇಳಿಸಿಬಿಡ್ತಿವಿ."


"ಥೂತ್ತೇರಿ!!!"

-ಯಾಹೂ

ರೆಡ್ಡಿ ಬಾಂಬ್: ಉಲ್ಟಾ-ಪಲ್ಟಾ!

ರವೀಂದ್ರ ರೇಷ್ಮೆ

1. ಅಸೆಂಬ್ಲಿ ವಿಸರ್ಜನೆಗೆ 226 ಕೋಟಿ



ಬಳ್ಳಾರಿಯ ಮೈನಿಂಗ್ ಕಿಂಗ್ ಜನಾರ್ಧನ ರೆಡ್ಡಿ ಸಿಡಿಸಿದ್ದು ಅಥವಾ ಸಿಡಿಸಲು ಹೊರಟಿದ್ದು ಕೇವಲ 150 ಕೋಟಿ ರೂಪಾಯಿಯ ಬಾಂಬ್ ಅಲ್ಲವಂತೆ.

"ಸಿ.ಎಂ. ಕುಮಾರಸ್ವಾಮಿ ಮತ್ತು ಫಾರೆಸ್ಟ್ ಮಿನಿಸ್ಟರ್ ಚೆನ್ನಿಗಪ್ಪ ಸೇರಿಕೊಂಡು ಬಳ್ಳಾರಿಯ ಐರನ್ ಓರ್ ಮಾಲೀಕರಿಂದ 150 ಕೋಟಿ ರೂಪಾಯಿ ಲಂಚ ವಸೂಲಿ ಮಾಡಿದ್ದಾರೆ. ಆದ ಕ್ಕೋಸ್ಕರವೇ ಪ್ರಾಮಾಣಿಕ, ದಕ್ಷ ಪೊಲೀಸ್ ಅಧಿಕಾರಿ ಪಂಕಜ್ ಕುಮಾರ್ ಠಾಕೂರ್ ಎಂಬ ಎಸ್.ಪಿ.ಯವರನ್ನು ಕೇವಲ 9 ತಿಂಗಳಿಗೇ ಟ್ರಾನ್ಸ್‌ಫರ್ ಮಾಡಿದ್ದು...." ಎಂಬ ಘನಘೋರವಾದ ಆರೋಪವನ್ನು ದಿನದಿಂದ ದಿನಕ್ಕೆ ಪುನರುಚ್ಚರಿಸುತ್ತ ಬಂದ ಈ ಮೈನಿಂಗ್ ರೆಡ್ಡಿಯ ಅಸಲಿ ಅಜೆಂಡಾನೇ ಬೇರೆಯಾಗಿತ್ತು.

ಮುಖ್ಯಮಂತ್ರಿಯ ವಿರುದ್ಧವೇ ಲಂಚ ಸ್ವೀಕಾರದ ಆರೋಪ ಹೊರಿಸಿ ಕೇವಲ 4 ತಿಂಗಳಲ್ಲಿಯೇ ತಮಗೆ ದಕ್ಕಿದ ಮಂತ್ರಿಗಿರಿಯ ರಾಜವೈಭವಕ್ಕೆ ಸಂಚಕಾರ ತಂದಿಟ್ಟನಲ್ಲ ಈ ರೆಡ್ಡಿ ಎಂದು ಹಳಹಳಿಸತೊಡಗಿದ ಸರ್ವಶ್ರೀ ಯಡಿಯೂರಪ್ಪ ಈಶ್ವರಪ್ಪ ರಾಮಚಂದ್ರಗೌಡಾದಿಗಳೆದುರು ಜನಾರ್ಧನ ರೆಡ್ಡಿ ಅನಾವರಣ ಮಾಡಿದ ಪ್ರಣಾಳಿಕೆಯೇ ರೋಮಾಂಚಕಾರಿಯಾಗಿತ್ತು.

"ಈ ಕುಮಾರಸ್ವಾಮಿಯನ್ನು ಕಟ್ಟಿಕೊಂಡು ಪಾರ್ಟನರ್‌ಶಿಪ್ ಸರ್ಕಾರ ನಡೆಸಿಕೊಂಡು ಹೋಗೋದಕ್ಕಿಂತ ಬನ್ನಿ ನನ್ನೊತೆಗೆ... ಅಸೆಂಬ್ಲಿ ವಿಸರ್ಜನೆ ಮಾಡಿಸಿ ಚುನಾವಣೆಗೆ ಹೋಗೋಣ.... ನಿಮಗೇನು 113 ಜನ ಎಂಎಲ್‌ಎಗಳು ಗೆದ್ದು ಬರಬೇಕಲ್ಲವ? ಆಗಲಿ, ತಲಾ 2 ಕೋಟಿಯಂತೆ ಒಟ್ಟು 226 ಕೋಟಿ ರೂಪಾಯಿ **white money** (ವೈಟ್ ಮನಿ) ನಾನು ಕೊಡಿಸ್ತೇನೆ...." ಎಂದು ಕರ್ನಾಟಕದ ರಾಜಕೀಯದ ಇತಿಹಾಸದಲ್ಲೇ ಇದುವರೆಗೂ ಯಾರೂ ಕಂಡು-ಕೇಳರಿಯದ ಡೌನ್ ಪೇಮೆಂಟ್ ಸವಾಲನ್ನು ಮಂಡಿಸಿಬಿಟ್ಟರು ಈ ಜನಾರ್ಧನ ರೆಡ್ಡಿ!!

2. ಜಂಟಿ ಶಾಸಕಾಂಗ ಸಭೆಯಲ್ಲಿ ಬಯಲುಸೀಮೆ ಬಾಂಬ್!

ಸಿಎಮ್ಮು ಮತ್ತು ಡಿಸಿಎಮ್ಮುಗಳೇ ಅಧಿಕಾರ ವಹಿಸಿಕೊಂಡು ಈ ಜನಾರ್ಧನ ರೆಡ್ಡಿ-ಬಾಂಬನ್ನು ಠುಸ್ಸೆನಿಸಬೇಕೆಂದು ಜೆಡಿಎಸ್ ಹಾಗೂ ಬಿಜೆಪಿ ವರಿಷ್ಠರ ಸಭೆ ತೀರ್ಮಾನಿಸುತ್ತಿದ್ದಂತೆಯೇ ಆ ಮೈನಿಂಗ್ ರೆಡ್ಡಿ ಬೆಂಗಳೂರಿನ ಚಾಲುಕ್ಯ ಹೋಟೆಲ್ ಪಕ್ಕದಲ್ಲಿರುವ ತಮ್ಮ 'ಪಾರಿಜಾತ' ಅಪಾರ್ಟ್‌ಮೆಂಟನಿಂದಲೇ ಕಣ್ಮರೆಯಾಗಿಬಿಟ್ಟರು....

ತಮ್ಮದೇ ಪಾರ್ಟಿಯ ಮಂತ್ರಿಗಳು ಮತ್ತು ನಾಯಕರ ಫೋನ್ ಕರೆಗಳನ್ನು ಕಟ್ ಮಾಡುತ್ತ ಅದೃಶ್ಯರಾಗುತ್ತಿದ್ದಂತೆಯೇ, ಇತ್ತ ಅಶೋಕ ಹೋಟೆಲ್ಲಿನ ಸಭಾಂಗಣದಲ್ಲಿ ಮೈತ್ರಿಕೂಟದ ಎರಡೂ ಪಾಲುದಾರ ಪಕ್ಷಗಳ ಜಂಟಿ ಶಾಸಕಾಂಗ ಸಭೆ ಜರುಗಿತು.





ಯಡಿಯೂರಪ್ಪ ಮತ್ತು ಸೂರ್ಯನಾರಾಯಣ ರೆಡ್ಡಿ

ಜನಾರ್ಧನ ರೆಡ್ಡಿಯ ರೋಷ-ಆವೇಶಗಳನ್ನು ತಣ್ಣಗಾಗಿಸುವ ತಂತ್ರಗಳ ಬಗ್ಗೆ ಚರ್ಚೆ ನಡೆಯಿತು. ಜೆಡಿಎಸ್ ಶಾಸಕ ಹಾಗೂ ಸೊಂಡೂರಿನ ಮೈನಿಂಗ್ ದೊರೆ ಸಂತೋಷ್ ಲಾಡ್ ಮಾತಿಗಾರಂಭಿಸಿ ಪಕ್ಷಭೇಧವಿಲ್ಲದೆಯೇ ಈ ಐರನ್ ಓರ್ ಲಾಬಿಯ ಸಮರ್ಥನೆಗಿಳಿದರು... "ನಮ್ಮಲ್ಯಾರೂ ಅಕ್ರಮ ಗಣಿಗಾರಿಕೆ ಮಾಡ್ತಾ ಇಲ್ಲ, ನಾವೆಲ್ಲ ಮರ್ಯಾದಸ್ತರು. ನಮ್ಮ ಎಕ್ಸ್‌ಪೋರ್ಟ್ ವ್ಯವಹಾರದಿಂದ ನೂರಾರು ಕೋಟಿ ರೂಪಾಯಿ ವರಮಾನವನ್ನು ಸರಕಾರದ ಖಜಾನೆಗೆ ತಂದು ಕೊಡ್ತಾ ಇದ್ದೇವೆ. ನಮ್ಮನ್ನೆಲ್ಲಾ ಸಾರಾಸಗಟಾಗಿ ಅಕ್ರಮ ಗಣಿಕಾರರು ಅಂತ ದೂಷಿಸೋದು ತಪ್ಪು" ಇತ್ಯಾದಿ ರಾಗವೆಳೆಯತೊಡಗಿದರು....

ಹೀಗೆ ಬಳ್ಳಾರಿಯ ಮೈನಿಂಗ್ ಲಾಬಿಯ ಆತ್ಮರತಿಯ ಮಾತುಗಳನ್ನು ಬಿತ್ತರಿಸುತ್ತಿದ್ದಂತೆಯೇ ಅವರದ್ದೇ ಜೆಡಿ(ಎಸ್) ಪಾರ್ಟಿಯ ಪಾಂಡವಪುರ ಕ್ಷೇತ್ರದ ಎಮ್ಮೆಲ್ಲೆ ಪುಟ್ಟರಾಜು ಜ್ವಾಲಾಮುಖಿಯಂತೆ ಸ್ಫೋಟಿಸಿದರು.

"ಸಾಕು ನಿಲ್ಲಿಸ್ರಿ ನಿಮ್ಮ ಬಳ್ಳಾರಿ ಜಿಲ್ಲೆ ಐರನ್ ಓರ್ ಧಣಿಗಳ ಪುರಾಣಾನಾ... ಕೋಟಿಗಟ್ಟಲೆ ದುಡ್ಡಿದೆ ಅಂತ ನೀವುಗಳೇನು ಸರ್ಕಾರ ಕಟ್ಟೋದು, ಸರ್ಕಾರ ಬೀಳಿಸೋದು, ಎಲ್ಲಾ ನಿಮ್ಮ ಕೈನಲ್ಲೇ ಇದೆಯಂತ ಭಾವಿಸಿದ್ದೀರಾ? ಬರೀ ಬಳ್ಳಾರಿಯವರೇ ನಮ್ಮ ರಾಜಕೀಯಾನ ಕಂಟ್ರೋಲ್ ಮಾಡೋದಾದ್ರೆ ನಾವುಗಳೆಲ್ಲ ಬಯಲುಸೀಮೆಯವರು, ರೈತರೂ, ಹಿಂದುಳಿದವರೆಲ್ಲಾ ಎಲ್ಲಿಗೋಗಬೇಕು? ರ್ರೀ.... ಕುಮಾರಸ್ವಾಮಿಯರೇ ಏನೋ ಸರ್ಕಾರ ರಚಿಸೋ ಭರದಲ್ಲಿ ಈ ಐರನ್ ಓರ್ ಲಾಡ್ ಬ್ರದರ್ಸ್, ರೆಡ್ಡಿ ಬ್ರದರ್ಸ್ ಅಂತ ಅವರನ್ನ ತಲೆಮೇಲೆ ಕೂರಿಸ್ಕಂಡು ಓಡಾಡಿದ್ರಲ್ಲ... ತಗಳ್ಳಿ ಇವಾಗ ನಿಮ್ಮ ತಲೆಗೇ ಗಂಡಾಂತರ ತಂದವ್ರೇ.... ಇವರನ್ನೆಲ್ಲ ಮಟ್ಟ ಹಾಕದೇ ಹೋದ್ರೆ ನಾವು, ನಮ್ಮ ಸರ್ಕಾರ, ನಮ್ಮ ಪಾರ್ಟಿ ಎಲ್ಲಾ ನಾಶ ಆಗೋಗುತ್ತೆ ಹುಷಾರ್..." ಎಂದಬ್ಬರಿಸಿ ಬಿಟ್ಟರು ಪುಟ್ಟರಾಜು!


ಅನಿರೀಕ್ಷಿತವಾಗಿ ಸಿಡಿದ ಈ ಪುಟ್ಟರಾಜು ಬಾಂಬಿನಿಂದ ದಿಗ್ಭ್ರಾಂತಗೊಂಡ ಸಭೆಯಲ್ಲಿ ಬಿಜೆಪಿಯ ಶಾಸಕ ಚಿಕ್ಕಮಗಳೂರಿನ ಸಿ.ಟಿ. ರವಿ ಕೂಡ ಆಕ್ರೋಶದಿಂದ ಆರ್ಭಟಿಸಿದರು. "ಸರ್ಕಾರ ಅಂದ್ರೆ ಬರೀ ಮಂತ್ರಿಗಳಿಗೆ ಅಧಿಕಾರ.... ಈ ಲಾಬಿಗಳಿಗೆ ಅಧಿಕಾರ, ರಾಜವೈಭವ ಅನ್ನೋ ತರ ಆಗಿಬಿಟ್ಟದೆ. ಶಾಸಕರಿಗಾಗಲಿ, ಕಾರ್ಯಕರ್ತರಿಗಾಗಲಿ ನಿಮ್ಮಗಳ ಅಧಿಕಾರದ ಲಾಭ ಏನಾದ್ರೂ ತಲುಪಿದೆಯಾ?" ಎಂದು ದನಿಗೂಡಿಸಿದರು....

ಮೈನಿಂಗ್ ಲಾಬಿಯ ಅಬ್ಬರದ ಎದುರು ಹೀಗೆ ಬಯಲುಸೀಮೆ ಗೌಡರ ಲಾಬಿಯ ಗರ್ಜನೆ ಕೇಳಿ ಬಂದೊಡನೆಯೆ ಭಾವೋದ್ವೇಗಕ್ಕೊಳಗಾಗಿದ್ದು ಅದೇ ಬಳ್ಳಾರಿ ಜಿಲ್ಲೆಯ ಜೆಡಿಎಸ್ ಶಾಸಕ ಹಾಗೂ ಜನಾರ್ಧನ ರೆಡ್ಡಿಯ ಘೋಷಿತ ಶತ್ರು ಸೂರ್ಯನಾರಾಯಣರೆಡ್ಡಿ....

ಹಿರಿಯ ನಾಯಕ ಎಂ.ಪಿ. ಪ್ರಕಾಶರ ಅನುಯಾಯಿ ಎನಿಸಿಕೊಂಡ ಈ ಸೂ. ರೆಡ್ಡಿ ಸಹ ಪಕ್ಷನಿಷ್ಠೆ ಮರೆತು ಐರನ್ ಓರ್ ಬಳ್ಳಾರಿ ಲಾಬಿಯ ಪರ ಹಾರಾಡತೊಡಗಿದರು. ಅಷ್ಟೇ ಅಲ್ಲ ವೀರಾವೇಶದಿಂದ ಪುಟ್ಟರಾಜುವಿನ ಮೇಲೆ ಕೈಯೆತ್ತುವ ಹಂತಕ್ಕೂ ಸಾಗಿದರು.

ಕೂಡಲೇ ಬಿ.ಸಿ. ಪಾಟೀಲ್, ಪುಟ್ಟಣ್ಣ ಮತ್ತಿತರ ಶಾಸಕ ಮಿತ್ರರ ಮಧ್ಯ ಪ್ರವೇಶದಿಂದಾಗಿ ಅಶೋಕಾ ಹೋಟೆಲ್ಲಿನ ಈ ಫೈವ್‌ಸ್ಟಾರ್ ಕೂಟದಲ್ಲಿಯೇ ಸಂಭವಿಸಲಿದ್ದ ಭಾರಿ ಮಾರಾಮಾರಿಯೊಂದು ಮಿಸ್ಸಾಯಿತು!


3. 'ಈ ನಾಡು' ದಾಳಿ: "ಹೆಲಿಕಾಪ್ಟರ್ ರಾಜಕುಮಾರ!"



ಇತ್ತ ಬೆಂಗಳೂರಿನಲ್ಲಿ ಬಿಜೆಪಿಯ ಎಮ್ಮೆಲ್ಸಿ ಜನಾರ್ಧನ ರೆಡ್ಡಿ ಮುಖ್ಯಮಂತ್ರಿ ಕುಮಾರಸ್ವಾಮಿಯ ವಿರುದ್ಧವೇ 150 ಕೋಟಿ ರೂಪಾಯಿ ಲಂಚ ಲೂಟಿ ಆರೋಪ ಮಾಡಿ ಭಾರೀ ಹೀರೋ ಎನಿಸಿಕೊಳ್ಳುತ್ತಿದ್ದಂತೆಯೇ ಅತ್ತ ಬಳ್ಳಾರಿ ಗಡಿಗೆ ಹೊಂದಿಕೊಂಡೇ ಇರುವ ಆಂಧ್ರ ಪ್ರದೇಶದ ಹಳ್ಳಿಗಾಡು-ಪಟ್ಟಣಗಳಲ್ಲೆಲ್ಲ ಅಲ್ಲಿನ ಅತ್ಯಧಿಕ ಪ್ರಸಾರದ ದಿನಪತ್ರಿಕೆ 'ಈ ನಾಡು'ವಿನಲ್ಲಿ ಈ ಜನಾರ್ಧನ ರೆಡ್ಡಿಯ ವಿರುದ್ಧ ವ್ಯವಸ್ಥಿತ ಪ್ರತ್ಯಾರೋಪದ ದಾಳಿಯೇ ಶುರುವಾಯ್ತು....

ಆಂಧ್ರ ಪ್ರದೇಶದ ಮುಖ್ಯಮಂತ್ರಿ ಡಾ. ವೈ. ರಾಜಶೇಖರರೆಡ್ಡಿಯವರ ಪುತ್ರ ಜಗನ್ ಜತೆ (ಈತ ಬೆಂಗಳೂರಿನ ಕೋರಮಂಗಲದಲ್ಲಿರುವ ಗೆಸ್ಟ್‌ಹೌಸ್ ನಿವಾಸಿ) ಜನಾರ್ಧನ ರೆಡ್ಡಿಯವರ ಓಬಳಾಪುರ ಮೈನ್ಸ್‌ನ ಪಾಲುದಾರಿಕೆ ವಿವರಗಳೆಲ್ಲ 'ಈ ನಾಡು'ವಿನಲ್ಲಿ ಬಿತ್ತರಿಸಲ್ಪಟ್ಟವು.





ಸುಷ್ಮಾ ಸ್ವರಾಜ್ ಮತ್ತು ಅನಂತ್ ಕುಮಾರ್

ಹಾಗೆಯೇ ಹಲವು ತಿಂಗಳ ಹಿಂದೆಯಷ್ಟೇ ಆಂಧ್ರದಲ್ಲಿ ಜಿಲ್ಲಾ ಪಂಚಾಯತ್ ಹಾಗೂ ಮಂಡಲ್ ಪಂಚಾಯತ್ ಚುನಾವಣೆಗಳು ಜರುಗಿದಾಗ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಬಿಜೆಪಿ ನಾಯಕ ಜನಾರ್ಧನ ರೆಡ್ಡಿ ಆಂಧ್ರದ ಕಾಂಗ್ರೆಸ್ ಮುಖ್ಯಮಂತ್ರಿ ರಾಜಶೇಖರ್‌ರೆಡ್ಡಿಯವರಿಗೆ ಹಣಕಾಸು ನೆರವು ನೀಡಿದ್ದನ್ನು ಕಾವ್ಯಮಯವಾಗಿ ಬಣ್ಣಿಸಿತ್ತು 'ಈ ನಾಡು' ಪತ್ರಿಕೆ....

"ಹೆಲಿಕಾಪ್ಟರ್‌ನಲ್ಲಿ ಬಂದಿಳಿದ ಬಳ್ಳಾರಿಯ ರಾಜಕುಮಾರ" ಎಂಬರ್ಥದ ಮುಖಪುಟದ ವರದಿಯಲ್ಲಿ ಹೇಗೆ ಈ ಬಳ್ಳಾರಿಯ ಐರನ್ ಓರ್ ಪ್ರಿನ್ಸ್ ಜನಾರ್ಧನ ರೆಡ್ಡಿ ಪ್ರತಿ ಸಾರಿ 5 ಕೋಟಿಯಂತೆ ಹೇಗೆ ಮೂರು ಬಾರಿ ಹೆಲಿಕಾಪ್ಟರ್ ಟ್ರಿಪ್‌ಗಳಲ್ಲಿ ಧಾವಿಸಿ ಬಂದು ಒಟ್ಟು 15 ಕೋಟಿ ರೂಪಾಯಿಯಷ್ಟು ಸಹಾಯನಿಧಿಯನ್ನು ಹೈದ್ರಾಬಾದಿಗೆ ರವಾನಿಸಿದರೆಂಬ ರೋಚಕ ವೃತ್ತಾಂತವನ್ನು ಬಿಂಬಿಸಲಾಗಿತ್ತು.

ಈ ವರದಿಗಳಿಂದ ಕೆರಳಿದ ಜನಾರ್ಧನ ರೆಡ್ಡಿ 'ಈ ನಾಡು' ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದರು.... ಆದರೆ ಇದ್ಯಾವುದರಿಂದಲೂ ಬೆದರದ ರಾಮೋಜಿರಾವ್ ಮಾಲೀಕತ್ವದ 'ಈ ನಾಡು' ಈ ರೆಡ್ಡಿ ಬ್ರದರ್ಸ್ ವಿರುದ್ಧದ (ಅಪ)ಪ್ರಚಾರಸಮರವನ್ನು ಇವತ್ತಿಗೂ ಮುಂದುವರಿಸಿದೆ!

4. ಯಡ್ಡಿ ಬದಲು ಶೆಟ್ಟರ್ ಡಿಸಿಎಂ!!

ಲಂಚದ ಆರೋಪದ ಆಧಾರದ ಮೇಲೆಯೇ ಕುಮಾರಸ್ವಾಮಿಯ ಮೈತ್ರಿಕೂಟ ಸರ್ಕಾರವನ್ನುರುಳಿಸಿ ಮರುಚುನಾವಣೆಗೆ ಹೋಗಬೇಕೆಂಬ ಜನಾರ್ಧನರೆಡ್ಡಿಯವರ 226ಕೋಟಿ ರೂಪಾಯಿ ವೈಟ್‌ಮನಿ ಸವಾಲನ್ನು ಸ್ವೀಕರಿಸುವ ಸ್ಥಿತಿಯಲ್ಲಿ ಅವರ ಬಿಜೆಪಿ ಪಾರ್ಟಿಯ ಹೈಕಮಾಂಡ್ ಲೀಡರುಗಳಾಗಲೀ ಅಥವಾ ಇದೀಗ ತಾನೇ ಮಂತ್ರಿಗಿರಿಯ ಸುಖ ಅನುಭವಿಸತೊಡಗಿರುವ ಯಡ್ಡಿ, ಈಶ್ವರ್, ಶೆಟ್ಟರ್ ಮುಂತಾದ ಸ್ಥಳೀಯ ನಾಯಕರಾಗಲೀ ಇರಲೇ ಇಲ್ಲ....

ಅದರಲ್ಲೂ ಹಿಂದೆ ಬಳ್ಳಾರಿಯಿಂದ ಸೋನಿಯಾ ಗಾಂಧಿ ವಿರುದ್ಧ ಸ್ಪರ್ಧಿಸಿದ್ದ ಸುಷ್ಮಾ ಸ್ವರಾಜ್‌ರನ್ನೇ "ರಾಜಮಾತೆ"ಯಂತೆ ಆರಾಧಿಸುವ ಜನಾರ್ಧನ ರೆಡ್ಡಿ ಖುದ್ದಾಗಿ ದೆಹಲಿಗೆ ಧಾವಿಸಿ ತಮ್ಮಲ್ಲಿದ್ದ ವಿಡಿಯೋ, ಸಿಡಿ ಮುಂತಾದ ಲಂಚ ಸ್ವೀಕಾರದ ಪುರಾವೆ ಪ್ರದರ್ಶಿಸಿದ ನಂತರವೂ ಆಕೆಯಿಂದಲೂ ಗ್ರೀನ್ ಸಿಗ್ನಲ್ ಸಿಗಲಿಲ್ಲ!

ಹೀಗೆ ಈ ರೆಡ್ಡಿ-ಬಾಂಬ್ ಸಿಡಿಯುವುದು ಅಶಕ್ಯವೆಂದು ಖಚಿತವಾಗುತ್ತಿದ್ದಂತೆಯೇ ಈ ಇಡೀ ಪ್ರಹಸನದ ಹಿಂದಿನ ಸೂತ್ರಧಾರರಾದ ಬೆಂಗಳೂರಿನ ಸಂಸದ ಹಾಗೂ ಮಾಜಿ ಕೇಂದ್ರ ಸಚಿವ ಅನಂತಕುಮಾರಜೀಯವರು ನೇಪಥ್ಯದಿಂದ ಹೊರಬಂದು ರಾಜ್ಯ ಬಿಜೆಪಿ ರಂಗಮಂಚದ ಮೇಲೆ ಮತ್ತೊಂದು ಏಕಾಂಕ ನಾಟಕಕ್ಕೆ ಚಾಲನೆ ನೀಡಿದರು.

ಮಂತ್ರಿ ಪದವಿಯಿಂದ ವಂಚಿತರಾದ ಸೀನಿಯರ್ ಎಂಎಲ್ಲೆಗಳಾದ ಆರಗ ಜ್ಞಾನೇಂದ್ರ, ವಿಶ್ವೇಶ್ವರ ಭಟ್ಟ ಕಾಗೇರಿ, ಚರಂತಿಮಠ ಹಾಗೂ ಯುವ ಆಕಾಂಕ್ಷಿಗಳಾದ ಸಿ.ಟಿ. ರವಿ ಮುಂತಾದ 25 ಮಂದಿ ಶಾಸಕರ ಗುಂಪೊಂದು ಶಂಕರಪುರಂನಲ್ಲಿರುವ ಆರೆಸ್ಸೆಸ್ ಕೇಂದ್ರ ಕಚೇರಿ 'ಕೇಶವಕೃಪಾ'ಗೆ ಮುತ್ತಿಗೆ ಹಾಕಿತು.

ಸಂಘ ಪರಿವಾರದ 'ಅದ್ವೈರ್ಯು'ಗಳಾದ ಜಯದೇವ್ ಮತ್ತಿತರ ಸಂಘ ಪರಿಚಾರಕರೆದುರು ಹಾಲಿ ಮಂತ್ರಿವರ್ಯರುಗಳ ಕಾರ್ಯವೈಖರಿಯನ್ನು ಬಿಚ್ಚಿಟ್ಟರು... "ಅಧಿಕಾರಕ್ಕೇರಿದ ಕ್ಷಣದಿಂದಲೂ ಇವರೆಲ್ಲ ನಮ್ಮ ಸಂಘದ ಆದರ್ಶಗಳು ಹಾಗೂ ಪಾರ್ಟಿಯ ಪ್ರಣಾಳಿಕೆಯನ್ನೇ ಮರೆತುಬಿಟ್ಟು ಬರೀ ವರ್ಗಾ-ವರ್ಗಿ ದಂಧೆ ಹಾಗೂ ರಿಯಲ್ ಎಸ್ಟೇಟ್ ವಹಿವಾಟುಗಳಲ್ಲೇ ಮುಳುಗಿಬಿಟ್ಟದ್ದಾರೆ...ಈ ಅಸಹ್ಯಕರ ಪ್ರವೃತ್ತಿಯನ್ನು ನೀವುಗಳು ತಕ್ಷಣವೇ ಮಧ್ಯ ಪ್ರವೇಶಿಸಿ ಚಿವುಟಿ ಹಾಕಬೇಕು" ಎಂದು ಉದಾಹರಣೆ ಸಮೇತವಾಗಿ ವಿವರಣೆ ನೀಡಿದರು....

ಈ 25 ಮಂದಿ 'ಮೌಲ್ಯಾಧಾರಿತ' ಶಾಸಕರು ಕೇಶವಕೃಪಾದ ಪರಿಚಾರಕರುಗಳಿಗೆ ದೂರಿತ್ತ ಮರುಗಳಿಗೆಯಿಂದಲೇ ಭಾಜಪದ ಪವರ್ ಸ್ಟ್ರಗಲ್‌ನ ಹೊಚ್ಚ ಹೊಸ ಆಯಾಮಕ್ಕೆ ನಾಂದಿ ಹಾಡಲಾಗಿದೆ. ಅದೆಂದರೆ ಜೆಡಿಎಸ್‌ಗೆ ತಮ್ಮ ಸಮಸ್ತ ವ್ಯಕ್ತಿತ್ವವನ್ನೇ ಸಮರ್ಪಿಸಿಕೊಂಡಂತಿರುವ (ಮಾರಿಕೊಂಡಂತಿರುವ?!) ಯಡಿಯೂರಪ್ಪನವರನ್ನು ಪದಚ್ಯುತಿಗೊಳಿಸಿ ಅವರ ಬದಲಿಗೆ ಕಂದಾಯ ಸಚಿವ ಜಗದೀಶ್ ಶೆಟ್ಟರ್ ಎಂಬ ಸಂಪನ್ನ (ಡಮ್ಮಿ ನಾಯಕ?)ರನ್ನ ಉಪಮುಖ್ಯಮಂತ್ರಿ ಪದವಿಗೇರಿಸುವುದು ಎಂಬುದು!

ಅಧಿಕಾರ ಸಿಕ್ಕಾಗಿನಿಂದ ತಮ್ಮ ಸುಪ್ರಸಿದ್ಧ ದೂರ್ವಾಸಮುನಿಯ ಮುಖವಾಡ ಕಳಚಿಕೊಂಡು ಕೊಂಚಕೊಂಚವೇ ಟಿವಿ ಕ್ಯಾಮರಾಗಳೆದುರು ಮುಗುಳ್ನಗುವ ಪರಿಪಾಠ ರೂಢಿಸಿಕೊಳ್ಳತೊಡಗಿದ್ದ ಯಡ್ಡಿಯೀಗ ತಮ್ಮದೇ ಪಕ್ಷದ ಒಡನಾಡಿಗಳೇ ಹೇಗೆ 'ಬಗಲ್‌ಮೇ ದುಶ್ಮನ್'ಗಳಾಗಿ ಕಾರಸ್ತಾನ ನಡೆಸಿರುವುದನ್ನು ಕಂಡು ಮತ್ತೆ ಕೆಳಳಿ ಕೆಂಡವಾಗಿದ್ದಾರೆ. ■

ಯಾವುದೇ ಯುದ್ಧವೂ ಆಯಾ ದೇಶದ ದುರಾದೃಷ್ಟ -ಎಚ್.ವಿ. ಮಾಲ್ಟ್ಕೆ

ಸರಿಸುಮಾರು ಅರವತ್ತು ಟಾಟಾ ಸುಮೋ. ... ಸ್ಕಾರ್ಪಿಯೋಗಳಲ್ಲಿ ಬಂದೂರಕ್ಕೂ ಅಧಿಕ ...ವಿಯ ಪಡೆಯೊಂದು ಗಣಿಯೊಂದಕ್ಕೆ ನುಗ್ಗುತ್ತದೆ. ...ಗೆ ಸಿಕ್ಕವರನ್ನು ಹಿಡಿದು ಬಡಿಯುತ್ತದೆ. ಸಿಕ್ಕಸಿಕ್ಕ ...ಹನಗಳಿಗೆಲ್ಲಾ ಬೆಂಕಿ ಹಚ್ಚುತ್ತದೆ. ನೋಡು ...ತ್ತಿದ್ದಂತೆ ಗಣಿಯಲ್ಲಿದ್ದ ಕ್ಯಾಂಟೀನ್, ಜನರೇಟರ್, ...ಪ್ಪತ್ತು ಲಕ್ಷ ರೂಪಾಯಿ ಬೆಲೆ ಬಾಳುವ ಕಲ್ಲುತೂರೆಯುವ ...ಕ್ಸವೇಟರ್, ಒಂದೂವರೆ ಕೋಟಿ ರೂಪಾಯಿ ಬೆಲೆ ...ಳುವ ಮತ್ತೊಂದು ಯಂತ್ರ, ಡ್ರಿಲ್ಲಿಂಗ್ ಮಿಷಿನುಗಳು, ...ತಿ, ಟಿಪ್ಪರ್, ಜೀಪುಗಳು ಹೀಗೆ ಎಲ್ಲಕ್ಕೂ ದಂಡೆತ್ತಿ ...ಂದ ಗೂಂಡಾ ಪಡೆ ಬೆಂಕಿ ಹಚ್ಚುತ್ತದೆ. ಬರೀ ಅರ್ಧ ...ಂಟೆಯೊಳಗೆ ದಾಳಿಗೀಡಾಗಿ ಆದ ನಷ್ಟವೇ ಸರಿ ...ಮಾರು ಎಂಟು ಕೋಟಿ ರೂಪಾಯಿಗಳು!

ಹಾಗೇ ದಾಂಧಲೆ ನಡೆಸಿ ಅಷ್ಟೇ ಸುರಕ್ಷಿತವಾಗಿ ...ರಾರಿಯಾದ ದಾಳಿಕೋರ ಪಡೆಗೆ ಬಳ್ಳಾರಿಯ ...ರಗೋಡು ಶಾಸಕ ಸೂರ್ಯನಾರಾಯಣರೆಡ್ಡಿಯೇ ...ಧಿಪತಿ.

ಇದು ಕಳೆದ ಮೇ ತಿಂಗಳ ಹದಿಮೂರರಂದು ...ಳ್ಳಾರಿ ಜಿಲ್ಲೆಯ ಸಮೀಪದ ರಾಮಗಡ್ ರೇಂಜಿನ ...ಂಎಸ್‌ಪಿಎಲ್ ಮೈನ್ಸ್ ಮೇಲಿನ ದಾಳಿಯ ಸಂಕ್ಷಿಪ್ತ ...ಪ. ಅಂದಹಾಗೆ ಎಂಎಸ್‌ಪಿಎಲ್ ಮೈನ್ಸ್‌ನ ಧಣಿಯ ...ಸರು ರಾಹುಲ್ ಬಲ್ಡೋಟಾ.

ಆಂಧ್ರದ ರೆಡ್ಡಿಗಳ ಫ್ಯೂಡಲ್ ಅಟ್ಟಹಾಸಕ್ಕಿದು ...ಾಂಪಲ್ ಅಷ್ಟೇ. ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ ...ನೈಟ್ ದಂಧೆ ಬಿದ್ದು ಗಣಿಗಾರಿಕೆ ಚಿಗುರುವುದಕ್ಕೂ, ...ಂಗ್ರೆಸ್ ಕಣ್ಣುಮುಚ್ಚಿ ಅಲ್ಲಿ ಬಿಜೆಪಿ ಅರಳುವುದಕ್ಕೂ, ...ಲ್ಲಂ, ಬಸವನಗೌಡ, ಕೊಂಡಯ್ಯರಂಥ ಹಳೇ ತಲೆಗಳು ...ಮೂಲೆಗುಂಪಾಗಿ ಜನಾರ್ಧನ ರೆಡ್ಡಿಯ ಅಧಿಪತ್ಯ ...ಸ್ಥಾಪನೆಗೊಂಡದ್ದಕ್ಕೂ, ಅಂಥಾ ಜನಾರ್ಧನ ರೆಡ್ಡಿಗೂ ...ದುರಾಳಿ ಸೂರ್ಯನಾರಾಯಣರೆಡ್ಡಿಗೂ ಠಕ್ಕರ್ ...ಂದಿದ್ದೇ ಮೇ ಹದಿಮೂರರ ಬಲ್ಡೋಟಾ ಗಣಿ ...ಮೇಲಿನ ದಾಳಿಗೆ ಮೂಲ ಕಾರಣ. ಹಾಗೆ ಹೊತ್ತಿಕೊಂಡ ...ವಾರ್ ಆಫ್ ರೆಡ್ಡೀಸ್' ಈಗ ಮುಖ್ಯಮಂತ್ರಿ ಕುಮಾರ ...ಸ್ವಾಮಿಯ ಬುಡಕ್ಕೆ 'ಗಣಿ ಲಂಚದ' ಬೆಂಕಿಯಾಗಿ ...ಬಡುತ್ತಿದೆ.


ಇವತ್ತು ಎಮ್ಮೆಲ್ಸಿ ಜನಾರ್ಧನ ರೆಡ್ಡಿ 'ಇಲ್ಲಾ, ನಾನು ...ಮುಖ್ಯಮಂತ್ರಿ ಲಂಚ ತಗೊಂಡಿದ್ದಾರೆಂದು ಹೇಳೇ ...ಇಲ್ಲ. ಮುಖ್ಯಮಂತ್ರಿಗಳ ಹೆಸರಲ್ಲಿ ಯಾರೋ ಗಣಿ ...ಮಾಲೀಕರಿಂದ ಎತ್ತುವಳಿ ಮಾಡಿದ್ದಾರೆಂದಷ್ಟೇ ಹೇಳಿದ್ದ' ...ಂದು ಉಗಿದ ಉಗುಳನ್ನೇ ನುಂಗುತ್ತಿದ್ದಾನೆಂದರೆ ಅದು ...ತನ ಮೈನ್ಸ್ ಲೂಟಿಯ ಹಿತಾಸಕ್ತಿಯೇ ಹೊರತು ...ಬೇರೆ...ತ್ತೇನಲ್ಲ. ನೂರೈವತ್ತು ಕೋಟಿಯ ಲಂಚದ ...ಆರೋಪದ ಹಿಂದಿದ್ದದ್ದೂ ಇದೇ ಹಿತಾಸಕ್ತಿ. ರೆಡ್ಡಿಗಳ ...ಗ್ಯಾಂಗ್‌ವಾರೇ ಕ್ರಮೇಣ ಬಿಜೆಪಿ-ಜೆಡಿ(ಎಸ್) ಮಾರಾ

ಬಳ್ಳಾರಿಯ ಗಣಿ ಸಂಪತ್ತಿಗಾಗಿ


ವಾರ್ ಆಫ್ ರೆಡ್ಡೀಸ್







ಮಾರಿಯಾಗಿ ರೂಪುಗೊಂಡಿದ್ದಕ್ಕೂ ಇದೇ ಕಾರಣ. ಅದು ಬಳ್ಳಾರಿಯ ರೆಡ್ಡಿಗಳ ಫ್ಯೂಡಲ್ ಹಣಾಹಣಿಯಷ್ಟೇ ಅಲ್ಲ, ಗಣಿ ಸಂಪತ್ತಿನ ಕೊಳ್ಳೆಗಾಗಿ ನಡೆಯುತ್ತಿರುವ ಜಿದ್ದಾಜಿದ್ದಿ ಕೂಡ. ಇಲ್ಲಿ ನಕಲಿ ನಕ್ಸಲೈಟರಿದ್ದಾರೆ. ಗಣಿ ಲೂಟಿಗೆ ನಿಂತ ಬಲ್ಡೋಟಾ, ಎಸ್.ಕೆ. ಮೋದಿ, ಆನಂದ್‌ಸಿಂಗ್-ದೀಪಕ್‌ಸಿಂಗ್, ಜೀನತ್ ಮೈನ್ಸ್, ಮುನೀರ್ ಮೈನ್ಸ್, ಲಾಡ್ ಬ್ರದರ್ಸ್, ಪಾರ್ವತಿ ಮೈನ್ಸ್‌ನಂಥ ಅದಿರು



ಶ್ರೀರಾಮುಲು

ಕಳ್ಳರಿದ್ದಾರೆ. ಪೊಲೀಸರು, ಪತ್ರಕರ್ತರು, ಪುಡಾರಿಗಳು ಎಲ್ಲರೂ ಗಣಿಯ ಕೊಳ್ಳದಲ್ಲಿ ಮಿಂದೆದ್ದವರೆ. ಈಗದು ರಾಜ್ಯ ರಾಜಕಾರಣವನ್ನು ಬಗ್ಗಡಗೊಳಿಸುತ್ತಿದೆ.

ಇಷ್ಟೆಲ್ಲಕ್ಕೂ ಕಾರಣವಾದ ಬಲ್ಡೋಟಾ ಗಣಿ ಮೇಲಿನ ದಾಳಿಯ ಹಿನ್ನೆಲೆಯನ್ನು ಕೆದಕುತ್ತಾ ಹೋದರೆ ಅದೂ ಕೂಡ once again ಬಳ್ಳಾರಿಯ ರೆಡ್ಡಿಗಳ ಫ್ಯೂಡಲ್ ಸಾಮ್ರಾಜ್ಯದ ಬುಡಕ್ಕೇ ಬಂದು ನಿಲ್ಲುತ್ತದೆ. ಇಲ್ಲಿಗೆ ಮೂರು ವರ್ಷದ ಹಿಂದಿನ ತನಕ ಬಳ್ಳಾರಿಯ ಪಾರುಪತ್ತೆಯಿದ್ದದ್ದು ಮುಂಡ್ಲೂರು ಫ್ಯಾಮಿಲಿಯ ಕೈಯಲ್ಲಿ. ಕೊಂಡಯ್ಯ, ಬಸವನಗೌಡ ಯಾರೇ ಸಂಸದರಾಗಿ ಗೆದ್ದಿದ್ದರೂ, ಅಲ್ಲಂ ಕೆಪಿಸಿಸಿ ಅಧ್ಯಕ್ಷರಾದರೂ ಬಳ್ಳಾರಿಯ ವಿಷಯಕ್ಕೆ ಮುಂಡ್ಲೂರು ದಿವಾಕರ ಬಾಬುವನ್ನೇ ಆಶ್ರಯಿಸಬೇಕಿತ್ತು. ದಿವಾಕರ ಬಾಬು ವಿರುದ್ಧ ಇಡೀ ಬಳ್ಳಾರಿಯನ್ನು ತಡಕಾಡಿದರೂ ಹೇಳಿಕೊಳ್ಳುವಂಥ ಒಬ್ಬೇ ಒಬ್ಬ ಎದುರಾಳಿಯೆಂದರೆ ಆತ ಬೇಡರ ಹುಡುಗ ಶ್ರೀರಾಮುಲು ಮಾತ್ರ.

ಇಲ್ಲಿಗೆ ಐದು ವರ್ಷದ ಹಿಂದೆ ಏನೇನೂ ಅಲ್ಲದ ಶ್ರೀರಾಮುಲುವನ್ನು ಓರ್ವ ಬೇಡರ ಜನನಾಯಕನನ್ನಾಗಿ ಬೆಳೆಸಿದ್ದು, ನಗರಸಭೆಗೆ ನಿಲ್ಲಿಸಿ ಗೆಲ್ಲಿಸಿದ್ದು, ಆನಂತರ ದಿವಾಕರ ಬಾಬು ವಿರುದ್ಧ ಬಿಜೆಪಿಯಿಂದ ನಿಲ್ಲಿಸಿ ಎಮ್ಮೆಲ್ಲೆಯನ್ನಾಗಿ ಮಾಡಿದ್ದು ಮತ್ತು ಆತನನ್ನು ಕ್ಯಾಬಿನೆಟ್ ದರ್ಜೆಯ ಮಂತ್ರಿಯಾಗಿಸಿದ್ದು ಜನಾರ್ಧನ ರೆಡ್ಡಿ. ಈತ ಸದ್ಯ ಬಳ್ಳಾರಿ ಜಿಲ್ಲಾ ಬಿಜೆಪಿಯ ಅಧ್ಯಕ್ಷನಷ್ಟೇ ಅಲ್ಲ; ಬಳ್ಳಾರಿ ಜಿಲ್ಲೆಯ ಮಟ್ಟಿಗೆ ಕಿಂಗ್‌ಮೇಕರ್ ಕೂಡ. ಚಂಗಾರೆಡ್ಡಿ ಎಂಬ ಯಕಶ್ಚಿತ್ ಪೊಲೀಸ್ ಪೇದೆಯ ಮಗನಾದ ಈ ಜನಾರ್ಧನ ರೆಡ್ಡಿಯ ಅಣ್ಣ ಕರುಣಾಕರ ರೆಡ್ಡಿ ಹಾಲಿ ಬಳ್ಳಾರಿಯ ಲೋಕಸಭಾ ಸದಸ್ಯ. ತಮ್ಮ ಸೋಮಶೇಖರ ರೆಡ್ಡಿ ಬಳ್ಳಾರಿ ನಗರಸಭೆಯ ಅಧ್ಯಕ್ಷನಾಗಿದ್ದ. ಪ್ರಾರಂಭದಲ್ಲಿ ಸಣ್ಣಪುಟ್ಟ ಫೈನಾನ್ಸು, ಚೀಟಿ, ಪಿಗ್ಮಿ ಅಂತ ಟೋಪಿ ಕಾಯಕ ಶುರು ಹಚ್ಚಿಕೊಂಡ ಜನಾರ್ಧನ ರೆಡ್ಡಿ 1987 ರ ಹೊತ್ತಿಗೆ ಎನ್ನೋಬಲ್ ಇಂಡಿಯಾ ಲಿಮಿಟೆಡ್ ಎಂಬ ಚೈನ್ ಕಂಪನಿಯೊಂದನ್ನು ಆರಂಭಿಸಿದ.

ಎಲ್ಲಾ ಚೈನ್ ಕಂಪನಿಗಳಂತೆ ಇಟ್ಟ ಠೇವಣಿಗೆ ಅಧಿಕ ಬಡ್ಡಿಯ ಆಮಿಷವೊಡ್ಡಿ ಪಕ್ಕದ ರಾಯಚೂರು, ಚಿತ್ರದುರ್ಗ, ಕೊಪ್ಪಳ, ದಾವಣಗೆರೆ ಜಿಲ್ಲೆಗಳ... [illegible]

...ಬಿಜೆಪಿಯಲ್ಲಿದ್ದರು. ...ಸಿರಗುಪ್ಪದ ... ಆಗ ಬಳ್ಳಾರಿ ... ಸುಷ್ಮಾ ಸ್ವರಾಜ್ ಸೋನಿಯಾ ವಿರುದ್ಧ ಬಳ್ಳಾರಿಯಿಂದ ಸ್ಪರ್ಧಿಸಿದಾಗಲೂ ಇಬ್ಬರೂ ರೆಡ್ಡಿಗಳ ಮಧ್ಯೆ ಬಿರುಕು ... ಯಿತ್ತು. ಯಾವತ್ತು ಬೇಡರ ಯುವಕ ಶ್ರೀರಾಮುಲುವನ್ನು ಜನಾರ್ಧನ ರೆಡ್ಡಿ ಬಿಜೆಪಿಗೆ ಕರೆತಂದನೋ ಕ್ರಮೇಣ ಸೂರ್ಯನಾರಾಯಣರೆಡ್ಡಿಯ ಪ್ರಭಾವ ಕ್ಷೀಣಿಸಲಾರಂಭಿಸಿತು.

ಶ್ರೀರಾಮುಲುವನ್ನು ಮುಂದಿಟ್ಟುಕೊಂಡು ಎನ್ನೋಬಲ್ ಕಂಪನಿಯ ಹೆಸರಲ್ಲಿ ನೂರಾರು ಮಂದಿಯನ್ನು ವಂಚಿಸಿದ ಜನಾರ್ಧನ ರೆಡ್ಡಿ ದುಡ್ಡಿನ ದೊಡ್ಡ ಪಾಲನ್ನು ಗಣಿ ದಂಧೆಗೆ ಹಾಕಿದ್ದ. ಆಂಧ್ರದ ಗಡಿಯ ಓಬಳಾಪುರಂನಲ್ಲಿ ಒಂದಷ್ಟು ಜಮೀನು ಖರೀದಿಸಿ ಅಲ್ಲಿ ಗಣಿಗಾರಿಕೆಗಿಳಿದ. ಕ್ರಮೇಣ ದುಡ್ಡು ಸೇರತೊಡಗಿತು. ಅದೇ ಹೊತ್ತಿಗೆ ಈತನ ಅಣ್ಣ ಕರುಣಾಕರ ರೆಡ್ಡಿ ಕಮ್ಮ ಜಾತಿಯ ಹುಡುಗಿಯೊಬ್ಬಳನ್ನು ಹಾರಿಸಿಕೊಂಡು ಹೋದ. ಆಗಲೂ ಶ್ರೀರಾಮುಲುವೇ ತನ್ನ ಹುಡುಗರ ಪಡೆ ಕಟ್ಟಿಕೊಂಡು ಜನಾರ್ಧನ ರೆಡ್ಡಿ ಕುಟುಂಬದ ರಕ್ಷಣೆಗೆ ನಿಂತಿದ್ದ. 1999 ರ ಚುನಾವಣೆ ತನಕ ಸೂರ್ಯನಾರಾಯಣ ರೆಡ್ಡಿ ಮತ್ತು ಜನಾರ್ಧನ ರೆಡ್ಡಿ ಒಟ್ಟೊಟ್ಟಿಗೇ ಇದ್ದರು. ಜನಾರ್ಧನ ರೆಡ್ಡಿಯ ಶಿಷ್ಯ ಶ್ರೀರಾಮುಲು ಬಳ್ಳಾರಿಯಿಂದ ಸೋತರೆ, ಸೂರ್ಯನಾರಾಯಣ ರೆಡ್ಡಿ ಕುರುಗೋಡಿನಿಂದ ನಿಂತು ಸೋತ.

ಮುಂದೆ ಬಳ್ಳಾರಿ ಜಿಲ್ಲಾ ಬಿಜೆಪಿಯಲ್ಲಿ ಜನಾರ್ಧನ ರೆಡ್ಡಿಯ ಕೈಯೇ ಮೇಲಾಯಿತು. ನಗರಸಭೆ ಚುನಾವಣೆಯಲ್ಲಿ ಗೆದ್ದಿದ್ದ ಸೂರ್ಯನಾರಾಯಣ ರೆಡ್ಡಿಯ ಶಿಷ್ಯರನ್ನು ಜನಾರ್ಧನ ರೆಡ್ಡಿ ತನ್ನ ಪಾಳಯಕ್ಕೆಳೆದುಕೊಂಡ. ಸಣ್ಣಪುಟ್ಟ ವಿಷಯಕ್ಕೂ ಸೂರ್ಯನಾರಾಯಣ ರೆಡ್ಡಿಯನ್ನು ಪರಿಗಣಿಸಲಿಲ್ಲ. ಆನಂತರ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಸೂರಿ ಹೇಳಿದ ಯಾರಿಗೂ ಟಿಕೆಟ್ ಸಿಗಲಿಲ್ಲ. ಅಲ್ಲಿಗೆ ಸೂರಿ ಕ್ರಮೇಣ ಎಂ.ಪಿ. ಪ್ರಕಾಶರತ್ತ ವಾಲತೊಡಗಿದ. ಸೂರಿಯ ಅಣ್ಣ ಪ್ರತಾಪ್‌ರೆಡ್ಡಿ ಹೇಳಿಕೇಳಿ ದೇವೇಗೌಡರ ನೆಚ್ಚಿನ ಬಂಟ. ಎಂ.ಪಿ. ಪ್ರಕಾಶ್‌ಗೆ ಆತ್ಮೀಯ. ಇದನ್ನೇ ಆಧಾರವಾಗಿಟ್ಟುಕೊಂಡು ಜೆಡಿಎಸ್ ಸೇರಿಕೊಂಡ ಸೂರ್ಯನಾರಾಯಣ ರೆಡ್ಡಿ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕುರುಗೋಡು ಕ್ಷೇತ್ರದಿಂದ ಗೆದ್ದುಬಿಟ್ಟ. ವಿಚಿತ್ರವೆಂದರೆ ಅದೇ ಹೊತ್ತಿಗೆ ಜನಾರ್ಧನ ರೆಡ್ಡಿಯ ಪ್ರಾಬಲ್ಯ ಕೂಡ ವೃದ್ಧಿಸಿತ್ತು. ಶ್ರೀರಾಮುಲು ಬಳ್ಳಾರಿಯಿಂದ ಗೆದ್ದಿದ್ದ. ಜನಾರ್ಧನ ರೆಡ್ಡಿಯ ಅಣ್ಣ ಕರುಣಾಕ ರೆಡ್ಡಿ ಲೋಕಸಭಾ ಸದಸ್ಯನಾಗಿ ಆಯ್ಕೆಯಾಗಿದ್ದ. ಅದಕ್ಕೂ ಮುನ್ನ ತಮ್ಮ ಸೋಮಶೇಖರ ರೆಡ್ಡಿ ಬಳ್ಳಾರಿ ನಗರಸಭೆಗೆ ಅಧ್ಯಕ್ಷನಾಗಿದ್ದ.

ಆಗಿನ್ನೂ ಕಾಂಗ್ರೆಸ್-ಜೆಡಿ(ಎಸ್) ಮೈತ್ರಿಯಿತ್ತಾದ್ದರಿಂದ ಸೂರ್ಯನಾರಾಯಣ ರೆಡ್ಡಿಯ ಕೈಯೇ ಮೇಲಾಗಿತ್ತು. ಜಿಲ್ಲಾಧಿಕಾರಿ ಅರವಿಂದ ಶ್ರೀವಾಸ್ತವ ಮತ್ತು ಎಸ್.ಪಿ. ಪಂಕಜ್ ಠಾಕೂರ್ ಇಬ್ಬರನ್ನು ಎಂ.ಪಿ. ಪ್ರಕಾಶರೇ ಬಳ್ಳಾರಿಗೆ ತಂದಿದ್ದರು. ಯಾವ ಮೈನ್ಸ್ ದೈತ್ಯ ಬಲ್ಡೋಟಾನ ಪರವಾಗಿ ಜನಾರ್ಧನ ರೆಡ್ಡಿ ಇವತ್ತು ಮುಖ್ಯಮಂತ್ರಿಯ ವಿರುದ್ಧ ಕತ್ತಿ ಮಸೆಯುತ್ತಿದ್ದಾನೋ, ಅದೇ ಬಲ್ಡೋಟಾನ ವಿರುದ್ಧ ಇಲ್ಲಿಗೆ ವರ್ಷದ ಹಿಂದೆ ಜನಾರ್ಧನ ರೆಡ್ಡಿ ಯುದ್ಧಕ್ಕಿಳಿದಿದ್ದ. ಆನಂದ್‌ಸಿಂಗ್ ಎಂಬ ಮತ್ತೊಬ್ಬ ಮೈನ್ಸ್ ದೈತ್ಯನಿಗೂ ಬಲ್ಡೋಟಾ ಕಂಪನಿಗೂ ಅದಿರುಕೊಳ್ಳೆಯ ವಿಷಯದಲ್ಲಿ ವಿವಾದವಿತ್ತು. ಬಿಜೆಪಿಯ ಶ್ರೀರಾಮುಲು ಕಡೆಯ ನೂರಾರು ಹುಡುಗರು ಆನಂದ್ ಸಿಂಗ್ ಪರವಹಿಸಿ ಬಲ್ಡೋಟಾ ಮೇಲೆ ದಾಳಿ ನಡೆಸಿದ್ದರು.

ಇದಾಗಿ ನಾಲ್ಕೈದು ತಿಂಗಳಿಗೆ ಮಾಜಿ ಶಾಸಕ ವಡ್ಡರ ನಾಗಪ್ಪನ ಮಗ ಜಯರಾಮ್‌ನ ಮಕ್ಕಳು ಎಂ.ಪಿ. ಪ್ರಕಾಶರ ಮಗ ರವೀಂದ್ರನ ಬಳಿ ದೂರು ಹೊತ್ತು ತಂದರು. ಜಯರಾಮ್‌ಗೆ ಸೇರಿದ ಜಮೀನಿನಲ್ಲಿ ಬಲ್ಡೋಟಾ ದಬ್ಬಾಳಿಕೆ ಮಾಡಿ ಅದಿರು ಕದಿಯುತ್ತಿತ್ತು. ಪೊಲೀಸು, ಜಿಲ್ಲಾಡಳಿತ ಎಲ್ಲವೂ ಬಲ್ಡೋಟಾರ ಹಗಲು ದರೋಡೆಗೆ ಕುಮ್ಮಕ್ಕು ಕೊಟ್ಟ ಫಲವಾಗಿ ಜಯರಾಮ್ ಜಮೀನಿನಲ್ಲಿದ್ದ ಅಷ್ಟೂ ಕಬ್ಬಿಣದ ಅದಿರನ್ನು ಬಲ್ಡೋಟಾ ಕಂಪನಿಯವರು ದೋಚಿಬಿಟ್ಟರು. ... ಮ್ಯಾಂಗನೀಸ್ ... [illegible]

ಕೊಂಡಯ್ಯನ ತಲೆ ಬಲ್ಡೋಟರ ಥೈಲಿ

ಬಳ್ಳಾರಿಯ ಮಟ್ಟಿಗೆ ಜನಾರ್ಧನ ರೆಡ್ಡಿ ಬಿಜೆಪಿಯಾದರೂ ಆಂಧ್ರದಲ್ಲಿ ಪಕ್ಕಾ ಕಾಂಗ್ರೆಸ್ಸು. ಆತನ ಓಬಳಾಪುರಂ ಮೈನ್ಸ್‌ನ ಕಾಲುಭಾಗವಷ್ಟೇ ಕರ್ನಾಟಕಕ್ಕೊಳಪಟ್ಟರೆ ಮುಕ್ಕಾಲು ಭಾಗ ಆಂಧ್ರದ ಅನಂತಪುರಂ ಜಿಲ್ಲೆಯಲ್ಲಿದೆ. ಆ ಕಾರಣಕ್ಕೇ ಆಂಧ್ರದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯ ಮಗ ಜಗನ್‌ಮೋಹನ್ ರೆಡ್ಡಿಯನ್ನು ತಮ್ಮ ಮೈನ್ಸ್ ದಂಧೆಗೆ ಬಳ್ಳಾರಿ ರೆಡ್ಡಿಗಳು ಪಾರ್ಟ್‌ನರ್ ಮಾಡಿಕೊಂಡರು. ಯಾವತ್ತು ಬಲ್ಡೋಟಾನ ಗಣಿಯ ಮೇಲೆ ಜೆಡಿ(ಎಸ್) ಗ್ಯಾಂಗ್ ದಾಳಿ ನಡೆಸಿತೋ ಎಂ.ಪಿ. ಪ್ರಕಾಶರನ್ನು ಹಣಿಯಲೆಂದೇ ಬಿಜೆಪಿಯ ರೆಡ್ಡಿಗಳು ಬಲ್ಡೋಟಾ ಬೆನ್ನಿಗೆ ನಿಂತರು. ಅಷ್ಟಕ್ಕೂ ಬಲ್ಡೋಟಾನ ನೆರವಿಗೆ ನಿಲ್ಲುವಂತೆ ಜನಾರ್ಧನ ರೆಡ್ಡಿಯನ್ನು ಛೂ ಬಿಟ್ಟದ್ದು ಬಳ್ಳಾರಿಯ ಮಾಜಿ ಸಂಸದ ಕೆ.ಸಿ. ಕೊಂಡಯ್ಯ.



ಹಿಂದಿನಿಂದಲೂ ಬಲ್ಡೋಟಾ ಕಂಪನಿಗೆ ಗಾಡ್‌ಫಾದರ್‌ನಂತಿದ್ದು ಅದರ ಎಲ್ಲಾ ದುರಾಚಾರವನ್ನೂ ಪೋಷಿಸುತ್ತಾ ಬಂದವನು ಕೊಂಡಯ್ಯ. ಆತನ ಬೆಂಗಳೂರಿನ ಫ್ಲಾಟು, ಓಡಾಡಲು ಹೆಲಿಕಾಪ್ಟರು, ಐಷಾರಾಮಿ ಕಾರು ಎಲ್ಲವೂ ಬಲ್ಡೋಟಾರ ಕೃಪೆಯೇ. ಯಾವತ್ತು ಬಿಜೆಪಿ-ಜೆಡಿಎಸ್ ಸರ್ಕಾರ ಬಂತೋ ಅದೇ ಹೊತ್ತಿಗೆ ಸೂರಿ ಗ್ಯಾಂಗ್ ಕೂಡ ದಾಳಿಯಿಟ್ಟದ್ದರಿಂದ ಕಂಗಾಲಾದ ಕೊಂಡಯ್ಯ ಜನಾರ್ಧನ ರೆಡ್ಡಿಯನ್ನು ರೆಡಿ ಮಾಡಿ ಬಲ್ಡೋಟಾರ ರಕ್ಷಣೆಗೆ ನಿಲ್ಲಿಸಿದ್ದಾನೆ. ಇವತ್ತು ಕುಮಾರಸ್ವಾಮಿ ವಿರುದ್ಧ ಆತ ಮಾಡಿದ ಆರೋಪದ ಹಿಂದಿರುವುದೂ ಇದೇ ಕೊಂಡಯ್ಯನ ತಲೆ ಮತ್ತು ಬಲ್ಡೋಟಾರ ಥೈಲಿಯೇ.

ಹಾಗಂಥ ಬಲ್ಡೋಟಾ ಧಣಿಗಳು ಬರೀ ಕೊಂಡಯ್ಯನನ್ನಷ್ಟೇ ನಂಬಿ ಕೂತಿಲ್ಲ. ಕಳೆದ ಎಮ್ಮೆಲ್ಸಿ ಚುನಾವಣೆಯಲ್ಲಿ ಧರ್ಮಸಿಂಗ್-ಖರ್ಗೆ ಕಾಂಗ್ರೆಸ್ ಪ್ರಚಾರಕ್ಕೆಂದು ಬಲ್ಡೋಟಾ ಕಂಪನಿಯ ಹೆಲಿಕಾಪ್ಟರಿನಲ್ಲೇ ಬಂದಿದ್ದರು. ಅದಕ್ಕೂ ಮುನ್ನ ದೇವೇಗೌಡ ಮತ್ತು ಸಿದ್ದರಾಮಯ್ಯ ಒಟ್ಟೊಟ್ಟಾಗಿ ಬಳ್ಳಾರಿಗೆ ಬಂದಾಗಲೂ ಕೊಂಡಯ್ಯನೇ ಬಲ್ಡೋಟಾರಿಗೆ ಹೇಳಿ ಹೆಲಿಕಾಪ್ಟರ್ ಕಳಿಸಿ ಕೊಟ್ಟ. ಹಾಲಪ್ಪ, ಕೇಂದ್ರ ಮಂತ್ರಿ ಪಿ. ಚಿದಂಬರಮ್ ಪತ್ನಿ ನಳಿನಿ ... [illegible] ... ಬಲ್ಡೋಟಾ ಕಂಪನಿಯ ಲೀಗಲ್ ಅಡ್ವೈಸರ್. ಬಲ್ಡೋಟಾರ ... [illegible] ... ಜನಾರ್ಧನ ರೆಡ್ಡಿ ಅದಷ್ಟೇ ಬಾಯಿ ಬಡಕೊಂಡರು.

ಕೆಪಿಎಸ್‌ಸಿ:

FDA ನೇಮಕಾತಿ ಗೋಲ್‌ಮಾಲ್


ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಈ ಮಾನಸಿಕ ಸಾಮರ್ಥ್ಯ ಅರ್ಥಾತ್ Mental ability ಪರೀಕ್ಷೆ ಇದ್ದೇ ಇರುತ್ತದೆ. ಆದರೆ ಲಕ್ಷಾಂತರ ಯುವ ಜನರ ಮಾನಸಿಕ ತರ್ಕ ಸಾಮರ್ಥ್ಯ ಪರೀಕ್ಷಿಸುವ ಕೆಪಿಎಸ್‌ಸಿ ಮುಂದಿಯೇ ಮಾನಸಿಕ ಅಸ್ವಸ್ಥರಂತೆ ವರ್ತಿಸಿದರೆ ಏನು ಮಾಡಬೇಕು?

ಪ್ರಥಮ ದರ್ಜೆ ಸಹಾಯಕರ ನೇಮಕಾತಿಯಲ್ಲಿ ಕೆಪಿಎಸ್‌ಸಿ ಇಂತಾ ಅರಳುಮರಳುತನ ತೋರಿಸಿದೆ.

ಈಗ ಆಯ್ಕೆಯಾಗಿರುವ ಎಫ್‌ಡಿಎಗಳು ತೆಗೆದಿರುವ ಮಾರ್ಕ್ಸ್, ಮೀಸಲಾತಿ ಗುಂಪು ಹಾಗೂ ನೇಮಕಗೊಂಡಿರುವ ಇಲಾಖೆಗಳನ್ನು ಚೆಕ್ ಮಾಡಿ ನೋಡಿದರೆ ಸಾಕು ಗೋಲ್‌ಮಾಲ್ ಎದ್ದು ಕಾಣುತ್ತದೆ.

ಒಟ್ಟು ಇರುವ 1065 ಹುದ್ದೆಗಳಲ್ಲಿ 529 ನ್ನು ಜನರಲ್ ಮೆರಿಟ್ಟಿನವರಿಗೆ ಮೀಸಲಾಗಿರಿಸಿದೆ. ಇದರಲ್ಲಿ ಮಹಿಳೆ, ಮಾಜಿ ಸೈನಿಕ, ಗ್ರಾಮೀಣ ಕೃಪಾಂಕ, ಕನ್ನಡ ಮೀಡಿಯಂ, ಅಂಗವಿಕಲರು ಇತ್ಯಾದಿಗಳಿಗೂ ಪ್ರತ್ಯೇಕ ಕೋಟಾ ಇತ್ತು. ಒಟ್ಟಾರೆಯಾಗಿ ಯಾವುದೇ ಪ್ರವರ್ಗ, ಗುಂಪಿಗೆ ಸೇರಿದ್ದರೂ ಸಹ ಅತೀ ಹೆಚ್ಚು ಅಂಕ ಪಡೆದವರನ್ನು ಪ್ರಥಮ ಆದ್ಯತೆ ಮೇರೆಗೆ ಜನರಲ್ ಮೆರಿಟ್ಟಿನಲ್ಲಿ ಪರಿಗಣಿಸಬೇಕಾಗುತ್ತದೆ. ಆದರೆ ಅತ್ಯುತ್ತಮ ಅಂಕಗಳಿಸಿ ಜನರಲ್ ಮೆರಿಟ್ಟಿನವರ ಸಮಕ್ಕೇ ಬಂದು ನಿಂತಿರುವ ಅಸಂಖ್ಯ ದಲಿತ, ಮಹಿಳೆ ಹಾಗೂ ಹಿಂದುಳಿದ ವರ್ಗದ ಕ್ಯಾಂಡಿಡೇಟುಗಳನ್ನು ಜಿಎಂ ಕೋಟಾದಿಂದ ಆಚೆ ನೂಕಿ ಅವರವರ ಗುಂಪಿನಲ್ಲಿ ಸಿಕ್ಕಿಸಲಾಗಿದೆ. ಈ ಪ್ರತಿಭಾವಂತರು ಅರ್ಹತಾನುಸಾರ ಜನರಲ್ ಗುಂಪಿಗೆ ಸೇರಿದ್ದರೆ ಮೀಸಲಾತಿ ಕೋಟಾದೊಳಗೆ ಇನ್ನಷ್ಟು ಹೆಚ್ಚಿನವರಿಗೆ ಕೆಲಸ ಸಿಗುತ್ತಿತ್ತು.

ಹೀಗೆಂದು ಸುಪ್ರೀಂಕೋರ್ಟ್ ಆದೇಶಗಳೇ ಇವೆ. ಸರ್ಕಾರವೂ ಆದೇಶಗಳನ್ನು ಹೊರಡಿಸಿದೆ (ಸಂಖ್ಯೆ CASC:08: CHM:95 ದಿನಾಂಕ 20.6.95). ಆದರೆ ಕೆಪಿಎಸ್‌ಸಿಗೆ ಇದ್ಯಾವ ಲೆಕ್ಕ. ಹಾಗಾಗಿ ಎಲ್ಲಾ ನಿಯಮ ಕಾಯ್ದೆಗಳನ್ನು ಗಾಳಿಗೆ ತೂರಿ ಮೀಸಲು ನೀತಿ ಉಲ್ಲಂಘಿಸಿ ತುಘಲಕ್ ದರ್ಬಾರು ನಡೆಸುತ್ತಿದ್ದಾರೆ ಅಧ್ಯಕ್ಷ ಕೃಷ್ಣ.


ಕೆಪಿಎಸ್‌ಸಿ ಕೃಷ್ಣ



ಇದಿಷ್ಟೇ ಅಲ್ಲ......

ಹೀಗೆ ಆಯ್ಕೆಯಾಗಿರುವ ಎಫ್‌ಡಿಎ ಅಭ್ಯರ್ಥಿಗಳಿಗೆ ನಿಯಮಾನುಸಾರ ಕೌನ್ಸಿಲಿಂಗ್ ನಡೆಸಿ ಅವರು ಬಯಸುವ ಇಲಾಖೆಗೆ ನೇಮಕಾತಿ ಆದೇಶ ನೀಡಬೇಕಿತ್ತು. ಆದರೆ ಕೃಷ್ಣ ಗ್ಯಾಂಗ್ ಇಲ್ಲೂ ಹುಚ್ಚಾಟ ನಡೆಸಿದೆ. ಕೆಳವರ್ಗದ ಪ್ರತಿಭಾವಂತ ಅಭ್ಯರ್ಥಿಗಳಿಗೆ ಕಡಿಮೆ ಸಂಬಳದ, ದೂರದ ಜಿಲ್ಲೆಗಳಲ್ಲಿ ನೇಮಕಾತಿ ಮಾಡಿ ಮೇಲುಜಾತಿ ಯವರಿಗೆ ಬೆಂಗಳೂರಿನ ಆಯಕಟ್ಟಿನ ಜಾಗಗಳಾದ, ಹೆಚ್ಚಿನ ಸಂಬಳ ಬರುವ ಸೆಕ್ರೆಟರಿಯೆಟ್ ಹಾಗೂ ಲೋಕಸೇವಾ ಆಯೋಗದ ಕಚೇರಿಗಳಲ್ಲೇ ಕೆಲಸ ಕೊಡಲಾಗಿದೆ.

ಉದಾಹರಣೆಗೆ 3A ಗುಂಪಿನ ಶ್ರೀಧರರಾವ್ 8 ನೇ ರ್‍ಯಾಂಕ್‌ನಲ್ಲಿದ್ದು (243 ಅಂಕ) ಬೆಂಗಳೂರಿನ ಕೆಪಿಎಸ್‌ಸಿ ಯಲ್ಲಿ ಕೆಲಸ ಕೇಳಿದ್ದರೂ ಅದನ್ನು ನಿರ್ಲಕ್ಷಿಸಿ ದೂರದ ಬಾಗಲಕೋಟೆಯ ಸೆಷನ್ಸ್ ಕೋರ್ಟಿಗೆ ನೇಮಿಸಲಾಗಿದೆ. 27 ನೇ ರ್‍ಯಾಂಕಿನ ಎಚ್.ಕೆ. ಸತೀಶ್ 234 ಮಾರ್ಕ್ಸ್ ಪಡೆದಿದ್ದರೂ ಕಡಿಮೆ ಸಂಬಳದ ಕನ್ನಡ ಸಂಸ್ಕೃತಿ ಇಲಾಖೆಗೆ ಸಾಗಹಾಕಲಾಗಿದೆ.

ಎಫ್‌ಡಿಎ ಹುದ್ದೆಯ ಸ್ಥಾನಮಾನ ಒಂದೇ ಆಗಿದ್ದರೂ ಸೆಕ್ರೆಟರಿಯೇಟ್ ಹಾಗೂ ಕೆಪಿಎಸ್‌ಸಿಗೆ ಸೇರುವವರಿಗೆ ಸಂಬಳ ಸ್ವಲ್ಪ ಹೆಚ್ಚಿರುತ್ತದೆ, ವರ್ಗಾ ಸಾಧ್ಯತೆಗಳು ಕಡಿಮೆ, ಬಹುತೇಕ ಅಂತವರೂ ಬೆಂಗಳೂರಿನಲ್ಲೇ ಇರಲು ಅವಕಾಶಗಳಿರುತ್ತವೆ.

ಕೆಪಿಎಸ್‌ಸಿಗೆ ಕೇವಲ ಜಾತಿ ತಾರತಮ್ಯ ಮಾಡುವ ದುಷ್ಟ ಗುಣವಿಲ್ಲ, ಅದು ಹೇಗೆಂದರೆ 164 ನೇ ರ್‍ಯಾಂಕಿನ ಎಸ್‌ಸಿ ಅಭ್ಯರ್ಥಿ ಸತೀಶ್ ಕುಮಾರ್ (219 ಅಂಕ)ಗೆ ಕರೆದು ಕೆಪಿಎಸ್‌ಸಿಯಲ್ಲೇ ಕೆಲಸ ಕೊಡಲಾಗಿದೆ. ಚಿರಂಜೀವಿ ಎಂಬಾತನಿಗೂ (162 ನೇ ರ್‍ಯಾಂಕ್, 219 ಅಂಕ) ಅರ್ಹತೆ ಇರದಿದ್ದಾಗಲೂ ಕೆಪಿಎಸ್‌ಸಿಗೆ ತುರುಕಲಾಗಿದೆ. ಇವೆಲ್ಲಾ ಬಹು... ಕಾಂಚಾಣ ಮಹಿಮೆಯಿಂದ ಆಗಿರುವ ನೇಮಕಾತಿಗ... ಕೌನ್ಸಿಲಿಂಗ್ ನಡೆಸದೆ ಉಂಟಾಗಿರುವ ಅಪದ... ಪರಾಗಳು.

ಇದೆಲ್ಲಕ್ಕಿಂತಾ ಮಿಗಿಲಾಗಿ ಮೀಸಲು ಕೋಟಾ... ಸೇರಿದ್ದರೂ ಜನರಲ್ ಮೆರಿಟ್ಟಿನ ಲೆವೆಲ್‌ಗೆ ಸ್ಕೋ... ಮಾಡಿರುವ ಅಭ್ಯರ್ಥಿಗಳನ್ನು ಪುನಃ ಮೀಸಲು ವ್ಯಾಪ್ತಿ... ದೂಡಿ ಇತರ ಮೀಸಲು ಅಭ್ಯರ್ಥಿಗಳಿಗೆ ಅವಕಾ... ತಪ್ಪಿಸಿ ವಂಚಿಸಿರುವ ಕೆಪಿಎಸ್‌ಸಿಯನ್ನು ತರಾಟ... ತೆಗೆದುಕೊಳ್ಳಲು ಯಾರಾದರೂ ಸಿದ್ಧರಿದ್ದಾರಾ?

ಜೂನಿಯರ್ ಕಾಲೇಜ್ ಲೆಕ್ಚರರ್ ಗೋಲ್‌ಮಾಲ್ ನೇಮಕಾತಿ

ಚೇರ್ಮನ್ ಕೃಷ್ಣ 2007 ರ ಜನವರಿಯ... ನಿವೃತ್ತಿಯಾಗುವ ಮುನ್ನ ಆದಷ್ಟು ಗೆಬರಿಕೊಂಡು... ಹೋಗಲು ದೃಢ ನಿರ್ಧಾರ ಮಾಡಿರುವಂತೆ ಕಾಣು... ತ್ತಿದೆ.

ಕೆಪಿಎಸ್‌ಸಿ ಇನ್ನೇನು ಅನೌನ್ಸ್ ಮಾಡಲಿರು... 400 ರಷ್ಟು ಜೂನಿಯರ್ ಕಾಲೇಜ್ ಲೆಕ್ಚರರ್‌ಗ... ನೇಮಕಾತಿಯೇ ಇದಕ್ಕೆ ಸಾಕ್ಷಿ.

ಒಂದು ಪೂರ್ವಭಾವಿ ಪರೀಕ್ಷೆ ಇಲ್ಲ, ಲಿಖಿ... ಸ್ಪರ್ಧಾತ್ಮಕ ಮುಖ್ಯ ಪರೀಕ್ಷೆ ಇಲ್ಲ... ಸುಮ್ಮ... ಅರ್ಜಿ ಕರೆಯುವುದು, ನಂತರ 1:5 ರಂತೆ ನೇ... ಸಂದರ್ಶನ ನಡೆಸಿ ಆಯ್ಕೆ ಪಟ್ಟಿ ಪ್ರಕಟಿಸುವುದ... ಇವರ ಹುನ್ನಾರ.

ಅಂದರೆ ಲಂಚ ಬಂದು ಬೀಳುವ ಇಂಟರ... ವ್ಯೂನೇ ಇಲ್ಲಿ ನಿರ್ಣಾಯಕ ಎಂದಾಯಿತು. ಪ್ರ... ಮೆಂಬರ್‌ಗಳೂ ಜಾತಿವಾರು, ತಲಾವಾರು ಕೋಟಾ... ಹಂಚಿಕೊಂಡು ಉದ್ಯೋಗಾಕಾಂಕ್ಷಿಗಳಿಂದ ಕಾಸ... ಕಿತ್ತುಕೊಂಡು ಜಾಗ ಖಾಲಿ ಮಾಡಿಬಿಟ್ಟರೆ ಅಲ್ಲಿ... ಸರಸ್ವತಿ ಸೇವೆ ಮಾಡಿದಂತಾಯಿತು ತಾನೆ!

(ಹಿಂದಿನ ಪುಟದಿಂದ)

ಸಂಸದ ಕೊಂಡಯ್ಯನವರ ಹೊಟ್ಟೆ ತುಂಬಿಸುತ್ತಾ ಕರ್ನಾಟಕದ ನಿಸರ್ಗ ಸಂಪತ್ತನ್ನು ನಿರಂತರವಾಗಿ ದೋಚುತ್ತಲೇ ಬಂದ ಬಲ್ಡೋಟಾರ ಅಟ್ಟಹಾಸಕ್ಕೆ ಸರಿಯಾದ ಪೆಟ್ಟು ಕೊಡಲು ಲೆಕ್ಕ ಹಾಕಿದ ಸೂರಿಗೆ ಸಿಕ್ಕವನು ಬೆಸ್ಕ್ಯೂಲ್ ಧಣಿ ಕೋನಂಕಿ ರಾಮಪ್ಪ, ಮೇ ಹದಿಮೂರರಂದು ಸರಿಸುಮಾರು ಅರವತ್ತರಷ್ಟಿದ್ದ ಟಾಟಾ ಸುಮೋ, ಸ್ಕಾರ್ಪಿಯೋ, ಟ್ರ್ಯಾಕ್ಸ್‌ಗಳಲ್ಲಿ ಐನೂರಕ್ಕೂ ಅಧಿಕ ಮಂದಿ ಸಜ್ಜಾಗಿದ್ದಾರೆ. ಜಯರಾಮ್ ಮಗ ನಿಖಿಲೇಶ್, ಕುಡಿತಿನಿ ವೆಂಕಟೇಶ್, ನಾಗರಾಜ, ಶ್ರೀನಿವಾಸ, ಮಧು ಮುಂತಾದವರ ನೇತೃತ್ವದಲ್ಲಿ ರಾಮಗಡ್ ರೇಂಜಿನ ಬಲ್ಡೋಟಾ ಗಣಿಯ ಮೇಲೆ ಯುದ್ಧೋಪಾದಿಯ ದಾಳಿ ನಡೆದಿದೆ. ಕೇವಲ ಅರ್ಧಗಂಟೆಯೊಳಗೆ ಬಲ್ಡೋಟಾರಿಗಾದ ಹಾನಿ ಬರೇ ಎಂಟು ಕೋಟಿ.

ಆ ಹೊತ್ತಿಗಾಗಲೆ ಟ್ರೈನಿಂಗಿಗೆಂದು ಇಟಲಿಗೆ ಹೋಗಿದ್ದ ಎಸ್ಪಿ ಪಂಕಜ್ ಠಾಕೂರ್ ವಾಪಸ್ಸು ಬರುವ ಹೊತ್ತಿಗಾಗಲೇ ಪೊಲೀಸರು ಕೋನಂಕಿ ರಾಮಪ್ಪ ಮತ್ತಿತರರ ಮೇಲೆ ಎಫ್.ಐ.ಆರ್ ಹರಿದಾಗಿತ್ತು, ಆದರೆ ಬಲ್ಡೋಟಾರಿಗಿದು ಸಮಾಧಾನ ತರಲಿಲ್ಲ, ಕೋನಂಕಿ ರಾಮಪ್ಪ ಹೇಳಿ ಕೇಳಿ ಕುರುಗೋಡು ಶಾಸಕ ಸೂರ್ಯನಾರಾಯಣ ರೆಡ್ಡಿಯ ಪಾರ್ಟ್‌ನರ್. ಜಯರಾಮ್ ಜಮೀನಿನಲ್ಲಿ ಕೋನಂಕಿ ರಾಮಪ್ಪನೇ ಗಣಿಗಾರಿಕೆಗಿಳಿದರೂ ಆದಕ್ಕೆ ಎಂ.ಪಿ. ರವೀಂದ್ರ ಮತ್ತು ಸೂರ್ಯನಾರಾಯಣ ರೆಡ್ಡಿ ಸ್ಲೀಪಿಂಗ್ ಪಾರ್ಟನರುಗಳಾಗಿ ಇದ್ದೇ ಇರುತ್ತಾರೆ. ಹಾಗೆಂದ ಮೇಲೆ ದಾಳಿಯಲ್ಲಿ ಅವರ ಪಾತ್ರವಿದ್ದೇ ಇದೆ. ಪೊಲೀಸರು ಎಫ್‌ಐಆರ್ ಹಾಕೋದಾದ್ರೆ ಅವರ ಮೇಲೂ ಹಾಕಲಿ ಎಂಬುದು ಬಿಜೆಪಿ ಅಧಿಪತಿ ಜನಾರ್ಧನ ರೆಡ್ಡಿಯ ಒತ್ತಾಯವಾಗಿತ್ತು,

ಟ್ರೈನಿಂಗ್ ಮುಗಿಸಿ ಬಂದ ಎಸ್ಪಿ ಪಂಕಜ್ ಅಷ್ಟಕ್ಕೇ ಸುಮ್ಮನಾಗದೇ ಈ ಪ್ರಕರಣವನ್ನು ಮತ್ತೊಮ್ಮೆ ವಿಚಾರಣೆ [illegible]


ಬಲ್ಡೋಟಾನ ಗಣಿ ಯಂತ್ರಗಳನ್ನು ಸುಟ್ಟು ಹಾಕಿರುವುದು

ಅದೇ ಹೊತ್ತಿಗೆ ಪಂಕಜ್ ಎತ್ತಂಗಡಿಯಾಯಿತು. ಇದನ್ನೇ ಬಂಡವಾಳ ಮಾಡಿಕೊಳ್ಳಲು ಜನಾರ್ಧನ ರೆಡ್ಡಿ ಗ್ಯಾಂಗ್ ಮುಂದಾಗಿದೆ. ಪತ್ರಿಕಾಗೋಷ್ಠಿ ಕರೆದದ್ದೇ ಜನಾರ್ಧನ ರೆಡ್ಡಿ ಪಂಕಜ್ ಠಾಕೂರ್ ಎತ್ತಂಗಡಿ ವಿರೋಧಿಸಿದ.

ಗಣಿ ಮಾಲೀಕರಿಂದ ಮುಖ್ಯಮಂತ್ರಿ ನೂರೈವತ್ತು ಕೋಟಿ ಕಿತ್ತಿದ್ದಾರೆಂದು ಕೂಗಾಡಿದ. ಕೆಲವೊಮ್ಮೆ ಹಾಗೆಂದು ಚೆನ್ನಿಗಪ್ಪ ಹೇಳಿದ್ದಾರೆಂದ. ಈಗ ತಾನು ಆ ರೀತಿ ಹೇಳೇ ಇಲ್ಲ, ಮುಖ್ಯಮಂತ್ರಿಗಳ ಹೆಸರಲ್ಲಿ ಇನ್ಯಾರೋ ವಸೂಲಿ ಮಾಡಿದ್ದಾರೆಂದಷ್ಟೇ ಹೇಳಿದ್ದೇನೆ ಎಂದು ಉಲ್ಟಾ ಹೊಡೆದಿದ್ದಾನೆ. ಬಹುಶಃ ವೆಂಕಯ್ಯ ನಾಯ್ಡು ಉಗಿದು ಬುದ್ಧಿ ಹೇಳಿರಬೇಕು.

ಹಾಗಾದರೆ ಮುಖ್ಯಮಂತ್ರಿಗಳ ಹೆಸರಲ್ಲಿ ವಸೂಲಿ ಮಾಡಿದ್ದು ಯಾರು? ಎಂಬ ಪ್ರಶ್ನೆಗೆ 'ಅದು ಗೊತ್ತಿಲ್ಲ' ಎನ್ನುತ್ತಿದ್ದಾನೆ ಕಿಲಾಡಿ ರೆಡ್ಡಿ. ಅದು ಚೆನ್ನಿಗಪ್ಪನೇ ಅಥವಾ ಸೂರ್ಯನಾರಾಯಣ ರೆಡ್ಡಿಯೇ?

ಸದ್ಯಕ್ಕಂತೂ ರೆಡ್ಡಿಗಳ ಕಾಳಗಕ್ಕೆ ಕದನ ವಿರಾಮ. ಸೂರ್ಯನಾರಾಯಣ ರೆಡ್ಡಿಯ ರಾಮಗಡ್ ಮೈನ್ಸ್‌ಗೂ ಜನಾರ್ಧನ ರೆಡ್ಡಿಯ ಓಬಳಾಪುರದ ಗಣಿಗೂ ಯಾವುದೇ ಆತಂಕವಿಲ್ಲ, ಹಾಗಂಥ ಈ ರೆಡ್ಡಿಗಳು ಅದ್ಯಾವತ್ತು ಒಂದಾಗುತ್ತಾರೋ, ಮತ್ತೆಂದು ಕಿತ್ತಾಡುತ್ತಾರೋ ಹೇಳಲಿಕ್ಕಾಗದು. ವಾರ್ ಆಫ್ ರೆಡ್ಡೀಸ್‌ಗೆ ಇಂಥದ್ದೇ ಕಾರಣ ಬೇಕೆಂದಿಲ್ಲ. ■

'ಲಂಕೇಶ್' ಎಫೆಕ್ಟ್

55 ಸೈಟ್ ವಾಪಸ್!

'ಲಂಕೇಶ್'ನ ಏಪ್ರಿಲ್ 12 ರ ಸಂಚಿಕೆಯಲ್ಲಿ 'ಸೈಟು ಕದಿಯುವ ಕೌನ್ಸಿಲರ್ಸ್' ವರದಿಯಲ್ಲಿ 55 ಸೈಟುಗಳನ್ನು ಆದ್ದೇಗೆ ಬೇಕಾಬಿಟ್ಟಿಯಾಗಿ ಪುಢಾರಿಗಳಿಗೆ ಹಂಚಲಾಗಿದೆ ಎಂದು ವಿವರಿಸಿದ್ದೆವು.

ಅಂದಿನಿಂದಲೇ ಗಂಗಾವತಿಯ ಜನ ನಗರಸಭೆಗೆ ಛೀ, ಥೂ ಎನ್ನಲಾರಂಭಿಸಿಬಿಟ್ಟರು. ಈಗ ಎಚ್ಚೆತ್ತ ನಗರಸಭೆ ಎಲ್ಲಾ 55 ಸೈಟ್‌ಗಳನ್ನು ವಾಪಸ್ ಕಿತ್ತುಕೊಂಡಿದೆ.

ಸರ್ವೆ ನಂ. 293/1 ರಿಂದ 11 ರವರೆಗೆ 12.20 ಎಕರೆ ಪ್ರದೇಶದಲ್ಲಿ ಪಾರ್ಕ್, ಸಾರ್ವಜನಿಕ ಉಪಯೋಗಕ್ಕಾಗಿ ಜಾಗ ಬಿಟ್ಟು 151 ಸೈಟ್‌ಗಳಿಗೆ ಅನುಮತಿ ನೀಡಲಾಗಿತ್ತು, ಆದರೆ ಲೇಔಟ್ ಮರುವಿನ್ಯಾಸಗೊಳಿಸಿದ ನಗರಸಭೆ ಕಳ್ಳರು ನಿವೇಶನ ಸಂಖ್ಯೆ 152 ರಿಂದ 207 ರವರೆಗೆ ಒಟ್ಟು 55 ಸೈಟುಗಳನ್ನು ಅಕ್ರಮವಾಗಿ ನೋಂದಣಿ ಮಾಡಿ ಗಂಗಾವತಿಯ ವಿಐಪಿಗಳೆಂಬ ಪುಢಾರಿಗಳಿಗೆ ಹಂಚಿಬಿಟ್ಟಿದ್ದರು.



ಕಳೆದ ಸಲ ನಗರಸಭೆ ಅಧ್ಯಕ್ಷನಾಗಿದ್ದ ವಾಸು ಕೊಳಗದ ಎಂಬಾತ ಸೈಟುದಾರರ ಪರ ನಿಂತು ಕಮಿಷನರ್‌ನನ್ನು ವರ್ಗಾವಣೆ ಮಾಡಿ ಎಂದು ಧರಣಿ ಮಾಡಿದ್ದ, ಕಮಿಷನರ್ ಜಯಣ್ಣನೂ ಇದರಲ್ಲಿ ಪಾಲು ಪಡೆದಿದ್ದಾನೆ ಎಂದೇ ಸುದ್ದಿ ಹಬ್ಬಿತ್ತು.

ನಮ್ಮ 'ಪತ್ರಿಕೆ' ವರದಿ ಬಂದ ಮೇಲೆ ಸೈಟುಗಳ್ಳರಿಗೆ ಭಯ ಶುರುವಾಯ್ತು, ನಂತರ ನಗರಸಭೆ ಅವಧಿ ಮುಗಿದು ಆಡಳಿತಾಧಿಕಾರಿಯ ರಾಜ್ಯ ಬಂತು. ಕೊನೆಗೂ ಕಮಿಷನರ್ ಜಯಣ್ಣ ಧೈರ್ಯ ಮಾಡಿ, 5... ಸೈಟ್‌ಗಳನ್ನು ನಗರಸಭೆಯ ಸುಪರ್ದಿಗೆ ತರುವ... ಸಫಲರಾಗಿದ್ದಾರೆ. ಮೊದಲು .ನೋಟಿಸ್ ಜಾ... ಮಾಡಿದಾಗ ವಿಐಪಿ ಪುಢಾರಿಗಳಾರೂ ಜಗ್ಗಲಿಲ್ಲ... ಆದರೆ ಕರ್ನಾಟಕ ಪುರಸಭೆ ಕಮಿಟಿ 1964 ... ಕಲಂ 107(1) ಪ್ರಕಾರ ಕ್ರಮ ಕೈಗೊಂಡರೆ ಕಷ... ಎಂದರಿತ ಪುಢಾರಿಗಳು "ಈ ಸೈಟುಗಳು ನಮ್ಮ... ಹೆಸರಿನಲ್ಲಿ ಇದ್ದುದ್ದು ಗೊತ್ತೇ ಇರ್ಲಿಲ್ಲ..." ಎಂದು ರಾಗ ಎಳೆದು ಸೈಟುಗಳನ್ನೇ... ವಾಪಸ್ ಮಾಡಿವೆ.


1 ಕೋಟಿ ಮೌಲ್ಯದ ಆಸ್ತಿ ಸರ್ಕಾರಕ್ಕೆ ಮರಳಿ ಬಂದಿದೆ. ವರ್ಷದ ವೈದ್ಯ ಪ್ರಶಸ್ತಿ ಪುರಸ್ಕೃತ ಮಾಧವಶೆಟ್ಟಿ (1 ಸೈಟು), ಜಿಲ್ಲಾ ಕಾಂಗ್ರೆ ಪ್ರಧಾನ ಕಾರ್ಯದರ್ಶಿ ಎಸ್.ಟಿ. ರೆಡ್ಡಿ (1 ಸೈಟು), ಮಾಜಿ ಸಚಿವ ನಾಗಪ್ಪ ಸಾಲೋಣಿ (1 ಸೈಟು), ಪರಗಿ ನಾಗರಾಜ (7), ಸಿದ್ದಾಪುರ ಬಸವರಾಜ (8), ವೀರಣ್ಣ ಶೆಟ್ಟಿ (3), ಸೂಗೂರಪ್ಪ (3), ಬಿ. ಸಂಗಪ್ಪ (1), ಸಿರಿಗೆರೆ ಸುನೀಲ್ (1), ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಗುರುಪಾದಗೌಡ (1), ಅನ್ಸಾರಿ ಬಾಲ ಗೌಳಿರಮೇಶ್ (2) ಹೀಗೆ ಎ... ಪಾರ್ಟಿಗಳ ಪುಢಾರಿಗಳು ನುಂಗಿದ 55 ಸೈಟುಗಳನ್ನು ಮತ್ತೆ ಹೊರಕಕ್ಕಿವೆ. ಈಗ ನಗರಸಭೆ ಮಾಜಿ ಅಧ್ಯಕ್ಷ ವಾಸು ಕೊಳಗದ, ಅದಕ್ಕೂ ಹಿಂದಿನ ಅಧ್ಯಕ್ಷ ರಾಘವೇಂದ್ರ ಶ್ರೇಷ್ಠಿ ಸ್ಥಾಯಿ ಸಮಿತಿ ಅಧ್ಯಕ್ಷ ರಾಜೋ... ಶ್ರೀನಿವಾಸ, ನೌಕರರಾದ ವೆಂಕಟೇಶ್, ಶರಣಪ್ಪ ಇವ... ಮೇಲೆ ಕ್ರಿಮಿನಲ್ ಮೊಕದ್ದಮೆ ಜಡಿಯುತ್ತಿದ್ದಾರೆ.

–ಪಾಷ...

[illegible] ಕಳೆದುಕೊಂಡವರೇ -ಎನ್. ಚಂಬರ್ಲೇನ್


ಚಿತ್ರದುರ್ಗ ಡಿ.ಸಿ.ಸಿ. ಬ್ಯಾಂಕ್

ಶಾಸಕ ಸುಧಾಕರನ ಅಧ್ಯಕ್ಷಗಿರಿಗೆ ಟಾಂಗ್?



ಕೋ-ಜಾ ಸರ್ಕಾರ ಅಸ್ತಿತ್ವಕ್ಕೆ ಬಂದಕೂಡಲೇ ಡಿಸಿಸಿ ಬ್ಯಾಂಕ್ ಅಧ್ಯಕ್ಷಗಿರಿಯಿಂದ ಸುಧಾಕರ್ ಹಠಾವೋ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಈಗ ಸುಧಾಕರ್ ಡಿಸಿಸಿ ಬ್ಯಾಂಕ್‌ನಲ್ಲಿ ಹಣ ದುರುಪಯೋಗ ಮಾಡಿಕೊಂಡಿರುವ ಆರೋಪ ಮಾತ್ರವಲ್ಲದೇ ಅವರ ಇಡೀ ಆಯ್ಕೆ ಪ್ರಕ್ರಿಯೆಯ ಮೂಲದಲ್ಲೇ ನ್ಯೂನತೆಗಳಿದ್ದು ಡಿಸಿಸಿ ಬ್ಯಾಂಕ್ ಅಧ್ಯಕ್ಷಗಿರಿಯಿಂದ ಅನರ್ಹಗೊಳಿಸಬೇಕೆಂದು ಒತ್ತಾಯಿಸಲಾಗುತ್ತಿದೆ.

ಚಿತ್ರದುರ್ಗ ಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿಯ ಎಂಟು ನಿರ್ದೇಶಕರು ಹಾಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕಂ ಶಾಸಕ ಡಿ. ಸುಧಾಕರ್ ವಿರುದ್ಧ ಹಣ ದುರುಪಯೋಗ, ಸ್ವಜನಪಕ್ಷಪಾತದ ಆರೋಪ ಹೊರಿಸಿ ರಾಜೀನಾಮೆ ನೀಡುವಂತೆ ಒತ್ತಾಯಿಸುವುದರೊಂದಿಗೆ ಮುಸುಕಿನೊಳಗಿನ ಗುದ್ದಾಟವೀಗ ಹೊಸ ಆಯಾಮ ಪಡೆದುಕೊಂಡಿವೆ. ಆಡಳಿತ ಮಂಡಳಿಯ ನಿರ್ದೇಶಕರುಗಳಲ್ಲೊಬ್ಬರಾದ ಕೆ.ಆರ್. ರಾಜು ಸೇರಿದಂತೆ ಎಂಟು ಜನ ಆಡಳಿತ ಮಂಡಳಿಯ ನಿರ್ದೇಶಕರು ಮುಖ್ಯಮಂತ್ರಿಗಳು, ಸಹಕಾರ ಮಂತ್ರಿಗಳು ಹಾಗೂ ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳಿಗೆ ಈ ಕುರಿತು ಪತ್ರ ಬರೆದಿದ್ದಾರೆ.



ಶಾಸಕ ಸುಧಾಕರ

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸುಧಾಕರ್ ವಿರುದ್ಧ ಮಾಡಲಾದ ಆರೋಪಗಳನ್ನು ಉಪಾಧ್ಯಕ್ಷ ಮಂಜುನಾಥ್ ನಿರಾಕರಿಸಿದ್ದರೂ ವಾಸ್ತವಾಂಶಗಳನ್ನು ಮುಚ್ಚಿಡಲಾಗುತ್ತಿಲ್ಲ. ಸುಧಾಕರ್ ಅಧಿಕಾರಾವಧಿ ಇನ್ನು ಕೆಲವೇ ಕಾಲ ಬಾಕಿಯಿದ್ದು ಸರಳ ಬಹುಮತದ ಬೆಂಬಲವೂ ಇಲ್ಲದ ಕಾರಣ ಸುಧಾಕರ್ ತಾವೇ ಕರೆದಿದ್ದ ಆಡಳಿತ ಮಂಡಳಿಯ ಸಭೆಯನ್ನು ಮೂರು ಬಾರಿ ಮುಂದೂಡಿದ್ದಾರೆ. ಕಾಂಗ್ರೆ-ಜೆಡಿಎಸ್ ಮೈತ್ರಿ ಸರ್ಕಾರವಿದ್ದಾಗ ಸುಧಾಕರ್‌ಗೆ ಯಾವುದೇ ಅಡಚಣೆಗಳು ಇರಲಿಲ್ಲ. ಯಾವಾಗ ಮೈತ್ರಿ ಸರ್ಕಾರ ಪತನವಾಗಿ ಕೋ-ಜಾ ಸರ್ಕಾರ ಅಸ್ತಿತ್ವಕ್ಕೆ ಬಂತೋ, ಕೂಡಲೇ ಡಿಸಿಸಿ ಬ್ಯಾಂಕ್ ಅಧ್ಯಕ್ಷಗಿರಿಯಿಂದ ಸುಧಾಕರ್ ಹಠಾವೋ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಈಗ ಸುಧಾಕರ್ ಡಿಸಿಸಿ ಬ್ಯಾಂಕ್‌ನಲ್ಲಿ ಹಣ ದುರುಪಯೋಗ ಮಾಡಿಕೊಂಡಿರುವ ಆರೋಪ ಮಾತ್ರವಲ್ಲದೇ ಅವರ ಇಡೀ ಆಯ್ಕೆ ಪ್ರಕ್ರಿಯೆಯ ಮೂಲದಲ್ಲೇ ನ್ಯೂನತೆಗಳಿದ್ದು ಡಿಸಿಸಿ ಬ್ಯಾಂಕ್ ಅಧ್ಯಕ್ಷಗಿರಿಯಿಂದ ಅನರ್ಹಗೊಳಿಸಬೇಕೆಂದು ಒತ್ತಾಯಿಸಲಾಗುತ್ತಿದೆ.

ಹಳೇ ಡೇಟಿಗೆ ರಸೀತಿ

ಡಿಸಿಸಿ ಬ್ಯಾಂಕನ್ನು ಪ್ರತಿನಿಧಿಸುವವರು ತಮ್ಮ ವ್ಯಾಪ್ತಿಯ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್‌ನಿಂದಲೇ ಪ್ರತಿನಿಧಿಸಬೇಕು. ಈ ನಿಯಮದ ಪ್ರಕಾರ ಸುಧಾಕರ್ ವೀರದಿಮ್ಮನಹಳ್ಳಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನಿಂದಲೇ ಪ್ರತಿನಿಧಿಸಬೇಕು. ಆದರೆ ಸುಧಾಕರ್ ತಮ್ಮ ವ್ಯಾಪ್ತಿಗೆ ಬಾರದ ನಗರಂಗೆರೆ ಪ್ರಾಥಮಿಕ ಸಹಕಾರ ಸಂಘದಲ್ಲಿ ಷೇರುದಾರರೆಂದು ಹಳೆಯ ದಿನಾಂಕಕ್ಕೆ ರಸೀತಿ ಹಾಕಿಸಿದ್ದಾರೆ. ನಂತರ ಪರಿಶಿಷ್ಟ ವರ್ಗಕ್ಕೆ ಸೇರಿದ ಎಚ್. ಓಬನಾಯಕ ಎಂಬಾತನಿಂದ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ಕೊಡಿಸಿ, ತಾವು ಸಾಮಾನ್ಯವರ್ಗದವರಾಗಿದ್ದರೂ ಪರಿಶಿಷ್ಟರ ಸ್ಥಾನದಿಂದಲೇ ನಿರ್ದೇಶಕರಾಗಿ ಡಿಸಿಸಿ ಬ್ಯಾಂಕ್‌ನ್ನು ಪ್ರತಿನಿಧಿಸಿದರು.

ಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಜಿಲ್ಲೆಯಾದ್ಯಂತ 10 ಜನ ರೈತ ಪ್ರತಿನಿಧಿಗಳು ಆಯ್ಕೆಯಾಗಿದ್ದರು. ಆಗ ನಾಲ್ಕು ಜನ ನಿರ್ದೇಶಕರ ಬೆಂಬಲ ಸುಧಾಕರ್‌ಗೆ ದೊರೆತರೂ ಉಳಿದ ಆರು ಜನ ನಿರ್ದೇಶಕರು ವಿರೋಧಿಸಿದರು. ಆಗ ಕಾಂಗ್ರೆಸ್ ಉಸ್ತುವಾರಿ ಸರ್ಕಾರವಿದ್ದುದರಿಂದ ಸುಧಾಕರ್ ತಮ್ಮ ಹಣಬಲ, ರಾಜಕೀಯ ಪ್ರಭಾವಗಳೆರಡನ್ನೂ ಬಳಸಿ 6 ನಾಮ ನಿರ್ದೇಶನಗಳನ್ನು ಮಾಡಿಸಿ, ಬಹುಮತದ ಜಾದೂ ತೋರಿಸಿ ಅನಾಯಾಸವಾಗಿ ಅಧ್ಯಕ್ಷಗಾದಿಗೇರಿದರು. ಸುಧಾಕರ್ ಹಂತಹಂತವಾಗಿ ಅಧ್ಯಕ್ಷಗಾದಿಗೇರುತ್ತಿದ್ದಂತೆ ಅವರು ಪ್ರತಿನಿಧಿಸಿರುವ ನಗರಂಗೆರೆ ಪ್ರಾಥಮಿಕ ಸಹಕಾರ ವ್ಯವಸಾಯ ಬ್ಯಾಂಕ್‌ನ ನಿರ್ದೇಶಕ ಸ್ಥಾನದಿಂದ ಸುಧಾಕರ್‌ನ್ನು ಅನರ್ಹಗೊಳಿಸಬೇಕೆಂದು ಸಹಕಾರಿ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯದಲ್ಲಿ ಮೊಕದ್ದಮೆಯೊಂದನ್ನು ಹೂಡಲಾಯಿತು. ಈ ಪ್ರಕರಣ ಇತ್ಯರ್ಥವಾಗಿ ಸುಧಾಕರ್ ಪ್ರತಿನಿಧಿತ್ವ ವಜಾ ಆಗಿದ್ದಲ್ಲಿ ನಗರಂಗೆರೆ ಪ್ರಾಥಮಿಕ ಸಹಕಾರ ಸಂಘದ ನಿರ್ದೇಶಕ ಸ್ಥಾನ, ಡಿಸಿಸಿ ಬ್ಯಾಂಕ್ ಅಧ್ಯಕ್ಷಗಿರಿ, ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಸ್ಥಾನಗಳೆಲ್ಲಾ ತಾನೇ ತಾನಾಗಿ ಅನರ್ಹಗೊಂಡು, ಆರು ವರ್ಷಗಳ ಕಾಲ ಸಹಕಾರಿ ವಲಯದಿಂದ ಪ್ರತಿನಿಧಿಸುವ ಅರ್ಹತೆಯನ್ನೇ ಕಳೆದುಕೊಳ್ಳಬೇಕಾಗುತ್ತಿತ್ತು. ಪ್ರಕರಣ ಇತ್ಯರ್ಥವಾಗದ ಕಾರಣ ಅಧ್ಯಕ್ಷಗಿರಿ ಮುಂದುವರಿಯುತ್ತಿದೆ.

ಇಂದಲ್ಲ ನಾಳೆ ಈ ಬೆಳವಣಿಗೆಗಳು ತಮ್ಮ ಸ್ಥಾನಕ್ಕೆ ಕುತ್ತು ತರಲಿವೆ ಎಂದು ಭಾವಿಸಿದ ಸುಧಾಕರ್ ವೀರದಿಮ್ಮನಹಳ್ಳಿ ಸಹಕಾರ ಸಂಘದಲ್ಲಿ ಮತ್ತೆ ಷೇರುದಾರರಾಗಿದ್ದಾರೆ. ಸಹಕಾರಿ ನಿಯಮಾವಳಿಗಳ ಪ್ರಕಾರ ದ್ವಿಸದಸ್ಯತ್ವ ಪಡೆಯುವಂತಿಲ್ಲ. ವಿಪರ್ಯಾಸವೆಂದರೆ ಕಳೆದ ವರ್ಷ ನಗರಂಗೆರೆ ಆಡಳಿತ ಮಂಡಳಿಗೆ ಚುನಾವಣೆ ನಡೆದು ಸುಧಾಕರ್ ನಿರ್ದೇಶಕ ಸ್ಥಾನ ರದ್ದಾಗಿದ್ದರೂ ಪವಾಡ ಸದೃಶ ರೀತಿಯಲ್ಲಿ ಅಧ್ಯಕ್ಷರಾಗಿ ಮುಂದುವರಿಯುತ್ತಿದ್ದಾರೆ.


ತಮ್ಮನ್ನು ನಿರ್ದೇಶಕರಾಗಿ ಆಯ್ಕೆ ಮಾಡದ ಕಾರಣಕ್ಕೆ ಅಸಮಾಧಾನಗೊಂಡ ಸುಧಾಕರ್ ನಗರಂಗೆರೆ ಪ್ರಾಥಮಿಕ ಸಹಕಾರ ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದ 37 ಜನ ರೈತರು ಸಾಲ ಪಾವತಿ ಮಾಡಿ, ಶೇ. 4 ರ ಬಡ್ಡಿ ದರದಲ್ಲಿ ಮತ್ತೆ ಸಾಲ ಪಡೆಯಲು ಮುಂದಾದಾಗ, ಇದೇ ಬ್ಯಾಂಕ್‌ನಲ್ಲಿ ಹಿಂದೆ ಐಸಿಡಿಪಿ ಸ್ಕೀಂನಲ್ಲಿ ನಡೆದಿದೆಯೆನ್ನಲಾದ ಅವ್ಯವಹಾರದ ತನಿಖೆ ನಡೆಸಲು ಸೂಚಿಸಿ ಬೆಳೆ ಸಾಲ ನೀಡದಂತೆ ತಡೆಯೊಡ್ಡಿದ್ದಾರೆ. ಐಸಿಡಿಪಿ ಸ್ಕೀಂನಲ್ಲಿ ಅವ್ಯವಹಾರ ಎಸಗಿದವರ್ಯಾರೋ? ಏನೋ? 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರು' ಎಂಬಂತೆ ಅವ್ಯವಹಾರ ತನಿಖೆಯ ಹೆಸರಲ್ಲಿ ಸಕಾಲದಲ್ಲಿ ಸಾಲ ಮರುಪಾವತಿ ಮಾಡಿದ ರೈತರಿಗೂ ಬೆಳೆ ಸಾಲ ನೀಡದಂತೆ ತಡೆದಿದ್ದಾರೆ. ಕೊನೆಗೆ ರೈತರು ಮುಖ್ಯಮಂತ್ರಿಗಳ ಮೊರೆ ಹೋಗಿದ್ದಾರೆ. ಮುಖ್ಯಮಂತ್ರಿಗಳ ಅಪರ ಕಾರ್ಯದರ್ಶಿಗಳು, ಸಹಕಾರ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದ್ದರೂ ಇಂದಿನವರೆಗೂ ರೈತರಿಗೆ ಸಾಲ ಕೊಟ್ಟಿಲ್ಲ.

ಕೋಟಿ ಲೆಕ್ಕದ ಡಿಸ್ಕೌಂಟ್ ವ್ಯವಹಾರ


ಕರ್ನಾಟಕ ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ನಂ. ಸಿ.ಆರ್.ಡಿ/147/ಕೆ.ಸಿ.ಎಸ್. 88-89 ರ ಪ್ರಕಾರ ಸಹಕಾರ ಬ್ಯಾಂಕುಗಳಲ್ಲಿ ಯಾವುದೇ ಖಾಸಗಿ ವ್ಯಕ್ತಿಗಳು ಚೆಕ್‌ಗಳನ್ನು 'ಡಿಸ್ಕೌಂಟ್' ಮಾಡುವಂತಿಲ್ಲ. ಆದರೂ ಈ ನಿಬಂಧನೆಯನ್ನು ಉಲ್ಲಂಘಿಸಿ 30.09.05 ರಿಂದ 1.04.06 ರವರೆಗೆ 1 ಕೋಟಿ 20 ಲಕ್ಷ ರೂ. ಮತ್ತು 16.01.06 ರಿಂದ 04.02.06 ರವರೆಗೆ 1 ಕೋಟಿ 23 ಲಕ್ಷ, ಒಟ್ಟು 2ಕೋಟಿ 43 ಲಕ್ಷ ರೂಗಳನ್ನು ಕೋಲಾರ ಗ್ರಾಮೀಣ ಬ್ಯಾಂಕ್‌ನ ಮಾಚೇನಹಳ್ಳಿ ಶಾಖೆಯಲ್ಲಿನ ತಮ್ಮ ಖಾತೆಯ ಚೆಕ್‌ಗಳನ್ನು ಡಿಸಿಸಿ ಬ್ಯಾಂಕಿನ ಚಳ್ಳಕೆರೆ ಶಾಖೆಯಲ್ಲಿ ತಮ್ಮ ಚಿಕ್ಕಪ್ಪ, ಮಾಜಿ ಸಚೇತಕ ಜಯಣ್ಣನವರ ಮಕ್ಕಳಾದ ಜೆ. ನಿರ್ಮಲ್ ಕುಮಾರ್ ಹಾಗೂ ವೆಂಕಟೇಶ್‌ರ ಹೆಸರಿನಲ್ಲಿ 'ಡಿಸ್ಕೌಂಟ್' ಮಾಡಿಸಿಕೊಂಡು ನಗದು ಹಣ ಪಡೆದಿದ್ದಾರೆ. ಶಾಖೆಯ ಚೆಕ್‌ನ್ನು (ನಂ. 363711) ಚಿತ್ರದುರ್ಗ ಜಿಲ್ಲಾ ಸಹಕಾರ ಬ್ಯಾಂಕ್‌ನಲ್ಲಿ 35 ಲಕ್ಷ ರೂ. ಮೊತ್ತಕ್ಕೆ ಸುಧಾಕರ್ ಸ್ವತಃ ತಮ್ಮ ಹೆಸರಿನಲ್ಲೇ ಡಿಸ್ಕೌಂಟ್ ಮಾಡಿಸಿಕೊಂಡಿದ್ದಾರೆ.



ಪ್ರಕಾಶ್



ಪಾಪನಾಯ್ಕ ಉರುಫ್ ಕೊಡ್ಲಿ



ಕೆ.ಆರ್. ರಾಜು

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಮಂಜುನಾಥ್ ಈ ಡಿಸ್ಕೌಂಟ್ ವ್ಯವಹಾರದಿಂದ ಬ್ಯಾಂಕಿಗೆ 6.5 ಲಕ್ಷ ರೂ. ಬಡ್ಡಿ ಬಂದಿದೆ ಎಂದು ಸಮರ್ಥಿಸಿಕೊಂಡು ತಿಪ್ಪೆ ಸಾರಿಸುವ ಕೆಲಸ ಮಾಡಿದ್ದಾರೆ. ಹಾಗೆ ಕೋಟಿಗಳ ಲೆಕ್ಕದಲ್ಲಿ ಡಿಸ್ಕೌಂಟ್ ಚೆಕ್ ವ್ಯವಹಾರ ನಡೆಸುವುದಾದರೆ ಜಿಲ್ಲೆಯ ವಾಣಿಜ್ಯೋದ್ಯಮಿಗಳೆಲ್ಲಾ ಕ್ಯೂ ನಿಂತುಬಿಡಬಲ್ಲರು. ಆಗ ಸಹಕಾರ ಬ್ಯಾಂಕುಗಳನ್ನೇ ನಂಬಿಕೊಂಡಿರುವ ರೈತರ ಕತೆ ಏನಾಗಬೇಡ? ಸುಧಾಕರ್ ಅಂದಾದುಂದಿ ಕಾರ್ಯಶೈಲಿಗೆ ಇದು ಮತ್ತೊಂದು ನಿದರ್ಶನ.

ಪ್ರಕಾಶ್‌ಗೆ ರಕ್ಷಣೆ

ಚಳ್ಳಕೆರೆ ಶಾಖೆಯ ಮ್ಯಾನೇಜರ್ ಪ್ರಕಾಶ್ ಸುಧಾಕರ್‌ರ ಜಾತಿಗೆ ಸೇರಿದವ. ಈತ ಸುಮಾರು 10 ಲಕ್ಷ ರೂಪಾಯಿ ಹಿಗ್ಗಿ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾನೆ. ಈ ಬಗ್ಗೆ ಸಹಕಾರ ಸಂಘಗಳ [illegible] ಪರಿಶೋಧನಾ ಉಪನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಕೂಡಾ ಬರೆದಿದ್ದಾರೆ. ಆದರೂ ಪ್ರಕಾಶ್ ಮೇಲೆ ಯಾವುದೇ ರೀತಿಯ ಶಿಸ್ತುಕ್ರಮ [illegible] ಇದಕ್ಕೆ ತಕ್ಕ ಹಾಕಿದಾರೆ ಕೋಟಿಗಟ್ಟಲೆ ಡಿಸ್ಕೌಂಟ್ ವ್ಯವಹಾರಕ್ಕೆ ಸಹಕರಿಸಿದವನ ಮೇಲೆ ಕ್ರಮ ಕೈಗೊಳ್ಳುವುದಾದರೂ ಹೇಗೆ? ಈತ ಬ್ಯಾಂಕಿನಲ್ಲಿ ಮಹಿಳಾ ಸಿಬ್ಬಂದಿಯೋರ್ವರಿಗೆ ಕಿರುಕುಳ ನೀಡಿದ ಆರೋಪದ ಮೇಲೆ ಮೊಕದ್ದಮೆಯೊಂದನ್ನು ಎದುರಿಸುತ್ತಿದ್ದಾನೆ. ಇಷ್ಟಾಗಿಯೂ ಈತ ಸೇಫ್!

ಅಪರಾಧಿ ಹಿನ್ನೆಲೆ-ಮನ್ನಣೆ

ರಾಜ್ಯ ಅಪೆಕ್ಸ್ ಬ್ಯಾಂಕಿನಿಂದ ಡಿಸಿಸಿ ಬ್ಯಾಂಕಿಗೆ ಪ್ರತಿನಿಧಿಯೊಬ್ಬರನ್ನು ನೇಮಿಸಲಾಗುತ್ತದೆ. ಸಾಮಾನ್ಯವಾಗಿ ಸಹಕಾರಿ ರಂಗದಲ್ಲಿ ಅನುಭವಿಗಳಾದಂತಹ ಹಿರಿಯ ಸಹಕಾರಿಗಳನ್ನು ಡಿಸಿಸಿ ಬ್ಯಾಂಕಿಗೆ ನೇಮಿಸಲಾಗುತ್ತದೆ. ಆದರೆ ಶಾಸಕ ಸುಧಾಕರ್ ಹಲವು ಹೊಡೆದಾಟಗಳಲ್ಲಿ ಭಾಗಿಯಾದ ಹಿನ್ನೆಲೆಯಿರುವ ಕೆ. ಪಾಪನಾಯಕ ಅಲಿಯಾಸ್ ಕೊಡ್ಲಿ ಎಂಬಾತನನ್ನು ಅಪೆಕ್ಸ್‌ನ ಪ್ರತಿನಿಧಿಯಾಗಿ ಡಿಸಿಸಿ ಬ್ಯಾಂಕಿಗೆ ನೇಮಕ ಮಾಡಿಸುತ್ತಾರೆ. ಚಳ್ಳಕೆರೆಯಲ್ಲಿ ಈಗಲೂ ಮಹದೇವಿ ಬಸ್ ಏಜಂಟ್‌ನಾಗಿರುವ ಪಾಪನಾಯಕನಿಗೆ ಸಹಕಾರಿರಂಗದ ಓನಾಮಗಳೇ ಗೊತ್ತಿಲ್ಲ.

ಅಧಿಕಾರವಿದ್ದರೆ ನಮಗೇ ಇರಲಿ

ಕಳೆದ ಮಾರ್ಚ್‌ನಲ್ಲಿ ಚಳ್ಳಕೆರೆ ಟಿಎಪಿಸಿಎಂಎಸ್‌ನ ಆಡಳಿತ ಮಂಡಳಿಗೆ ಚುನಾವಣೆ ನಡೆಯಿತು. ಇದರಲ್ಲಿ ಜೆಡಿಎಸ್‌ನ ನಾಲ್ವರು ಗೆದ್ದು, ಕಾಂಗ್ರೆಸ್‌ನ ನಾಲ್ವರು ಸೋತರು. ಹಿಂದೆಯೇ ಡಿಸಿಸಿ ಬ್ಯಾಂಕಿನಿಂದ ಪ್ರತಿನಿಧಿಯಾಗಿ ಎನ್. ಜಗದೀಶ್ ಎಂಬುವವರನ್ನು ನಾಮ ನಿರ್ದೇಶನ ಮಾಡಲಾಗಿತ್ತು. ಐದು ಜನರನ್ನೊಳಗೊಂಡ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬಂದು ಅಧ್ಯಕ್ಷಗಾದಿ ಜೆಡಿಎಸ್‌ನ ಪಾಲಾಗುತ್ತದೆ ಎಂದರಿತ ಶಾಸಕ ಸುಧಾಕರ್ ಅಧಿಕಾರವಿದ್ದರೆ ನಮಗೇ ಇರಲಿ ಎಂಬ ಧೋರಣೆಯಿಂದ ತಮಗಿರುವ ಅಧಿಕಾರವನ್ನು ದುರುಪಯೋಗ ಮಾಡಿ, ಡಿಸಿಸಿ ಬ್ಯಾಂಕಿನಿಂದ ಮಾಡಲಾಗಿದ್ದ ಎನ್. ಜಗದೀಶ್‌ರ ನಾಮನಿರ್ದೇಶನವನ್ನು ಏಕಪಕ್ಷೀಯವಾಗಿ ವಾಪಸು ಪಡೆದರು. ಆಗ ಆಡಳಿತ ಮಂಡಳಿ ರಚನೆ ವಿಷಯ ನೆನೆಗುದಿಗೆ ಬಿದ್ದಂತಾಗಿ ಆಡಳಿತಾಧಿಕಾರಿ ನೇಮಕವಾಗುವಂತೆ ನೋಡಿಕೊಂಡರು.

ಸುಧಾಕರ್‌ಗೆ ಡಿಸಿಸಿ ಬ್ಯಾಂಕಿನ ಅಧ್ಯಕ್ಷಗಿರಿ ತಮ್ಮ ಖಾಸಗಿ ವ್ಯವಹಾರಕ್ಕೆ, ರಾಜಕೀಯ ಚದುರಂಗದಾಟಕ್ಕೆ ದಾಳವಾಯಿತೇ ವಿನಃ ಸಹಕಾರಿಗಳ ಅಭ್ಯುದಯಕ್ಕೆ ಉಪಯೋಗವಾಗಲೇ ಇಲ್ಲ. ಅಧಿಕಾರಾವಧಿಯುದ್ದಕ್ಕೂ ಸುಧಾಕರ್ ಡಿಸಿಸಿ ಬ್ಯಾಂಕ್ ಅಧ್ಯಕ್ಷಗಿರಿಗೆ ನ್ಯಾಯ ಸಲ್ಲಿಸಲಿಲ್ಲ. ಇನ್ನು ತಾಲ್ಲೂಕು ಶಾಖೆಗಳಿಗೆ ಭೇಟಿ ನೀಡುವುದು, ಪರಾಮರ್ಶೆ ನಡೆಸುವುದು ಕನಸಿನ ಮಾತಾಯಿತು. ವಿಪರ್ಯಾಸವೆಂದರೆ ಸುಧಾಕರ್ ಹಸ್ತಕ್ಷೇಪದಿಂದಾಗಿ ಚಳ್ಳಕೆರೆ ತಾಲ್ಲೂಕಿನ ಸ್ತ್ರೀ ಶಕ್ತಿ ಸಂಘಗಳು ಮರುಪಾವತಿಯಲ್ಲಿ ಹಿಂದೆ ಬಿದ್ದಿವೆ. ಸಹಕಾರಿ ಬ್ಯಾಂಕುಗಳು ಯಾವಾಗಲೂ ರಾಜಕೀಯ ಪ್ರಭಾವಿಗಳ, ಉಳ್ಳವರ ಅಧಿಕಾರ ದಾಹಕ್ಕೆ ಬಲಿಯಾಗಿ ಹೇಗೆ ಸಾಧನೆಯಲ್ಲಿ ಹಿನ್ನಡೆಯುತ್ತವೆ ಎಂಬುದಕ್ಕೆ ಚಿತ್ರದುರ್ಗ ಡಿಸಿಸಿ ಬ್ಯಾಂಕು ಮತ್ತು ಅದರ ಸುಧಾಕರ್ ಒಂದು ಉದಾಹರಣೆಯಷ್ಟೇ.

-[illegible]

ನೂತನ ಎಂ.ಡಿ. ರವೀಂದ್ರರಿಗೊಂದು ಕಿವಿಮಾತು

ಹಿಂದೆ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಸಿರಾಜ್ ಖಾಲಿದ್ ಅಹ್ಮದ್ ಕೈಚಳಕದಿಂದಾಗಿ ಡಿಸಿಸಿ ಬ್ಯಾಂಕಿನ ನೌಕರ ವಲಯ ರೋಸಿಹೋಗಿತ್ತು. ಸಂಘಗಳಿಗೆ ಸಾಲ ಬಿಡುಗಡೆ ಮಾಡುವಾಗ ಪರ್ಸೆಂಟೇಜು ಕೇಳುವುದು, ನೌಕರರಿಗೆ ವರ್ಗಾವಣೆ ಬೆದರಿಕೆ ಹಾಕಿ ವಸೂಲಿ ಮಾಡುವುದು, ಮುಂಬಡ್ತಿಗೆ ಹಣ ಪೀಕುವುದು [illegible] ಆದಾಯ ಮೂಲಂಗಳಿರುವೆಡೆಯೆಲ್ಲಾ ಎಡತಾಕುವುದು ಈತನ ಚಾಳಿಯಾಗಿತ್ತು. ಈತನ ವರ್ಗಾವಣೆಯ [illegible] ಬಂದಾಗ ಡಿಸಿಸಿ ಬ್ಯಾಂಕಿನ ನೌಕರರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಸಿರಾಜ್ ಖಾಲಿದ್ ಅಹ್ಮದ್‌ರನ್ನು ದಿಕ್ಕುತಪ್ಪಿಸಿದವರು ಡಿಸಿಸಿ ಬ್ಯಾಂಕಿನ ಲೋನ್ ಸೆಕ್ಷನ್‌ನಲ್ಲಿರುವ ತಿಪ್ಪೇಸ್ವಾಮಿ ಎಂಬ ಗುಮಾಸ್ತ [illegible] ಗಿರಾಕಿ. ಸ್ವಲ್ಪ ಯಾಮಾರಿದರೆ ಪೂರ್ತಿಯಾಗಿ ಹಳ್ಳ ಹಿಡಿಸಬಲ್ಲನು. ಹೊಸದಾಗಿ [illegible] ಎಂ.ಡಿ. ರವೀಂದ್ರ ಈ ಜನಾತಿಯ ಕಿಡಿಗೇಡಿಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು [illegible]

12 ಮರ್ಡರ್ ಕೇಸುಗಳು!

ಇದು ಮುಧೋಳ ಪೊಲೀಸರ ಒಂದು ವರ್ಷದ ಸಾಧನೆ...


ಅಂದರೆ ಒಂದು ವರ್ಷದಲ್ಲಿ 12 ಕೊಲೆಗಳ ಆರೋಪಿಗಳನ್ನು ಬಂಧಿಸಿದ್ದಾರೆ ಎಂದುಕೊಂಡಿರಾ? ಛೇ, ಛೇ! ಮುಧೋಳ ಪೊಲೀಸರು ಅಂತಹ ಕೆಲಸ ಮಾಡುವುದುಂಟೆ? ಒಂದೇ ವರ್ಷದಲ್ಲಿ ಬರೋಬ್ಬರಿ ಒಂದು ಡಜನ್ ಮರ್ಡರ್ ಕೇಸುಗಳನ್ನು ಮುಚ್ಚಿಹಾಕಿದ ಕೀರ್ತಿ ಮುಧೋಳ ಪೊಲೀಸರಿಗೆ ಸಲ್ಲುವಂತಾಗಿ, ರಾಷ್ಟ್ರಪತಿ ಪದಕಗಳ ಕನಸಲ್ಲಿವೆ ಖಾಲ್ತು ಪೊಲೀಸಪ್ಪಗಳು! ಒಬ್ಬ ಖತರ್‌ನಾಕ್ ಸಿಪಿಐ ಅಮರಾಪುರ, ಇನ್ನೊಬ್ಬ ಕತ್ತರಿಬುಟ ಡಿವೈಎಸ್‌ಪಿ ಚಂದ್ರಶೇಖರ್ ಕ್ಯಾತನ್ ಎಂಬಬ್ಬರು ಇರುವಾಗ ಹನ್ನೆರಡೇನೂ, ಇಪ್ಪತ್ನಾಲ್ಕು ಕೊಲೆಗಳು ಮುಚ್ಚಿ ಹೋಗುತ್ತವೆ.

ದಲಿತನ ಕೊಲೆ:
ಮಂತ್ರಿ ಕಾರಜೋಳ ಶಿಷ್ಯರ ಕೈವಾಡ

18.6.2006 ರಂದು ಲೋಕಾಪುರ ಪೊಲೀಸ್ ಠಾಣೆ ಸರಹದ್ದಿನ ಜುನ್ನೂರು ಗ್ರಾಮದಲ್ಲಿ 22-ರ ಹರೆಯದ ಹನುಮಂತ ಹರಿಜನ ಎಂಬ ದಲಿತನನ್ನು ಕೊಚ್ಚಿ ಕೊಚ್ಚಿ ಕೊಲ್ಲಲಾಗಿದೆ. ತಿಂಗಳಾಗುತ್ತಾ ಬಂದರೂ

ಬಾಗಲಕೋಟೆ

ಚಾರ್ಜ್‌ಶೀಟ್ ರೆಡಿ ಇಲ್ಲ... ಏಕೆಂದರೆ ಕೊಲೆ ಆರೋಪಿಗಳ, ಅವರ ಬೆಂಬಲಕ್ಕೆ ನಿಂತ ತಾಲ್ಲೂಕು ಲೀಡರುಗಳ ಕರಾಮತ್ತು ಹಾಗಿದೆ! ಈ ಪುಂಡರೆಲ್ಲ ಬಿಜೆಪಿಯ ಮಂಗಗಳು. ಇವರಿಗೆ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಸಚಿವ, ಮುಧೋಳದ ಶಾಸಕ ಗೋವಿಂದ ಕಾರಜೋಳನ ಸಮಸ್ತ ಬೆಂಬಲವೇ ಇರುವಾಗ ಕೇಸು ಹಳ್ಳ ಹಿಡಿಯದೇ ಇರುತ್ತಾ? ಆಹಾರ ಇಲಾಖೆಯಲ್ಲಿ ಮೇಯುತ್ತಾ ಹೆಗ್ಗಣವಾಗುತ್ತಿರುವ ಕಾರಜೋಳನಿಗೆ ತನ್ನದೇ ಎಡಗೈ ಪಂಗಡದ ದಲಿತನೊಬ್ಬ ಹೆಣವಾದದ್ದು ಗಂಭೀರ ವಿಷಯವೇ ಅಲ್ಲ.



ರಾಮಣ್ಣ ತಳವಾರ್

ಮೊನ್ನೆ **12.7.2006** ರಂದು ಬಾಗಲಕೋಟೆ ಜಿಲ್ಲಾ ಮಾದಿಗ ಮೀಸಲಾತಿ ಹೋರಾಟ ಸಮಿತಿಯವರು ಮುತ್ತಣ್ಣ ಧನ್ನೂರ್ ನೇತೃತ್ವದಲ್ಲಿ ಎಸ್.ಪಿ. ರಮೇಶ್ ಹರಿಹರನಿಗೆ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ, ಈ ಜನಿವಾರಿ ಎಸ್.ಪಿ.ಗೆ ದಲಿತರ ಜೀವ ಜೀವವೇ ಅಲ್ಲ.

ನಡೆದದ್ದಿಷ್ಟು......

ಕೊಲೆಯಾದ ಜುನ್ನೂರು ಗ್ರಾಮದ ವಿಧುರ ಹನುಮಂತಪ್ಪ ಹರಿಜನ ತನ್ನ ಐವರು ಅಣ್ಣರೊಂದಿಗೆ ಊರಹೊರಗಿನ ತನ್ನ ತೋಟದಲ್ಲೇ ಮನೆ ಮಾಡಿಕೊಂಡು ಜೀವನ ನಡೆಸುತ್ತಿದ್ದ. ಎದುರಿನ ತೋಟದಲ್ಲಿದ್ದ ಬಿಜೆಪಿಯ ಪುಡಾರಿ ಕುರುಬರ ಶಿವಪ್ಪ ಮಲ್ಲಣ್ಣನವರ ಮನೆಗೆ ಹನುಮಂತ ಆಗಾಗ ಹೋಗಿಬರುತ್ತಿದ್ದ. ತನ್ನ ಹೆಂಡತಿ ಪೆದ್ದವ್ವಳೊಂದಿಗೆ ಹನುಮಂತನಿಗೆ ಅನೈತಿಕ ಸಂಬಂಧವಿದೆ ಎಂದು ಭಾವಿಸಿದ ಶಿವಪ್ಪ ಹನುಮಂತನ ಮೇಲೆ ಕುದಿಯತೊಡಗಿದ. ಊರಿನ ಬಿಜೆಪಿ ಲೀಡರುಗಳಾದ ಕೃಷ್ಣಪ್ಪ ಹೆಬ್ಬಳ್ಳಿ, ವಿಠ್ಠಲ ಹೆಬ್ಬಳ್ಳಿ ಸಹೋದರರು, ಜಿ.ಪಂ. ಸದಸ್ಯ ಎ.ವಿ. ಹಲಕಿ, ಕಳೆದ ಬಾರಿ ಜಿ.ಪಂ. ಎಲೆಕ್ಷನ್ ಸೋತ ರಾಮಣ್ಣ ತಳವಾರ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಕೆ.ಆರ್. ಪಾಟೀಲ್ ಇವರೆಲ್ಲರೂ ಕ್ಲೋಸ್ ಆಗಿದ್ದು ಶಿವಪ್ಪನಿಗೆ ಬಲ ತಂದಿತ್ತು. ಹೆಂಡ್ತಿ ಪೆದ್ದವ್ವನೊಂದಿಗೆ ಸೇರಿ ಹನುಮಂತಪ್ಪನನ್ನು ಮುಗಿಸುವ ಸ್ಕೆಚ್ ರೆಡಿ ಮಾಡಿದ. ಪ್ರತಿನಿತ್ಯ ರಾತ್ರಿ ತನ್ನ ತೋಟದ ಅಂಚಿಗೆ ಇರುವ ಕುರಿದೊಡ್ಡಿಯಲ್ಲಿ ಮಲಗುತ್ತಿದ್ದ ಹನುಮಂತಪ್ಪ ಸರಳ ಬೇಟೆ ಎನಿಸಿಬಿಟ್ಟ.



ಹನುಮಂತ ಹರಿಜನ

18.6.2006 ರಂದು ಸಂಜೆ ಹನುಮಂತನ ಮನೆ ಕಡೆ ಕೋಳಿ ಹುಡುಕುವ ನೆಪದಲ್ಲಿ ಹೋದ ಶಿವಪ್ಪ, ಹನುಮಂತ ಅಂದು ರಾತ್ರಿ ಎಲ್ಲಿ ಮಲಗಬಹುದೆಂದು ವಿಚಾರಿಸಿದ್ದಾನೆ. ಮತ್ತೆ ರಾತ್ರಿ **8** ಕ್ಕೆ ತಂಬಾಕು ಕೇಳುವ ನೆಪದಲ್ಲಿ ಹನುಮಂತನ ಮನೆಗೆ ಹೋದ ಶಿವಪ್ಪನಿಗೆ ಹನುಮಂತ ಮಟನ್ ತಿಂದು, ಮಲಗಲು ಕುರಿದೊಡ್ಡಿ ಕಡೆ ಹೋಗಿದ್ದು ಗ್ಯಾರಂಟಿಯಾಗಿದೆ.

ಅಷ್ಟೇ, ಅಲ್ಲಿಗೆ ಅವತ್ತು ರಾತ್ರಿಯೇ ಕೆಲಸ ಮುಗಿದುಹೋಗಿದೆ! ಮುಂಜಾನೆ ಹನುಮಂತ ಮನೆಗೆ ಬರದೇ ಹೋದಾಗ ಗಾಬರಿ ಬಿದ್ದ ಮನೆಯವರು ಎಲ್ಲಾ ಕಡೆ ಹುಡುಕಿದ್ದಾರೆ. ಕೃಷ್ಣಾ ನದಿ ದಾಟಿ ಆಚೆಯ ಹಳ್ಳಿಗಳಲ್ಲೂ ಹುಡುಕಿ ಬಂದು ನಿರಾಶರಾಗಿದ್ದಾರೆ. ಆಗ ಎಂಟ್ರಿ ಹೊಡೆದ ಶಿವಪ್ಪ "ಪಕ್ಕದ ಕಬ್ಬಿನ ತೋಟದಾಗ ಒಮ್ಮೆ ನೋಡಾಣು ಬರ್ರಿ" ಎಂದು ಕರೆದಿದ್ದಾನೆ. ಅಲ್ಲಿ ಹೋದರೆ ಹನುಮಂತನ ಛಿದ್ರಗೊಂಡ ದೇಹ ಬಿದ್ದಿದೆ. ಕೊಡಲಿಯಿಂದ 22 ಬಾರಿ ಕೊಚ್ಚಿ ಜೀವ ತೆಗೆಯಲಾಗಿದೆ.

ಆಗಲೇ ಎಲ್ಲರಿಗೂ ಶಿವಪ್ಪನ ಮೇಲೆ ಡೌಟು ಶುರುವಾಗಿದೆ. ಆದರೆ ಶಿವಪ್ಪನ ಬಿಜೆಪಿ ಲೀಡರುಗಳಾದ ಕೃಷ್ಣಪ್ಪ, ವಿಠ್ಠಲ ಹೆಬ್ಬಳ್ಳಿ, ತಾಲ್ಲೂಕಾ ಬಿಜೆಪಿ ಅಧ್ಯಕ್ಷ ಕೆ.ಆರ್. ಪಾಟೀಲ್, ಜಿ.ಪಂ. ಸದಸ್ಯ ಎ.ವಿ. ಹಲಕಿಗಳೆಲ್ಲ ಸೇರಿ ಹನುಮಂತನ ಮನೆಗೆ ಬಂದು ತಿಪ್ಪೆ ಸಾರಿಸಲು ನೋಡಿದ್ದಾರೆ. ಆದರೆ ಹನುಮಂತನ ಅಣ್ಣ ಬಾಲಪ್ಪ ಸೀದಾ ಪೊಲೀಸ್ ಠಾಣೆಗೆ ಹೋಗಿ ಶಿವಪ್ಪ, ಪೆದ್ದವ್ವ, ವಿಠ್ಠಲ ಹೆಬ್ಬಳ್ಳಿ, ಕೃಷ್ಣಪ್ಪ ಹೆಬ್ಬಳ್ಳಿಗಳ ಮೇಲೆ ಕಂಪ್ಲೇಂಟ್ ಕೊಡಲು ನೋಡಿದ್ದಾನೆ. ಆದರೆ ಮುಧೋಳ ತಾಲ್ಲೂಕಿನ ಪೊಲೀಸ್ ವ್ಯವಸ್ಥೆಗೆ ಈ ವರ್ಷದ 13 ನೇ ಕೊಲೆ ಕೇಸು ಮುಚ್ಚುವ ಆತುರ ಬೇರೆ ಇತ್ತಲ್ಲ? ಕಂಪ್ಲೇಂಟ್‌ಗೆ ಒಂದು ಗತಿ ಕಾಣಿಸಿಬಿಟ್ಟಿದ್ದಾರೆ.



ಡಿವೈಎಸ್‌ಪಿ ಕ್ಯಾತನ್

ಲೋಕಾಪುರಕ್ಕೆ ಹೊಸದಾಗಿ ಬಂದಿರುವ ಪಿಎಸ್‌ಐ ಆರ್.ಎಮ್. ದಿವಾಕರ್ ಕೃಷ್ಣಪ್ಪ ಹೆಬ್ಬಳ್ಳಿಯನ್ನು ಕರೆಸಿ ವಿಚಾರಣೆ ಮಾಡಲು ಯತ್ನಿಸಿದಾಗ ಡಿವೈಎಸ್‌ಪಿ ಕ್ಯಾತನ್ ಅಡ್ಡ ಬಂದಿದ್ದಾನೆ. 4 ಲಕ್ಷ ನುಂಗಿ ಕೇಸ್ ಖುಲಾಸ್ ಎನ್ನುತ್ತಿದ್ದಾನೆ.



ಗೋವಿಂದ ಕಾರಜೋಳ

ಮಂಪರು ಪರೀಕ್ಷೆಯಂತೆ....

ಮುಧೋಳ, ಜಮಖಂಡಿ, ಬೀಳಗಿ ವ್ಯಾಪ್ತಿಯ ಡಿವೈಎಸ್‌ಪಿ ಹುದ್ದೆಗೆ ಏರಲು ಇಲ್ಲಿ ಪೈಪೋಟಿ ಇದೆ. ಕಬ್ಬಿನ ಗದ್ದೆಗಳಲ್ಲಿ ಬೆಳೆವ ಗಾಂಜಾ, ಫುಲ್ ಸ್ವಿಂಗ್‌ನಲ್ಲಿರುವ ನಕಲಿ ಪೆಟ್ರೋಲ್ ಮಾರಾಟ, 24 hour ಇಸ್ಪೀಟ್ ಅಡ್ಡೆಗಳು–ಇಷ್ಟೆಲ್ಲ ಇರುವುದರಿಂದ ಡಿವೈಎಸ್‌ಪಿ ಕ್ಯಾತನ್ ಇಲ್ಲಿ 5 ವರ್ಷದಿಂದ ಗೂಟ ಜಡಿದುಕೊಂಡು ಕುಳಿತಿದ್ದಾನೆ. ಆಗಿನ ಮಂತ್ರಿ ಆರ್.ಬಿ. ತಿಮ್ಮಾಪುರ್‌ಗೆ ತಿನ್ನಿಸಿಯೇ ಇಲ್ಲಿಗೆ ವಕ್ಕರಿಸಿದ ಕ್ಯಾತನ್ ಎಂಬ ಈ ಕುಖ್ಯಾತನು ಮೊನ್ನೆ ಟ್ರಾನ್ಸ್‌ಫರ್‌ನ್ನು ತಪ್ಪಿಸಿಕೊಂಡು ಇಲ್ಲೇ ಸೆಟ್ಲ್ ಆಗುತ್ತಿದ್ದಾನೆ. ಮುಧೋಳದ ಸಿಪಿಐ ಅಮರಾಪುರನಂತೂ ದೋ ನಂಬರ್ ದಂಧೆಗಳ ಮಹಾನ್ ಆರಾಧಕ. ಕೊಲೆ ನಡೆದರೂ ಕಾಸಿನ ಕನಸು ಕಾಣುವಾತ.

ಈಗ ಈ ಪೊಲೀಸ್ ಪ್ರಭೃತಿಗಳೆಲ್ಲ 'ಮಂಪರು ಪರೀಕ್ಷೆ, ಮಂಪರು ಪರೀಕ್ಷೆ' ಎಂದು ಹಾರಾಡುತ್ತಿ... ಇವರು ಕೊಲೆ ಆರೋಪಿಗಳಿಗೆ ಮಂಪರು ಪರೀಕ್ಷೆ ಮಾಡಿಸುವುದಿಲ್ಲವಂತೆ. ಈ ಬದ್ಮಾಷ್ ಪೊಲೀಸರು ಕೊಲೆಯಾದ ಹನುಮಂತನ ಕುಟುಂಬದವರನ್ನೆಲ್ಲ ಮಂಪರು ಪರೀಕ್ಷೆಗೆ ಬೆಂಗಳೂರಿಗೆ ಕರೆತರುತ್ತಾರಂತೆ. ಮುಧೋಳದ ಜನರನ್ನೇನು ಹುಚ್ಚರೆಂದು ಕೊಂಡಿದ್ದಾರಾ ಈ ನಾಲಾಯಕ್‌ಗಳು?

ಡಿವೈಎಸ್‌ಪಿ ಕ್ಯಾತನ್‌ಗೆ ಕೃಷ್ಣ ಸರ್ಕಾರ ರಾಜ್ಯ ಪ್ರಶಸ್ತಿ ನೀಡಿತ್ತು ಎಂದರೆ ಇವನ ಪ್ರಭಾವ ಎಷ್ಟಿರಬಹುದು?

ತನ್ನದೇ ಎಡಗೈ ಗುಂಪಿನ ದಲಿತನೊಬ್ಬನ ಕೊಲೆಯ ವಿಚಾರಣೆ ಹಳ್ಳ ಹಿಡಿಯುತ್ತಿರುವುದನ್ನು ನೋಡಿಯೂ ಸುಮ್ಮನೆ ಕುಳಿತಿರುವ ಮಂತ್ರಿ ಚಡ್ಡಿ ಗೋವಿಂದ ಕಾರಜೋಳನ ವಿರುದ್ಧ ದಲಿತ ಸಂಘಟನೆಗಳೆಲ್ಲ ಶೀಘ್ರ ಪ್ರತಿಭಟಿಸಬೇಕಾಗಿದೆ.

ಇಲ್ಲಾಂದ್ರೆ ಕಬ್ಬಿನ ಗದ್ದೆಗಳಲ್ಲಿ ದಲಿತರು ಮಣ್ಣಾಗಿ ಉಳ್ಳವರ ಬೆಳೆಗೆ ಗೊಬ್ಬರವಾಗಿ ಸಾಯುತ್ತಲೇ ಇರುತ್ತಾರೆ.

–ಮೇಘರಾಜ್

ಧಾರವಾಡ ZP
'ಬಿಸಿಯೂಟ'ದಲ್ಲಿ ಬ್ಯುಜಿ!

ಕಳೆದ ವರ್ಷ ನಿರ್ಮಾಣಗೊಂಡ 376 'ಬಿಸಿಯೂಟ' ಯೋಜನೆಯ ಅಡುಗೆ ಕೋಣೆಗಳಿಗೆ ಬೀಗ ಜಡಿದು ಕುಳಿತಿರುವ ಧಾರವಾಡ ಜಿ.ಪಂ. ಈಗ ಮತ್ತೆ ಜಿಲ್ಲೆಯಾದ್ಯಂತ 98 ಶಾಲೆಗಳಲ್ಲಿ ಬಿಸಿಯೂಟದ ಅಡುಗೆ ಕೋಣೆಗಳನ್ನು ಕಟ್ಟಲು ಸಜ್ಜಾಗಿದೆ. ಕಟ್ಟಿದ ಮೇಲೆ ಇವಕ್ಕೂ ಬೀಗ ಜಡಿಯಲೆಂದೆ?

ಒಟ್ಟಿನಲ್ಲಿ ಅಡುಗೆ ಕೋಣೆ ನಿರ್ಮಾಣದ ಹೆಸರಲ್ಲೂ 'ಬಿಸಿಯೂಟ'; ನಂತರ ಅಡುಗೆ ಕೋಣೆಗಳಿಗೆ ಬೀಗ ಜಡಿದು, ಬಿಸಿಯೂಟ ಯೋಜನೆಯನ್ನು ಇಸ್ಕಾನ್, ಅದಮ್ಯ ಚೇತನಗಳ ತಟ್ಟೆಗೆ ಹಾಕಿ ಅಲ್ಲೂ ಒಂದಿಷ್ಟು ಬಿಸಿಯೂಟ! ಧಾರವಾಡ ಜಿ.ಪಂ.ನ ಹೊಟ್ಟೆ ಕೆಡದೇ ಇರುತ್ತಾ? "ನೋ" ಎನ್ನುತ್ತಾರೆ ಜನ. ಎಷ್ಟು ತಿಂದರೂ ಅರಗಿಸಿಕೊಳ್ಳಬಲ್ಲ ಸೊಪ್ಪು ಒಂದನ್ನು ನುಂಗಿಬಿಟ್ಟಿದ್ದಾರಂತೆ ಧಾರವಾಡ ಜಿ.ಪಂ. ನ ಸದಸ್ಯರು, ಅಧಿಕಾರಿಗಳು! So, ಇವರ ಹಸಿವು ಅವ್ಯಾಹತ! ಕಣ್ಣಿಗೆ ಕಂಡಿದ್ದೆಲ್ಲ ಸ್ವಾಹಾ ಖಚಿತ!!

ಇತ್ತ ಸರಕಾರದಿಂದ ಸಕಲ ಸವಲತ್ತು ಪಡೆದು ತಮ್ಮ ಹೆಸರು ಹಾಕಿಕೊಳ್ಳುತ್ತಿರುವ ಬ್ರಾಹ್ಮಣರ ಇಸ್ಕಾನ್, ಅದಮ್ಯ ಚೇತನಗಳದ್ದು ಮಡಿವಂತಿಕೆಯ ಭೋಜನ! 1456 ಮಹಿಳಾ ಅಡುಗೆ ಕೆಲಸದವರನ್ನು ಬೀದಿಗೆ ತಳ್ಳಿದ್ದಕ್ಕೆ, ತಿಥಿಯೂಟ!!

ಹೊಣೆಗೇಡಿ ZPಯೇ ಅಬಡು ತಬಡು ಮುಕ್ಕುತ್ತಿರುವಾಗ ಇಸ್ಕಾನ್, ಅದಮ್ಯ ಚೇತನಗಳು ಪುಕ್ಕಟೆ ಪ್ರಚಾರ ಪಡೆಯುತ್ತಾ 'ಶುಭ ಲಾಭ' ಎನ್ನುತ್ತಾ ಮಂತ್ರ ಜಪಿಸದೇ ಬಿಡುತ್ತವಾ?

ಅಡಿಗಡಿಗೆ ಅಡುಗೆಮನೆ!

ಅಡುಗೆಮನೆ ನಿರ್ಮಾಣ ಎಂಬುದು ಲೋಕಲ್ ಪುಡಾರಿಗಳಿಗೆ ಪಕ್ಕಾ ಬ್ಯುಸಿನೆಸ್ಸು. ಕಳೆದ ವರ್ಷ ತಲಾ 80 ಸಾವಿರ ರೂ. ಖರ್ಚು ಮಾಡಿ 376 ಅಡುಗೆ ಕೋಣೆಗಳನ್ನು ಕಟ್ಟಿಸಿದ ಜಿ.ಪಂ. ಅಡುಗೆ ...



ಕಮಿಷನ್ನು, ಕಳಪೆ ಕಾಮಗಾರಿ ಇವೆಲ್ಲವನ್ನು ಮರೆತರೂ, ಅಡುಗೆ ಕೋಣೆ ಸಿದ್ಧವಾದವಲ್ಲ ಎಂಬ ಸಮಾಧಾನ ಜನರಿಗಿತ್ತು. ಯಾವಾಗ ಇಸ್ಕಾನ್, ಅದಮ್ಯ ಚೇತನಗಳೆಂಬ ಅಡುಗೆ ಭಟ್ಟರು ಬೆಂಗಳೂರಿನಿಂದ ಸೌಟು ಹಿಡಿದು ಧಾವಿಸಿದರೋ, ಆವಾಗ ಜಿ.ಪಂ.ನ ಚಿತ್ರವೇ ಬದಲಾಯ್ತು. ಸೀದಾ ಇಸ್ಕಾನ್‌ಗೆ **486** (**473** ಸರಕಾರಿ, **13** ಖಾಸಗಿ), ಅದಮ್ಯ ಚೇತನಕ್ಕೆ **72** (**22**ಸರಕಾರಿ, **50** ಖಾಸಗಿ) ಶಾಲೆಗಳ ಬಿಸಿಯೂಟದ ನಿರ್ವಹಣೆ ನೀಡಿಬಿಟ್ಟಿತು. ಜಿ.ಪಂ. ಕಟ್ಟಿಸಿದ್ದ ಅಡುಗೆ ಮನೆಗಳಲ್ಲಿ ಈ ಭಟ್ಟಂಭಟ್ಟರು ಅಡುಗೆ ಮಾಡಲಾದೀತೆ? ಅವರ ಮಡಿ ಏನು... ಅವರ ಪಾವಿತ್ರ್ಯತೆಗಳೇನು?

ಆಗಲೇ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಕಟ್ಟಿದ್ದ ಅಡುಗೆ ಕೋಣೆಗಳಿಗೆ ಬೀಗ ಬಿದ್ದವು. ಭಟ್ಟರು ತಮ್ಮದೇ 'ಪವಿತ್ರ' ಅಡುಗೆಮನೆಗಳಲ್ಲಿ ಬರೀ ... ಬಿಟ್ಟುಕೊಂಡು ಅಡುಗೆ ... ತೊಡಗಿದರು. 2056 ರಷ್ಟಿದ್ದ ಮಹಿಳಾ ಅಡುಗೆ ... ಹೆಚ್ಚು ಎಂದರೆ 1456 ಮಹಿಳೆಯರ ಹೊಟ್ಟೆ ಮೇಲೆ ಕಲ್ಲು ಹಾಕಲಾಯ್ತು. ಈ ಖಾಸಗಿ ಸಂಸ್ಥೆಗಳ ಅಡುಗೆ ಕೋಣೆಗಳಿಗೆ ಮಹಾನಗರ ಪಾಲಿಕೆ ಪುಕ್ಕಟೆ ನೀರು ನೀಡುತ್ತಿದೆ, ಜಿ.ಪಂ. ಕಾಳುಕಡಿ ತಂದು ಹಾಕುತ್ತಿದೆ. ಸರಕಾರದ ಕಾಳು-ಕಡಿ, ಗ್ಯಾಸ್, ನೀರಿನಲ್ಲಿ ಅರೆಬೆಂದ ಅನ್ನ ರೆಡಿಮಾಡಿ ದನದ ಕೊಟ್ಟಿಗೆಗೆ ಮೇವು ಸುರಿದಂತೆ ಶಾಲೆಯ ಕಟ್ಟೆಗಳಿಗೆ ಅನ್ನ ತಂದು ಸುರುವುತ್ತಿವೆ ಇಸ್ಕಾನ್, ಅದಮ್ಯ ಚೇತನಗಳ ವಾಹನಗಳು!

ಬೀದಿಗೆ ಬಿದ್ದ ಅಡುಗೆ ಕೆಲಸದವರು ಈ ಮೊದಲು ಧಾರವಾಡದಲ್ಲಿ, ಇತ್ತೀಚೆಗೆ ಬೆಂಗಳೂರಿನಲ್ಲಿ ಬೃಹತ್ ಪ್ರಮಾಣದ ಪ್ರತಿಭಟನೆ ನಡೆಸಿದ್ದೂ ಸರಕಾರದ ಗಮನಕ್ಕೆ ಬಂದಿಲ್ಲ. ಪೇಜಾವರ ಸ್ವಾಮಿ, ರಾಘವೇಶಗಳ ಪಾದಗಳಲ್ಲಿ ಬಿದ್ದಿರುವ ಸರಕಾರದ ಮಾತು ಬಿಟ್ಟುಬಿಡಿ!

ಈಗ ತಲಾ 49 ಲಕ್ಷ ಖರ್ಚು ಮಾಡಿ 98 ಅಡುಗೆ ಮನೆಗಳನ್ನು ತಯಾರಿಸುವ ಕಂತ್ರಿ ಯೋಜನೆ ಹೆಣೆದಿದ್ದಾರೆ. ಮೊದಲು ಪಿ.ಡಬ್ಲ್ಯುಡಿ ಈ ನಿರ್ಮಾಣ ಕೆಲಸ ಮಾಡಿ ನುಂಗುತ್ತಿತ್ತು. ಈ ಸಲ ಆಯಾ ಶಾಲೆಗಳ ಶಾಲಾ ಉಸ್ತುವಾರಿ ಸಮಿತಿಗಳೇ ಅಡುಗೆ ಮನೆಗಳನ್ನು ಕಟ್ಟುತ್ತವಂತೆ. ಅಂದರೆ ಲೋಕಲ್ ಪುಡಾರಿಗಳಿಗೆ ಹಬ್ಬ. ಈಗಂತೂ ಶಾಸಕರ ಚೇಲಾಗಳೇ ಈ ಉಸ್ತುವಾರಿ ಸಮಿತಿಯಲ್ಲಿ ತುಂಬಿರುವುದರಿಂದ ನಿರ್ಮಾಣವಾಗಲಿರುವ ಅಡುಗೆಮನೆಗಳು ಈ ಮುಂಗಾರು ಮುಗಿವ ಮುನ್ನವೇ ಮಣ್ಣುಪಾಲಾಗಲಿವೆ. ಖಾಲಿ ಇರುವ ಅಂಗನವಾಡಿ ಟೀಚರ್, ಸಹಾಯಕಿಯರ ಹುದ್ದೆಗಳನ್ನು ಭರ್ತಿಗೊಳಿಸುವಾಗ ಶಾಸಕರು, ಅವರ ಚೇಲಾಗಳಿಗೆ ಪರಮಾಧಿಕಾರ ಇರುವುದರಿಂದ ಇಲ್ಲೂ ಗೋಲ್‌ಮಾಲ್ ಗ್ಯಾರಂಟಿ. ಧಾರವಾಡದಲ್ಲಿ ಖಾಲಿಯಿರುವ 84 ಹುದ್ದೆಗಳಿಗಾಗಿ ಸಾವಿರಾರು ಅಭ್ಯರ್ಥಿಗಳಿಂದ ಪುಡಾರಿಗಳು ದುಡ್ಡು ಎತ್ತುತ್ತಲೇ ಇದ್ದಾರೆ.

ಸುಮಾರು 2 ಲಕ್ಷ ಮಕ್ಕಳಿಗೆ ಅನುಕೂಲವಾಗುವ, ವರ್ಷಕ್ಕೆ 6–7 ಕೋಟಿಗಳ ಬಜೆಟ್ ಇರುವ 'ಬಿಸಿಯೂಟ' ಯೋಜನೆಯನ್ನು ಜಿ.ಪಂ., ಇಸ್ಕಾನ್, ತೇಜಸ್ವಿನಿ ಅನಂತಕುಮಾರರ 'ಅದಮ್ಯ ಚೇತನ'ಗಳು ಹರಿದು ಹಂಚಿ ತಿನ್ನುತ್ತಿವೆ. ಶೆಟ್ಟರ್, ಹೊರಟ್ಟಿ ಅದ್ಯಾವ ಫೈವ್ ಸ್ಟಾರ್ ಹೋಟೆಲಿನಲ್ಲಿ ಮಾಂಸದೂಟ ಉಣ್ಣುತ್ತಿದ್ದಾರೋ?

ಆ ಇಸ್ಕಾನ್ ಕೃಷ್ಣ ಅಯೋಧ್ಯೆ ರಾಮರೇ ಬಲ್ಲರು...

–ವರದಿಗಾರ

'ಗಣಿ'ಗಳಲ್ಲಿ ಜೀತ!

ಉಡುಪಿ

ಉಡುಪಿ ಜಿಲ್ಲೆಯಲ್ಲಿರುವ 'ಗಣಿ'ಗಳಲ್ಲಿ ಅಮಾನುಷವಾದ ಜೀತಪದ್ಧತಿ ಜಾರಿಯಲ್ಲಿದೆ. ಶೋಭಾ ಎಂಬಾಕೆಯ ಸಾವಿನೊಂದಿಗೆ ಇಲ್ಲಿನ ಗಣಿ ಮಾಲೀಕರುಗಳ ಅಮಾನವೀಯ ಮುಖ ಅನಾವರಣಗೊಂಡಿದೆ. ಇದರೊಂದಿಗೆ, ಗಣಿ ಮಾಲೀಕರು, ಪೊಲೀಸ್ ಅಧಿಕಾರಿಗಳು ಹಾಗೂ ಉನ್ನತ ಸರ್ಕಾರಿ ಅಧಿಕಾರಿಗಳ ನಡುವಿನ ಗಳಸ್ಯ-ಕಂಠಸ್ಯ ಸಂಬಂಧ ಬಹಿರಂಗಕ್ಕೆ ಬಂದಿದೆ.

ಜೀತಕ್ಕೆ ಬಲಿಯಾದ ಶೋಭಾ

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಚಟ್ಟಹಳ್ಳಿ ಎಂಬಲ್ಲಿಂದ ಬದುಕಿನ ಬುತ್ತಿ ತುಂಬಿಸಲಿಕ್ಕಾಗಿ ಕನಸುಗಳನ್ನು ಕಟ್ಟಿಕೊಂಡು ಉಡುಪಿಗೆ ಬಂದವರು ಸುಮಾರು ಇಪ್ಪತ್ತು ಮಂದಿ. ಉಡುಪಿ ತಾಲ್ಲೂಕಿನ ಪಾಂಬೂರು-ಪಂಜಿಮಾರು ಎಂಬಲ್ಲಿರುವ ಗಣಿಗಾರಿಕಾ ಕೇಂದ್ರಗಳಲ್ಲಿ ಬೆವರಿಳಿಸಿ ದುಡಿಯಲಾರಂಭಿಸಿದ ಯುವಕ-ಯುವತಿಯರು ಇಲ್ಲಿಯೇ ಮದುವೆಯೂ ಆಗಿದ್ದಾರೆ. ಮಕ್ಕಳನ್ನೂ ಹೆತ್ತಿದ್ದಾರೆ. ಒಂದಿಬ್ಬರು ಇಲ್ಲಿಯೇ ಸತ್ತದ್ದೂ ಇದೆ.

ದೊರೆಸ್ವಾಮಿ, ಲಕ್ಷ್ಮಿ, ರಾಜು, ಸರೋಜ, ಚೆಲುವರಾಜು, ಶೋಭಾ, ಕೃಷ್ಣ, ರಾಣಿ, ಪೆರುಮಾಳ್, ಚಿಂತಾಮಣಿ, ಚಿನ್ನಸ್ವಾಮಿ, ಸರೋಜಮ್ಮ, ಮಾದೇಶ ಹೀಗೆ ಮಕ್ಕಳು-ಮರಿಗಳು ಸೇರಿದಂತೆ ಎಲ್ಲರೂ ಇಲ್ಲಿ ಅನುಭವಿಸಿದ ಶೋಷಣೆ, ದೌರ್ಜನ್ಯಕ್ಕೆ ಶೋಭಾ ಒಬ್ಬಳೇ ಸಾಕ್ಷಿ!


ಇವರು ಜೀತಕ್ಕಿದ್ದುದು ಪಿ. ಹರೀಶ್ ಶೆಟ್ಟಿ ಎಂಬುವರ ಮಾಲೀಕತ್ವದಲ್ಲಿರುವ ಕ್ವಾರಿಯಲ್ಲಿ. ಶಿರ್ವ ಗ್ರಾಮ ಪಂಚಾಯತ್‌ನ ಮಾಜಿ ಅಧ್ಯಕ್ಷರಾದ ಹರೀಶ್ ಶೆಟ್ಟಿ ಕಲ್ಲು ಕ್ವಾರಿಯ ಅಧಿಕೃತ ಮಾಲೀಕನಾದರೂ, ಇದರ ಅನಧಿಕೃತ ಧಣಿ ಕುರ್ಕಾಲು ಮೋಹನ ಶೆಟ್ಟಿ!


ಸಾವು ಬದುಕಿನೊಡನೆ ಹೋರಾಡುತ್ತಿರುವ ಶೋಭಾ

ಪಂಜಿಮಾರಿನ ಗಣಿಯಲ್ಲಿ ಹಗಲಿಡೀ ಬಿಡುವೇ ಇಲ್ಲದೆ ಜಲ್ಲಿಕಲ್ಲುಗಳನ್ನು ಒಡೆದೂ ಒಡೆದೂ ಸುಸ್ತಾಗಿ ಹೈರಾಣಾಗುವ ಜೀತದಾಳುಗಳು ಸಂಜೆ ಪಾಂಬೂರಿನಲ್ಲಿರುವ ತಮ್ಮ ಹರುಕು-ಮುರುಕು ಜೋಪಡಿಗೆ ಬಂದರೆ ಇಲ್ಲಿ ಭಯಾನಕ ಹಿಂಸೆ.

ಹಲವೊಮ್ಮೆ ಕಾರಣವೇ ಇಲ್ಲದೆ, ಕೆಲವೊಮ್ಮೆ ಸಣ್ಣಸಣ್ಣ ನೆಪಗಳನ್ನು ಮುಂದಿಟ್ಟುಕೊಂಡು ಕುರ್ಕಾಲು ಮೋಹನ ಶೆಟ್ಟಿ ಜೀತದಾಳುಗಳ ಮೇಲೆ ಕೈ ಮಾಡುತ್ತಾನೆ. ಆಲದ ಮರದ ಬೇರುಗಳನ್ನು ಲಾಠಿಯನ್ನಾಗಿ ಉಪಯೋಗಿಸಿ ಮನದಣಿಯ ಥಳಿಸುವ ಶೆಟ್ಟಿ, ಸೊಂಟದ ಬೆಲ್ಟ್‌ನಿಂದಲೂ ಹೊಡೆಯುವುದು, ಬಡಿಯುವುದು ಮಾಡುತ್ತಿದ್ದ. ಪೆಟ್ಟು ತಿಂದ ಕೆಲವರ ದೇಹದಲ್ಲಿರುವ ಗಾಯಗಳು ಇನ್ನೂ ಮಾಸದಿರುವುದನ್ನು ನೋಡಿದರೆ ಈತನ ದೌರ್ಜನ್ಯ ಎಷ್ಟು ಭೀಕರವೆಂಬುದು ಅರ್ಥವಾಗುತ್ತದೆ. ಪಾಂಬೂರಿನಲ್ಲಿದ್ದ ಜೀತದಾಳುಗಳು ಹೊರಗಿನವರೊಂದಿಗೆ ಮಾತನಾಡುವಂತಿರಲಿಲ್ಲ. ಹೊರಗಿನವರು, ಬಂಧುಗಳು, ಪಾಂಬೂರಿನ ಜೋಪಡಿಗಳಿಗೆ ಬರುವಂತಿರಲಿಲ್ಲ, ಯಾರಿಗೂ ಯಾರೂ ಫೋನ್ ಮಾಡುವಂತಿರಲಿಲ್ಲ, ಮೇಸ್ತ್ರಿಗಳು ಪಡೆದ ಸಾಲಕ್ಕೆ ಬಡ ಕಾರ್ಮಿಕರು ಹೊಣೆಗಾರರಾಗುತ್ತಿದ್ದರು.

ಜೀತದಾಳುಗಳಿಗೆ ಸಂಬಳ ಕೊಡದೆ ಸತಾಯಿಸಲಾಗುತ್ತಿತ್ತು. ಮೇಸ್ತ್ರಿಗಳಿಗೆ ಕೊಟ್ಟ ಸಾಲದ ಬಡ್ಡಿ ಎಂದು ಹೇಳಿ ಜೀತದಾಳುಗಳ ಸಂಬಳವನ್ನೇ ಮುರಿದು ಬಿಡುತ್ತಿದ್ದರು. ಮದ್ದೂರಿನ ಮುಗ್ಧರು ಒಂದು ಹೊತ್ತಿನ ಊಟಕ್ಕಾಗಿ ಜೀತದಾಳುಗಳಾಗಿ ಉಳಿದಿದ್ದರು. ಆದರೂ ಅವರಲ್ಲಿ ಸ್ವಾಭಿಮಾನವಿತ್ತು, ಆಕ್ರೋಶವಿತ್ತು, ಸಹಿಸಿ.... ಸಹಿಸಿ... ಅವರ ಸಹನೆಯೂ ಸ್ಫೋಟಿಸುವ ಹಂತ ತಲುಪಿತ್ತು. ಚೆಲುವರಾಜು ಎಂಬಾತನ ಪತ್ನಿಯಾಗಿದ್ದ ಶೋಭಾಳಿಗೆ ಕಳೆದ ತಿಂಗಳ ಒಂದು ದಿನ ಸಂಜೆ ಜೋಪಡಿಗೆ ಬಂದವನೇ ಕುರ್ಕಾಲು ಮೋಹನ ಶೆಟ್ಟಿ ಎಲ್ಲರೆದುರಿಗೆ ಥಳಿಸಿದ್ದಾನೆ. ಇದರಿಂದ ಅವಮಾನಿತಳಾದ ಶೋಭಾ ಶೆಟ್ಟಿಯ ಎದುರುಗಡೆಯೇ ಮೈಗೆ ಸೀಮೆಎಣ್ಣೆ ಸುರಿದು, ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ಘಟನೆಯೊಂದಿಗೆ ಮದ್ದೂರಿನಿಂದ ಬಂದ ಒಂದಿಡೀ ತಂಡವೇ ಮೋಹನ ಶೆಟ್ಟಿ ವಿರುದ್ಧ ತಿರುಗಿಬಿದ್ದಿದೆ. ಆದರೆ ಮೋಹನ ಶೆಟ್ಟಿ ಕೊಟ್ಟ ಅಮೇಧ್ಯ ತಿಂದು ತೇಗಿದ್ದ ಶಿರ್ವದ ಪೊಲೀಸರು ಜೀತದಾಳುಗಳು ನೀಡಿದ ಹೇಳಿಕೆಯನ್ನೇ ದಾಖಲಿಸದೆ ಕಾನೂನಿಗೆ ವಂಚಿಸಿಬಿಟ್ಟಿದ್ದಾರೆ. ಆ ಮೂಲಕ ಶೆಟ್ಟಿಯ ಋಣ ತೀರಿಸಿದ್ದಾರೆ.


ಹರೀಶ್ ಶೆಟ್ಟಿ

ಅರಣ್ಯ ರೋದನ

ಪಾಂಬೂರು ಜೀತ ಪ್ರಕರಣದ ಬಗ್ಗೆ ಮಂಡ್ಯದ ಭೋವಿ ಜನಾಂಗದ ನಾಯಕರು ಉಡುಪಿ ಎಸ್ಪಿ ಹಾಗೂ ಮಂಡ್ಯದ ಎಸ್ಪಿಯವರಿಗೆ ನೀಡಿದ ದೂರು ಕಸದಬುಟ್ಟಿ ಸೇರಿಬಿಟ್ಟಿದೆ. ಜಾತಿ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಮಾಜದ ಸ್ವಾಮೀಜಿಯೊಬ್ಬರು ಸರ್ಕಾರದ ಮುಂದೆ ಇಟ್ಟ ಅಹವಾಲು ಅರಣ್ಯ ರೋದನವಷ್ಟೇ ಆಗಿಹೋಗಿದೆ. ಹೀಗೆ ಪಾಂಬೂರು ಜೀತ ಪ್ರಕರಣ ಹಳ್ಳ ಹಿಡಿದಿದೆ.

ತಹಶೀಲ್ದಾರ್ ಶಾಮೀಲು

ಉಡುಪಿಯಲ್ಲಿ ಪರವಾನಗಿ ಪಡೆಯದೆ ನಡೆಯುತ್ತಿರುವ ಕಲ್ಲು ಕ್ವಾರಿಗಳಿವೆ. ಕ್ವಾರಿಗೆ ಪರವಾನಗಿ ಪಡೆದರೂ, ಸ್ಫೋಟಕ ಸಿಡಿಸಲು ಪರವಾನಗಿ ಇಲ್ಲದ ಕ್ವಾರಿಗಳಿವೆ. ಎಲ್ಲವೂ ಸಾಂಗವಾಗಿ ನಡೆಯಲು ಇಲ್ಲಿನ ತಹಶೀಲ್ದಾರರಾದ ಕೆ. ಮುರಳೀಧರ್ ಆಚಾರ್ಯ ಸಹಿತ ವಿವಿಧ ಇಲಾಖಾಧಿಕಾರಿಗಳ ಬೆಂಬಲ ಈ ಗಣಿ ಮಾಲೀಕರಿಗಿದೆ. ಜೂನ್‌ನಲ್ಲಿ ಪಾಂಬೂರು ಜೀತ ಪ್ರಕರಣ ಸೂರ್ಯನ ಬೆಳಕಿನಷ್ಟೇ ಪ್ರಖರವಾಗಿ ಬೆಳಕಿಗೆ ಬಂದಾಗ ಇದೇ ತಹಶೀಲ್ದಾರರು ಉಡುಪಿ ತಾಲ್ಲೂಕಿನಲ್ಲಿ ಜೀತ ಇಲ್ಲ ಎಂದು ಉದಯವಾಣಿ ಪತ್ರಿಕೆಗೆ ಸುಳ್ಳು ಸುಳ್ಳೇ ಹೇಳಿಕೆ ನೀಡಿ ಕುರ್ಕಾಲು ಮೋಹನ ಶೆಟ್ಟಿಯನ್ನು ರಕ್ಷಿಸಿದ್ದರು.

ಪಾಂಬೂರಿನ ಬೆನ್ನಿಗೆ ಕುಂಟಾಲಕಟ್ಟೆ!

ಪಾಂಬೂರು ಜೀತ ಪ್ರಕರಣ ಬಯಲಾಗಿ ತಿಂಗಳಾಗುವ ಮೊದಲೇ ಉಡುಪಿ ತಾಲ್ಲೂಕಿನ ಹಿರಿಯಡ್ಕ ಪೊಲೀಸ್ ಠಾಣಾ ವ್ಯಾಪ್ತಿಯ ಕುಂಟಾಲಕಟ್ಟೆ ಎಂಬಲ್ಲಿನ ಜೀತ ಪ್ರಕರಣ ಬೆಳಕಿಗೆ ಬಂದಿದೆ. ಅಲ್ಲಿ [illegible] ಸುಧಾಕರ ಶೆಟ್ಟಿ ಎಂಬವರ ಮಾಲೀಕತ್ವದಲ್ಲಿರುವ ಈ ಕಲ್ಲು ಕ್ವಾರಿಯಲ್ಲಿ [illegible] ತಿಂಗಳ ಅವಧಿಯಲ್ಲಿ ಸುಮಾರು 50 ಮಂದಿ ಕಾರ್ಮಿಕರು ಕಣ್ಮರೆಯಾಗಿದ್ದಾರೆ. ಇಲ್ಲೂ ಹೊಡೆಯುವುದು, ಬಡಿಯುವುದು, ಸರಿಯಾಗಿ ಸಂಬಳ ಕೊಡದಿರುವುದು, ದಿಗ್ಬಂಧನದಲ್ಲಿರಿಸುವುದು ನಡೆಯುತ್ತಿತ್ತು ಎಂಬುದು ಬಹಿರಂಗಗೊಂಡಿದೆ.

ಮೇಸ್ತ್ರಿಗಳಿಗೆ ಕೊಟ್ಟ ಹಣವನ್ನೇ ಈ ಅಮಾಯಕ ಕಾರ್ಮಿಕರಿಗೆ ನೀಡಿದ ಸಂಬಳವೆಂದೂ ಪರಿಗಣಿಸಲಾಗುತ್ತಿತ್ತು, ಗರ್ಭಿಣಿಯರನ್ನೂ ಊರಿಗೆ ಹೋಗಲು ಬಿಡದೆ ದುಡಿಸಿಕೊಂಡ ಕುಖ್ಯಾತಿ ಇಲ್ಲಿನ ಗಣಿ ಮಾಲೀಕರದ್ದು.

ರಾಯಚೂರು ಜಿಲ್ಲೆಯ ಲಿಂಗಸಗೂರಿನ ಲಂಬಾಣಿ ತಾಂಡವೊಂದಕ್ಕೆ ಸೇರಿದ ರೇಣುಕಮ್ಮ(40), ಹುಬ್ಬಾಣಂತಿ ಯಮುನಮ್ಮ(28) ಹಾಗೂ ಬಾಲ ಕಾರ್ಮಿಕ ಗೋಪೇಶ್(12) ಇತ್ತೀಚೆಗೆ ಕುಂಟಾಲಕಟ್ಟೆ ಕಲ್ಲು ಕ್ವಾರಿಯಿಂದ ವಿಮುಕ್ತಿ ಪಡೆದ ಜೀತದಾಳುಗಳು. ಸುಧಾಕರ ಶೆಟ್ಟಿ ಒಂದು ಎಕರೆ ಭೂಮಿಯಲ್ಲಿ ಗಣಿಗಾರಿಕೆ ನಡೆಸಲು ಪರವಾನಿಗೆ ಪಡೆದು, ಹೆಚ್ಚುವರಿ ನಾಲ್ಕೆಕರೆ ಭೂಮಿಯಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿದ್ದ ಅಂಶ ಪ್ರಾಥಮಿಕ ತನಿಖೆಯಲ್ಲಿ ದೃಢಪಟ್ಟಿದೆ.

ಕಾರ್ಮಿಕರ ಕರುಣಾಜನಕ ಕಥೆ

ಕಲ್ಲು ಕ್ವಾರಿಗಳಲ್ಲಿ ಕಠಿಣ ದುಡಿಮೆಯಲ್ಲಿ ತೊಡಗಿರುವವರಲ್ಲಿ ಹೆಚ್ಚಿನವರು ತಮಿಳುನಾಡು ಮೂಲದವರು. ಇನ್ನುಳಿದವರು ಉತ್ತರ ಕರ್ನಾಟಕದವರು.

ಮೇಸ್ತ್ರಿಗಳು ಪಡೆದ ಸಾಲದ ಬಡ್ಡಿಯೇ ಇವರ ಸಂಬಳ. ಪೌಷ್ಟಿಕ ಆಹಾರವಿಲ್ಲದೆ, ಮುರಿದು ಬೀಳಲು ಸಿದ್ಧವಾಗಿರುವ ಜೋಪಡಿಗಳಲ್ಲಿ ವಾಸ, ನಿರಂತರ ಶೋಷಣೆ, ದೌರ್ಜನ್ಯ ಅನುಭವಿಸುತ್ತಾ ಬದುಕು ಸವೆಸುವ ನಮ್ಮ ಭವ್ಯಭಾರತದ ಹೆಮ್ಮೆಯ ಪ್ರಜೆಗಳಾದ ಈ ಕಾರ್ಮಿಕರು ಮಾತ್ರ ಯಾರಿಗೂ ಬೇಡ.


ಗಣಿ ಕಾರ್ಮಿಕರ ರೋದನವನ್ನು ಕೇಳುವವರ್ಯಾರು?

ಖಾಕಿ ಖೂಳರು, ಬಿಳಿ ಕಾಲರಿನ ಕಳ್ಳರು ಹಾಗೂ ಖಾದಿ ಖದೀಮರು ಎಲ್ಲರೂ ಗಣಿ ಮಾಲೀಕರಿಂದ ಪಾಲು ಪಡೆದು ಅವರು ತಿಂದು ಕೊಬ್ಬಲು ಸಹಕರಿಸುತ್ತಾರೆಯೇ ಹೊರತು ಯಾರೊಬ್ಬರೂ ಕಾರ್ಮಿಕರ ಕಣ್ಣೊರೆಸುವ ಕನಿಷ್ಠ ಕರ್ತವ್ಯ ನಿರ್ವಹಿಸದಿರುವುದು ಪ್ರಭುತ್ವ ಮತ್ತು ವ್ಯವಸ್ಥೆಯ ಭ್ರಷ್ಟತನಕ್ಕೆ ಮತ್ತು ಅಧೋಗತಿಗೆ ಸಾಕ್ಷಿ.

-ಶ್ರೀರಾಮ ದಿವಾಣ

ಹಾಲು ಶ್ರೀನಿವಾಸ್ ನಾಪತ್ತೆ: ರೈತರಿಗೆ 20 ಲಕ್ಷ ನಾಮ!

ರಾಯಚೂರು

ಹಾಲು ಸೀನ ನಾಪತ್ತೆಯಾಗಿದ್ದಾನೆ! ರೈತರ [illegible]ತ್ತ ಖರೀದಿಸಿ, ದುಡ್ಡು ಕೊಡದೇ, ಮಾನ್ವಿ ತಾಲ್ಲೂಕಿ[illegible]ದ ಆಂಧ್ರಕ್ಕೆ ಪರಾರಿಯಾಗಿದ್ದಾನೆ. ಈ ಹಗಲು [illegible] ಸೀನನಿಗೆ ಭತ್ತ ಮಾರಿದ ರೈತರು ತಲೆ [illegible]ಲೆ ಕೈ ಹೊತ್ತು ಕುಳಿತಿದ್ದರೆ ಪೊಲೀಸರು [illegible] ಮಲಗಿಯೇ ಇದ್ದಾರೆ. ಸೀನನ ಮನೆ[illegible]ಲ್ಲಿ ಖೋಟಾನೋಟು ತಯಾರಿಸುವ ಹಾಳೆ, [illegible]ಸ್ತುಗಳೂ ಸಿಕ್ಕಿವೆ.

ಪ್ರತಿ ವರ್ಷ ಒಬ್ಬನಲ್ಲ ಒಬ್ಬ ಭತ್ತ ಖರೀದಿ[illegible]ರ ಹಣ ಸಂದಾಯ ಮಾಡದೇ ಓಡುತ್ತಲೇ [illegible]ರುತ್ತಾನೆ ಇಲ್ಲಿ. ರಾಯಚೂರಿನ ಬಹುಭಾಗ [illegible]-ತುಂಗಭದ್ರೆಯರ ಕೃಪೆಗೆ ಒಳಗಾಗಿದ್ದರೂ [illegible] ಸಾಲ ಮಾಡಿ ಕೃಷಿ ಮಾಡುವುದು [illegible] ಇಲ್ಲ, ಬಂದ ಬೆಳೆಗೂ ಬೆಲೆ ಸಿಗುತ್ತಿಲ್ಲ, [illegible] ಸಲದಂತೂ ಈ ಕೆಲಸಗೇಡಿ ಸರ್ಕಾರ [illegible], ಬೆಂಬಲ ಬೆಲೆ ನೀಡುವುದಾಗಿ ಎಲ್ಲ [illegible] ಪಡಿಸಿ, ಕೊನೆಗೆ ಬಗಲೆತ್ತಿ ಕುಳಿತಿದೆ.

ಇಂತಹ ಈ ವೇಳೆಯಲ್ಲಿ ರೈತರು ಅನಿವಾರ್ಯವಾಗಿ [illegible] ಖರೀದಿದಾರರನ್ನು ನೆಚ್ಚಲೇಬೇಕಾಯ್ತು, ಆಗ [illegible] ಭತ್ತ [illegible] [illegible] ಭತ್ತ ಖರೀದಿಸುತ್ತಲೇ ಹೋದ. ಮಾರುಕಟ್ಟೆ ಬೆಲೆಗಿಂತ 20-30 ರೂಪಾಯಿ ಹೆಚ್ಚಿಗೆ ಆಮಿಷ ಒಡ್ಡಿದ ಈ ವಂಚಕ ಈಗ ರೈತರ 20 ಲಕ್ಷ ಮೌಲ್ಯದ ಭತ್ತದೊಂದಿಗೆ ಗಾಯಬ್ ಆಗಿದ್ದಾನೆ. ಸಿರವಾರ ಸೇರಿ ದಂತೆ ಜಕ್ಕಲದಿನ್ನಿ, ನವಲಕಲ್ ಮುಂತಾದ ಗ್ರಾಮಗಳ [illegible]


ಖೋಟಾನೋಟು ತಯಾರಿಕಾ ವಸ್ತುಗಳು

ಈ ಹಾಲು ಸೀನ ಏನೂ ಇದೇ ಮೊದಲ ಬಾರಿಗೆ ವಂಚಿಸಿಲ್ಲ. ಈಗ್ಗೆ 10 ವರ್ಷಗಳ ಹಿಂದೆಯೇ ರೈತರಿಗೆ 10 ಲಕ್ಷ ಒತ್ತೆಯಿಟ್ಟವನು ಐದು ವರ್ಷ ಎತ್ತಲೋ ಓಡಿಹೋಗಿ ಮತ್ತೆ ಹಾಜರಾಗಿದ್ದ. ಮುತ್ತಿಗೆ ಹಾಕಿದ ರೈತರನ್ನು ನೋಡಿ ಬೆಚ್ಚಿ ಬಿದ್ದಿದ್ದ ಈ ಆಂಧ್ರದೊಂಗ ಒಂದಿಷ್ಟು ಹಣ ವಾಪಸ್ ಮಾಡಿ ಜೀವ ಉಳಿಸಿಕೊಂಡಿದ್ದ.

ಖೋಟಾ ನೋಟು ಖದೀಮ

ಶೀನಿವಾಸ ಪರಾರಿಯಾಗಿರುವುದಕ್ಕೆ ಖೋಟಾನೋಟು ಜಾಲವೊಂದರಿಂದ [illegible] ಕಾರಣ ಎನ್ನಲಾಗುತ್ತಿದೆ. ಈಗ ಶೀನಿವಾಸನ ಮನೆಯಲ್ಲಿ 500 ರೂ. ನೋಟಿನ ಅಳತೆಯ ಕಪ್ಪುಬಣ್ಣದ ಪೇಪರ್ ಬಂಡಲ್‌ಗಳು, ಆ ಸೀಟಿನ ಅಳತೆಯ ಗಾಜಿನ ವಸ್ತುಗಳೂ ದೊರೆತಿವೆ. ಜಿಲ್ಲೆಯ ತುಂಬಾ 50, 500 ರ ಖೋಟಾ ನೋಟುಗಳು ಹರಿದಾಡುತ್ತಿರುವುದರ ಹಿಂದೆ ದೊಡ್ಡ ಜಾಲವೇ ಇದೆ.

ಎ.ಪಿ.ಎಂ.ಸಿ.ಯ ಅಧಿಕೃತ ಪರವಾನಗಿ ಪಡೆದ ದಲ್ಲಾಳಿಗಳಿಗೆ ಮಾತ್ರ ಭತ್ತ ಮಾರಿದರೆ ಸೇಫು. ಆದರೆ ಸಾಲದಲ್ಲಿ ಮುಳುಗಿರುವ ರೈತರು ಆದಷ್ಟು ಬೇಗ ಮಾರುವ ತರಾತುರಿಯಲ್ಲಿರುತ್ತಾರೆ. ಆಕಸ್ಮಿಕವಾಗಿ ಮೋಸ ಹೋಗುವ ಸಾಧ್ಯತೆ ಇದೆ. ಪೊಲೀಸಪ್ಪಗಳು ಮಾತ್ರ "ಅಧಿಕೃತ ದಲ್ಲಾಳಿ ಹತ್ರ ಮಾರಬೇಕಿತ್ತು.... ನಾವೇನೂ ಮಾಡಕಾಗದಿಲ್ಲ...." ಎಂದು ನೆಪ ಹೇಳಿ ವಂಚಕ ದಲ್ಲಾಳಿಗಳ ಪರ ನಿಲ್ಲುತ್ತಿದ್ದಾರೆ. ಹಿಂದೆ [illegible] ಎನ್ನುವ ಆಂಧ್ರ ದೊಂಗನೂ ಇದೇ ರೀತಿ ಕೈಯೆತ್ತಿ ಪಾರಾರಿಯಾಗಿಬಿಟ್ಟಿದ್ದ. ತಮಗೆ ಏನೂ ಗೊತ್ತಿಲ್ಲದವರಂತೆ ವರ್ತಿಸುತ್ತಿರುವ ಶ್ರೀನಿವಾಸನ ಸಹೋದರರು, ಶ್ರೀನಿವಾಸನ ಮನೆಯಲ್ಲಿನ ಸಾಮಾನುಗಳನ್ನು ಮಾತ್ರ ಜೋಪಾನದಿಂದ ತಮ್ಮ ಮನೆಗೆ ಸಾಗಿಸಿಕೊಂಡಿದ್ದಾರೆ.

ಆಂಧ್ರದಿಂದ ಬಂದು ಹಾಲು ಮಾರುತ್ತಾ ಬದುಕುತ್ತಿದ್ದ ಹಾಲು ಸೀನ ಖೋಟಾನೋಟಿನ ಜಾಲದ ಹೊಡೆತಕ್ಕೆ ಸಿಕ್ಕು ಕಂಗಾಲಾಗಿ, ಬಡ ರೈತರ ಭತ್ತವನ್ನೆಲ [illegible] ರಿಗೆ ಇಂಥವನನ್ನು ಹಿಡಿಯುವುದು ಕಷ್ಟವೆಂದರೆ [illegible]!

-ವರದಿಗಾರ



ಹೆಣ್ಣು ಮತ್ತು ಸುಳ್ಳು

ಕೆಲವು ಟಿಪ್ಪಣಿಗಳು

ನಮ್ಮ ದೇಹದ ಬಗ್ಗೆ ಸುಳ್ಳು ಹೇಳಬೇಕು: ಮೈಯನ್ನು ತೆಳ್ಳಗಾಗಿಸಿ, ಚರ್ಮವನ್ನು ಬೆಳ್ಳಗಾಗಿಸಿ, ಕೂದಲನ್ನು ಗುಂಗುರಾಗಿಸಿ, ಹುಬ್ಬನ್ನು ಬಿಲ್ಲಿನಂತೆ ಬಾಗಿಸಿ, ಕಂಕುಳನ್ನು ನುಣ್ಣಗಾಗಿಸಿ, ಉಗುರುಗಳನ್ನು ಹೊಳೆಯಿಸಿ, ತುಂಬಿಲ್ಲದ ಕಡೆ ಹತ್ತಿ ತುಂಬಿ ದಪ್ಪಗಾಗಿಸಿ, ನಮ್ಮ ಅಬಲೆತನ ಎತ್ತಿ ತೋರುವಂಥ ಉಡುಪು ಧರಿಸಿ...

ಗಂಡಸಿನ ಘನತೆ ಎಂದರೆ ಮಾತಿನ ತೂಕ. ಯಾವ ಗ್ಯಾರಂಟಿಯ ಅಗತ್ಯವೂ ಇಲ್ಲದೆ ತನ್ನ ಮಾತನ್ನು ಇನ್ನೊಬ್ಬ ಗಂಡಸು ಮಾನ್ಯ ಮಾಡುವುದು.

'ನಮ್ಮ ನಾಡು ಸ್ವತಂತ್ರ, ನಮ್ಮ ಗಂಡಸರು ಪ್ರಾಮಾಣಿಕರು, ನಮ್ಮ ಹೆಂಗಸರು ಫಲವತಿಯರು'-ಹಳೆಯ ಅಮೆರಿಕನ್ ಘೋಷಣೆ.

ಗಂಡಸಿನ ಘನತೆಯ ಪರಿಕಲ್ಪನೆಯಲ್ಲಿ ಕೊಲ್ಲುವುದೂ ಒಂದು ಭಾಗ. 'ಘನತೆಯನ್ನು ಪ್ರೀತಿಸಿದಷ್ಟು ನಿನ್ನ ಪ್ರೀತಿಸಲಾರೆ' ('ಲೂಕಾಸ್ಟಳಿಗೆ: ಯುದ್ಧಕ್ಕೆ ಹೋಗುವುದರ ಬಗ್ಗೆ') ಗಂಡಸಿಗೆ ಘನತೆಯೆಂದರೆ ಲೆಕ್ಕ ಚುಕ್ತಾ ಮಾಡುವುದು. ಅದಕ್ಕೇ ದ್ವಂದ್ವ ಯುದ್ಧ ಇತ್ಯಾದಿ...

ಹೆಣ್ಣಿನ ಘನತೆ ಎಂದರೆ ಬೇರೆಯೇ: ಕನ್ಯತ್ವ, ಶೀಲ, ಪಾತಿವ್ರತ್ಯ. ಆದರೆ ಪ್ರಾಮಾಣಿಕತೆ ಹೆಣ್ಣಿಗೆ ಮುಖ್ಯವಲ್ಲ. ಗಂಡಸರ ಪ್ರಕಾರ ಹೆಣ್ಣು ಚಪಲೆ, ಚಂಚಲೆ, ಕುಟಿಲೆ, ನಿಗೂಢ. ಸುಳ್ಳು ಹೇಳುವುದು ಅವಳ ಲಕ್ಷಣ.

ನಮ್ಮ ದೇಹದ ಬಗ್ಗೆ ಸುಳ್ಳು ಹೇಳಬೇಕು: ಮೈಯನ್ನು ತೆಳ್ಳಗಾಗಿಸಿ, ಚರ್ಮವನ್ನು ಬೆಳ್ಳಗಾಗಿಸಿ, ಕೂದಲನ್ನು ಗುಂಗುರಾಗಿಸಿ, ಹುಬ್ಬನ್ನು ಬಿಲ್ಲಿನಂತೆ ಬಾಗಿಸಿ, ಕಂಕುಳನ್ನು ನುಣ್ಣಗಾಗಿಸಿ, ಉಗುರುಗಳನ್ನು ಹೊಳೆಯಿಸಿ, ತುಂಬಿಲ್ಲದ ಕಡೆ ಹತ್ತಿ ತುಂಬಿ ದಪ್ಪಗಾಗಿಸಿ, ನಮ್ಮ ಅಬಲೆತನ ಎತ್ತಿ ತೋರುವಂಥ ಉಡುಪು ಧರಿಸಿ...

ಒಂದೊಂದು ಕಾಲದಲ್ಲಿ ಒಂದೊಂದು ರೀತಿಯ ಸುಳ್ಳು. ಆಯಾಯ ಕಾಲದಲ್ಲಿ ಗಂಡಸರು ಏನನ್ನು ಕೇಳಲು ಇಷ್ಟಪಡುತ್ತಾರೋ ಅದು. ಹೆಣ್ಣಿನಲ್ಲಿ ಸಕ್ರಿಯ ಲೈಂಗಿಕತೆ ಒಪ್ಪದ ಕಾಲದಲ್ಲಿನ ಗೃಹಿಣಿಯರು ಸಂಭೋಗದಲ್ಲಿ ತೆಪ್ಪಗೆ ಮಲಗುವುದು ಭೂಷಣವಾದರೆ ಇಪ್ಪತ್ತನೆಯ ಶತಮಾನದ 'ಬಿಡುಗಡೆಗೊಳಿಸಲ್ಪಟ್ಟ' ಮಾದರಿ ಹೆಣ್ಣು ಸಂಭೋಗದ ಉತ್ತುಂಗವನ್ನು ಏರುತ್ತಿರಬೇಕು. ಇಲ್ಲಾ, ಕೊನೇ ಪಕ್ಷ ನಟಿಸುತ್ತಲಾದರೂ ಇರಬೇಕು. ನಾವು ಒಪ್ಪಿಕೊಂಡ ಸುಳ್ಳುಗಳು ಯಾವುವು, ಬಲವಂತವಾಗಿ ಶಾಮೀಲಾದ ಸುಳ್ಳುಗಳು ಯಾವುವು ಎಂದು ಹೊಳೆಯದೆ ತಬ್ಬಿಬ್ಬಾಗುವುದು ಅನಿವಾರ್ಯವೆನ್ನಿಸಿಬಿಡಬೇಕು.

'ಬದುಕಲ್ಲಿ ನೆಮ್ಮದಿ ತರುವ ಮದುವೆ, ಮನೆವಾಳ್ತೆ' ಅಥವಾ 'ಗಂಡ ಹೆಂಡತಿ ಸುಖವಾಗಿದ್ದರಂತೆ' ಎಂಬ ಕಟ್ಟು ಕಥೆಗಳು ಅತ್ಯಾಚಾರ, ಹೊಡೆತಬಡಿತ, ಮಾನಸಿಕ ಹಿಂಸೆ, ಮನೆಯ ಒಳಗೆ ಮತ್ತು ಹೊರಗೆ ಆದ ಅವಮಾನಗಳ ವಿರುದ್ಧ ಕೋರ್ಟಿನಲ್ಲಿ ನಿಂತು ಸಾಕ್ಷಿ ಹೇಳಬೇಕಾದಾಗ ಬಯಲಾಗುತ್ತವೆ.

ಹೆಣ್ಣು ಬದುಕುವುದು ತನ್ನ ಬಗ್ಗೆ ಇರುವ ಗಂಡಿನ ಕಲ್ಪನೆಗಳನ್ನು ಸಾಕಾರ ಮಾಡಲಿಕ್ಕೆ, ತನ್ನದಲ್ಲದ ಬದುಕನ್ನು ಬದುಕುವುದಕ್ಕೆ, ತನ್ನ ದೇಹದ ಬಗ್ಗೆ ಸುಳ್ಳು ಹೇಳುವುದನ್ನು ಪ್ರಜ್ಞಾಪೂರ್ವಕವಾಗಿ ನಿಲ್ಲಿಸಲು ನಡೆಸುವ ಪ್ರಯತ್ನದ ಗಳಿಗೆಯಲ್ಲಿ, ತನ್ನ ಬಗ್ಗೆ ಆತ ಹೇಳುವ ಸುಳ್ಳುಗಳನ್ನು ನಂಬಲು ನಿರಾಕರಿಸುವ ಪ್ರಯತ್ನದ ಕ್ಷಣದಲ್ಲಿ ಪ್ರಾಮಾಣಿಕ ಹೆಣ್ಣೊಬ್ಬಳು ಹುಟ್ಟುತ್ತಾಳೆ.

ಗಂಡಸಾದವನು ನಡೆದಿರುವುದರ ಬಗ್ಗೆ ಮಾತಾಡಬೇಕು. ಭಾವನೆಗಳ ಬಗ್ಗೆ ಅಲ್ಲ. ಆದರೂ ನಡೆದಿರುವುದರ ಬಗ್ಗೆಯೂ ಗಂಡಸರು ಸುಳ್ಳನ್ನೇ ಹೇಳುತ್ತಾ ಬಂದಿದ್ದಾರೆ.

.....

ವೈಯಕ್ತಿಕ ಸಂಬಂಧದಲ್ಲಿ ಹೇಳುವ ಸುಳ್ಳು ತಲೆ ಕೆಡಿಸಿ ಹುಚ್ಚು ಹಿಡಿಸಬಲ್ಲದು. 'ನಾನಲ್ಲಿ ಊಟ ಮಾಡಿದೆ' ಎಂದು ನೀನು ಹೇಳಿದಾಗ, 'ಆ ದಿನ ನಾನಲ್ಲಿ ಇದ್ದೆ' ಎಂದಾಗ, ನಿನ್ನ ಮಾತಿನ ಸತ್ಯವನ್ನು ನಂಬಿಕೆಯ ಮೇಲೆ ಸುಮ್ಮನೆ ಒಪ್ಪಿಕೊಂಡಿರುತ್ತೇನೆ. ಯಾರನ್ನು ನಂಬುತ್ತ ಬಂದಿದ್ದೇವೋ, ಅವರು ನಂಬಿಕೆಗೆ ಅನರ್ಹರು ಎಂದಾಗ ನನ್ನ ವೈಯಕ್ತಿಕ ಪ್ರಪಂಚ ಸ್ತಿಮಿತ ತಪ್ಪಿ ತುಯ್ಯಲಾರಂಭಿಸುತ್ತದೆ. ತಳವಿಲ್ಲದ ಆಳಕ್ಕೆ ಬೀಳುತ್ತಿದ್ದೀನೋ ಎಂದೆನಿಸುತ್ತದೆ.

'ನಿನಗೆ ನೋವಾಗುವುದನ್ನು ತಡೆಯಲು ಸುಳ್ಳು ಹೇಳಿದೆ' ಎಂದು ಹೇಳುತ್ತೀ. ಅದೂ ಒಂದು ಸುಳ್ಳು. ನನ್ನ ನೋವನ್ನು ನಿಭಾಯಿಸುವ ಶಕ್ತಿ ನಿನಗಿಲ್ಲ ಎನ್ನುವುದು ಸತ್ಯಕ್ಕೆ ಹತ್ತಿರ.

ಮಾತಿನಲ್ಲಿ ಮಾತ್ರ ಸುಳ್ಳು ಹೇಳಬೇಕಾಗಿಲ್ಲ, ಮೌನದಲ್ಲಿಯೂ ಹೇಳಬಹುದು.

ಸುಳ್ಳುಗಾರಳಿಗೆ ಸದಾ ಕಳೆದುಕೊಳ್ಳುವ ಭಯ. ಸಂಬಂಧಗಳನ್ನು ನಿಭಾಯಿಸಲು ಜಾಣತನ ಬೇಕು, ಪ್ರಾಮಾಣಿಕತೆ ಅಲ್ಲ. ಅವಳಿಗೆ ಅರೆದು ಕುಡಿಸಿರುವ ಪಾಠ ಇದೇ.

ಸುಳ್ಳುಗಾರಳಿಗೆ ಅನೇಕ ಸ್ನೇಹಿತರು. ಆದರೂ ಮಹಾ ಒಂಟಿ.

ಅವಳಿಗೆ ಭಯವೂ ಜಾಸ್ತಿ.

ಆದರೆ ಭಯ ಯಾರಿಗಿಲ್ಲ? ಸುಳ್ಳುಗಾರಳಿಗೇ ವಿಶಿಷ್ಟವಾದ ಭಯಗಳಿವೆಯೆ?

ಅವಳಿಗೆ ತಾನು ಕಂಡುಕೊಂಡ ಸತ್ಯಗಳು ಸಾಕಾಗಲಾರವು ಎಂಬ ಭಯ. ಕಳೆದುಕೊಳ್ಳುವ, ಖಾಲಿತನದ, ಆಳದ ಕತ್ತಲೆಯ ಭಯ. ಈ ಆಳದ ಕತ್ತಲೆಯಿಂದ ಮಕ್ಕಳನ್ನು ಹುಟ್ಟಿಸಿ ತಾನು ತುಂಬಿಕೊಂಡಂತೆ ತೃಪ್ತಿಯಿಂದ ನಿಟ್ಟುಸಿರು ಬಿಡುತ್ತಾಳೆ. ಖಾಲಿತನವನ್ನು ಮೀರಿದೆ ಎಂದು ಸಂಭ್ರಮಿಸುತ್ತಾಳೆ. ತನ್ನ ಭಯವನ್ನು ಮೀರಲು ಸುಳ್ಳುಗಳನ್ನು ಒಪ್ಪಿಕೊಳ್ಳಲಾರಂಭಿಸುತ್ತಾಳೆ. ಬದುಕು ತನ್ನ ಕೈಲಿದೆ ಎಂಬ ಭ್ರಮೆಯಲ್ಲಿ ಮುಳುಗಿ ಹೋಗುತ್ತಾಳೆ. ಬದುಕುಳಿಯಲು ಸುಳ್ಳು ಹೇಳುತ್ತಾಳೆ.

ವಿಸ್ಮೃತಿ ಸುಳ್ಳುಗಾರಳನ್ನು ಆಗಾಗ್ಗೆ ಕಾಡುತ್ತದೆ. ನೆನಪಿನ ನಾಶವೆಂದರೆ ಸುಪ್ತಪ್ರಜ್ಞೆಯ ಮೌನ.

ಸುಳ್ಳು ಹೇಳುವುದೇ ಅಭ್ಯಾಸವಾದಾಗ, ಸುಪ್ತಪ್ರಜ್ಞೆಯೊಂದಿಗೆ ನಮ್ಮ ತಂತು ಕಡಿದು ಹೋಗುತ್ತದೆ. ನಿದ್ದೆಯನ್ನು ನೀಡುವ, ಆದರೆ ಕನಸುಗಳನ್ನು ಅಳಿಸಿ ಹಾಕುವ ನಿದ್ದೆ ಮಾತ್ರೆಯಂತೆ. ಸುಪ್ತಪ್ರಜ್ಞೆಗೆ ಸತ್ಯ ಬೇಕು. ಸತ್ಯ ಬೇಕಿಲ್ಲದವರ ಜೊತೆ ಸುಪ್ತಪ್ರಜ್ಞೆ ಮಾತನಾಡುವುದಿಲ್ಲ.

ಸುಳ್ಳಿನ ಬಗ್ಗೆ ಹೇಳಬೇಕೆಂದರೆ ಸತ್ಯದ ಬಗ್ಗೆ ಹೇಳಲೇಬೇಕು. ಆದರೆ ಅಷ್ಟು ಸರಳವಲ್ಲ. 'ಇದೇ ಸತ್ಯ' ಅಥವಾ 'ಇದೂ ಸತ್ಯ' ವೆನ್ನುವುದು ಇಲ್ಲ, ಸತ್ಯವೆಂದರೆ ವಸ್ತುವಲ್ಲ, ವ್ಯವಸ್ಥೆಯೂ ಅಲ್ಲ, ಅದೊಂದು [illegible]ವಾಗುತ್ತ ಹೋಗುವ ಸಂಕೀರ್ಣತೆ. ಕಂಬಳಿಯ ವಿನ್ಯಾಸವೆನ್ನುವುದು ಬರೀ ಹೊದಿಕೆ ಮಾತ್ರ. ಹತ್ತಿರದಿಂದ ನೋಡಿದಾಗ, ಅಥವಾ ನಾವೇ ಅದನ್ನು ನೇಯ್ದಾಗ, ಹೊದಿಕೆಯ ಒಳಗೆ ಹರಿಯುತ್ತಿರುವ ನೂರಾರು ಎಳೆಗಳು, ಕಂಬಳಿಯ ಬೆನ್ನಲ್ಲಿ ಬಿಗಿದ ಹತ್ತಾರು ಗಂಟುಗಳು ಕಾಣುತ್ತವೆ.

ಅದಕ್ಕೇ ಪ್ರಾಮಾಣಿಕತೆಯಿಂದ ಮಾತನಾಡುವ ಪ್ರಯತ್ನ ತುಂಬಾ ಮುಖ್ಯ. ಸುಳ್ಳುಗಾರರಿಗೆ ಸುಳ್ಳೆನ್ನುವುದು ಎಲ್ಲವನ್ನೂ ಸರಳೀಕರಿಸುವ ಸಾಧನ. ಸತ್ಯ ಅಷ್ಟು ಸರಳವಲ್ಲ.

.....

ಬೇರೆಯವರಿಗೆ ಸುಳ್ಳು ಹೇಳುತ್ತಾ ನಮಗೇ ಸುಳ್ಳು ಹೇಳಿಕೊಳ್ಳಲು ಆರಂಭಿಸುತ್ತೇವೆ. ಘಟನೆಯೊಂದರ, ವ್ಯಕ್ತಿಯೊಬ್ಬರ ಮಹತ್ವವನ್ನು ಅಲ್ಲಗಳೆದು ಬದುಕಿನ ಒಂದು ಭಾಗವನ್ನೇ ಕಳೆದುಕೊಳ್ಳುತ್ತೇವೆ. ಗತದ ಒಂದು ಭಾಗವನ್ನಳಿದು ಮುಂದೆ ತಂದು ಇನ್ನೊಂದನ್ನು ಒತ್ತರಿಸಿ ನಮ್ಮನ್ನೇ ವಂಚಿಸಿಕೊಳ್ಳುತ್ತೇವೆ.

ದೇಹದಂತೆ ಸುಪ್ತಪ್ರಜ್ಞೆಯೂ ಸತ್ಯವನ್ನು ಬೇಡುತ್ತದೆ. ತರಾವರೀ ಕನಸುಗಳು ಸುಪ್ತಪ್ರಜ್ಞೆಯ ಸಂಕೀರ್ಣತೆಗೆ, ಕನಸುಗಳನ್ನು ನನಸಾಗಿಸುವ ಪ್ರಯತ್ನಕ್ಕೆ ಹಿಡಿದ ಕನ್ನಡಿ. ಕಾವ್ಯವೆನ್ನುವ ಸಮೃದ್ಧಿ ಹುಟ್ಟುವುದು ಆ ಪ್ರಯತ್ನದಿಂದಲೇ.

....

'ಪ್ರೀತಿ' ಎನ್ನುವುದು ಇಬ್ಬರು ವ್ಯಕ್ತಿಗಳನ್ನೊಳಗೊಂಡ ಒಂದು ಸತತ ಕ್ರಿಯೆ. ಅದು ಸೂಕ್ಷ್ಮವಾಗಿ, ಹಿಂಸೀಯವಾಗಿ, ಕೆಲವೊಮ್ಮೆ ಭಯ ಹುಟ್ಟಿಸುತ್ತಾ, ಹಲವೊಮ್ಮೆ ಸತ್ಯವೆಂದುಕೊಂಡಿದ್ದನ್ನು ಇಲ್ಲವಾಗಿಸಿ ಹೊಸ ಸತ್ಯಗಳನ್ನು ಹುಟ್ಟಿಸುವ, ಅದರ ಬಗ್ಗೆ ಅವರಿಬ್ಬರೂ ಮಾತನಾಡಬಲ್ಲ ಶಕ್ತಿ ಕೊಡುವ ಪ್ರಕ್ರಿಯೆ. ಆತ್ಮವಂಚನೆ, ಒಂಟಿತನ ಬೇಡವೆನ್ನುವುದಾದರೆ ಈ ಪ್ರಕ್ರಿಯೆಗೆ ಒಡ್ಡಿಕೊಳ್ಳುವ ಧೈರ್ಯ ಬೇಕು.

ಹೀಗೆ ಒಡ್ಡಿಕೊಳ್ಳುವುದೆಂದರೆ ನಮ್ಮನ್ನು ನಾವು ಗೌರವಿಸಿದಂತೆ.

....

ಮನುಷ್ಯರ ನಡುವಿನ ಸಂಬಂಧಗಳಿಗೆ ಅನಂತ ಸಾಧ್ಯತೆಗಳಿವೆ. ಬದುಕಿನ ಅತ್ಯಂತ ವಿಶಿಷ್ಟ ಸತ್ಯ ಎಂದರೆ ಇದೇ. ಸುಳ್ಳು ಹೇಳುವುದು ಆ ಸಾಧ್ಯತೆಗಳನ್ನು ನಿರ್ಲಕ್ಷಿಸಿದಂತೆ. ಸಂಬಂಧಗಳಲ್ಲಿ ಜಾಣತನ, ನಿಯಂತ್ರಿಸುವ ಹುನ್ನಾರವೇ ಮುಖ್ಯವಾದಾಗ ಸಿಕ್ಕಿಕೊಂಡ ಟೇಪಿನಂತೆ ಹಾಡಿದ್ದನ್ನೇ ಹಾಡುತ್ತಿರುತ್ತದೆ. ಅಲ್ಲಿ ಸಂಬಂಧಗಳ ಸಂಗೀತವಿರುವುದಿಲ್ಲ.

ನನಗಿಲ್ಲಿಯವರೆಗೆ ಗೊತ್ತಿಲ್ಲದ ಸತ್ಯವೊಂದು ನನ್ನೆದುರಿಗೆ ಬಿಚ್ಚಿಕೊಂಡಾಗ ಇನ್ನಿಲ್ಲದಂತೆ ನೋವಾಗುತ್ತದೆ ನಿಜ. ಆದರ ಜೊತೆಯೇ ಸಮಾಧಾನದ ಅಗಾಧ ಅಲೆಯೊಂದು ಬಂದು ನನ್ನನ್ನು ನಿಟ್ಟುಸಿರಲ್ಲಿ ಮುಳುಗಿಸುತ್ತಲ್ಲ? ಬದುಕನ್ನು ಹೆಚ್ಚು ಹತ್ತಿರದಿಂದ ನೋಡುವ ಶಕ್ತಿಯನ್ನು ಅದು ಕೊಡುತ್ತದೆ ಎಂದರೆ ಸುಳ್ಳೆ? ಹಲವೊಮ್ಮೆ ಈ ಸತ್ಯಗಳು ಅಚಾನಕ್ಕಾಗಿ, ಅಪರಿಚಿತರಿಂದ ಬರುತ್ತವೆ.

ನಿನ್ನೊಂದಿಗೆ ಘನತೆ ಗೌರವದಿಂದ ಬದುಕುವುದೆಂದರೆ ನಿನ್ನೊಂದಿಗೆ ಒಮ್ಮೆಲೇ ಎಲ್ಲವನ್ನೂ ಹೇಳಿಬಿಡಬಹುದು ಎಂದಲ್ಲ, ಅಥವಾ ಮುಂಚೆಯೇ ಏನು ಹೇಳಬೇಕೆಂದು ನನಗೆ ಗೊತ್ತು ಅಂತ ಸಹ ಅಲ್ಲ. ನಿನ್ನೊಂದಿಗೆ ಹೇಳಿಕೊಳ್ಳುವ ತಹತಹ ನನ್ನಲ್ಲಿದೆ ಎಂದಷ್ಟೇ ಅರ್ಥ. ಆದರ ಸಾಧ್ಯತೆಗಳು ಭಯ ಹುಟ್ಟಿಸಬಹುದು, ಆದರೆ ಘಾತಿಸುವುದಿಲ್ಲ. ನಿನ್ನ ತಡವರಿಸುವಿಕೆಯಲ್ಲಿ ನನಗೆ ಸ್ಥೈರ್ಯ ಸಿಗಬಹುದು. ನನ್ನ ನಿನ್ನ ನಡುವೆ ಸತ್ಯ ಹೇಳುವ ಸಾಧ್ಯತೆಗಳನ್ನು ನಾವು ಸದಾ ಹುಡುಕುತ್ತಿರುತ್ತೇವೆ.

ಅದೇ ನಮ್ಮಿಬ್ಬರ ನಡುವಿನ ಬದುಕಿನ ಸಾಧ್ಯತೆ.

(ಅಮೆರಿಕನ್ ಲೇಖಕಿ ಆಡ್ರಿಯೆನ್ ರಿಚ್ ಬರೆದ 'ಆನ್ ಲೈಸ್, ಸೀಕ್ರೆಟ್ಸ್, ಅಂಡ್ ಸೈಲೆನ್ಸ್: ಸೆಲೆಕ್ಟೆಡ್ ಪ್ರೋಸ್, 1966-778' ಅದರ ಕೆಲವು ಭಾಗಗಳು)



ಬರುವುದೇನ ನೆಪ್ಪಿಗೆ...?

ಸುಕನ್ಯಾ ಕನಾರಳ್ಳಿ

ನನ್ನ ಕಣ್ಣು
ಏನು ಹೇಳುತ್ತಿವೆಯೋ
ಅದನ್ನು ನನ್ನ
ಶಬ್ದಗಳು ಹೇಳಲಾರವು

ಒಡಲ ಕಂದನ
ಸಾವ ಉಡಿಯಲ್ಲಿ ಕಟ್ಟಿಕೊಂಡ
ಕಿಸಾಗೌತಮಿಯ ಕಣ್ಣಿನ
ಕಳವಳದ ಭಾಷೆ
ಶಬ್ದಗಳಿಗೆ ನಿಲುಕದು

ಕಳೆದ ಬೇಸಿಗೆಯ ತಲ್ಲಣ
ಈ ಮಳೆಗಾಲದ ನಿಶ್ಯಬ್ದ ಮೌನ
ಪ್ರತಿಕ್ಷಣ ಕಣ್ಣಲ್ಲೇ ಹೆಪ್ಪುಗಟ್ಟುವ
ಎದೆಯ ಭಾಷೆಯನ್ನು
ಕರಿ ಮಸಿ ಹೇಳಲಾರದು

ಶಬ್ದಗಳು ಹೇಳಲಾರವು
ಭೂಮಿ ಬಿತ್ತುವಾಗಿನ
ಕಣ್ಣಿನನುಭವವನ್ನು
ಆ ಕ್ಷಣ ಎದೆಯಲ್ಲಿ ಉಲುಕಿ
ಕಣ್ಣಂಚಲ್ಲಿ ಮಿಂಚುವ ನಗೆ...
ಆ ಏರಿಳಿತ-ಉನ್ಮಾದದ
ಮರೆಯಲಾಗದ ಅವರ್ಣೀಯ ಚಿತ್ರಕವನ್ನು

ಈ ಸಂಜೆ ಸುರಿವ
ಈ ಮಳೆಯ ಮೇಲಾಣೆ ಗೆಳತಿ
ಕೆಲವೊಮ್ಮೆ ಶಬ್ದಗಳು ಹೇಳುವುದನ್ನು
ಕಣ್ಣುಗಳು ಹೇಳಲಾರವು
ಜೀವನದ ವಿಚಿತ್ರತೆ
ವಿಚಾರಗಳ ಸಂತೋಷವನ್ನು
ಶಬ್ದಗಳು ಹೇಳಿದ ಹಾಗೆ
ಕಣ್ಣು ಹೇಳಲಾರವು
ತನಗೆ ಕಾಣದ್ದನ್ನು
ಕಣ್ಣು ಹೇಳಲಾರವು
ಅಮೂರ್ತವನ್ನು ಮೂರ್ತ ಮಾಡುವ
ಶಬ್ದಗಳು ಮಾತ್ರ ಹಾಗಲ್ಲ

ಆದರೆ
ನನ್ನ ಹೃದಯ
ಏನು ಹೇಳುತ್ತದೆಯೋ
ಅದನ್ನು ನನ್ನ
ಕಣ್ಣು - ಶಬ್ದಗಳೂ ಹೇಳಲಾರವು...!
ಹೃದಯ ಮಾತ್ರ ಹೇಳಬಲ್ಲ
ನೀನು ಓದದೇ ಹೋಗಿರುವ
ಈ ಅಕ್ಷರ
ನಿನಗೆ ತಲುಪದಿರುವ
ಈ ಪ್ರೀತಿ
ನನ್ನ-ನಿನ್ನ ನಡುವಿನ
ಸಂಗತಿಗಳನ್ನು
ಈ ಕಣ್ಣು-ಶಬ್ದಗಳೂ
ಹೇಳಲಾರವು




ಭಾಷೆ


-ಬಸವರಾಜ ಸೂಳೇಬಾವಿ

ಉಪ್ಪಿಗಿಂತ ಹುಚ್ಚ ಬೇರೆ ಇಲ್ಲ

'ಮಾಸ್ತಿ ಕನ್ನಡದ ಆಸ್ತಿ' ಎನ್ನುವುದು ಉಪ್ಪಿಗೆ ...ತ್ತಿದೆಯೋ ಇಲ್ಲವೋ? ಆ ಮಾತು ಬೇರೆ. ಆದರೆ ...ಮಾಸ್ತಿ'ಯಾಗಲು ಹೊರಟ ಉಪೇಂದ್ರನಿಗೆ ಕನ್ನಡ ...ಂಘಟನೆಗಳು ತಕ್ಕ ಶಾಸ್ತಿ ಮಾಡಿಬಿಟ್ಟಿವೆ. ಅಲ್ಲಿಗೆ ...ಚಾರಪ್ರಿಯ ಉಪೇಂದ್ರನ ಬೌದ್ಧಿಕ ಆಸ್ತಿ ಏನೆಂಬುದು ...ತ್ತೊಮ್ಮೆ ಜಗಜ್ಜಾಹೀರಾಗಿದೆ. ಅದ್ಯಾವನೋ ಒಬ್ಬ ...ಮಾಸ್ತಿ ಅಂತಾ ರೌಡಿ ಇದ್ದನಂತೆ. ಸದ್ಯಕ್ಕೆ ಈ ರೌಡಿ ...ಮಾಸ್ತಿ' ಮಟಾಷ್!

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮಾಸ್ತಿ ವೆಂಕಟೇಶ್ ...ಯ್ಯಂಗಾರರು ಕನ್ನಡಿಗರಿಗೆ ಮಾಸ್ತಿ ಎಂದೇ ಪರಿಚಿತರು. ...ಂತಹವರ ಹೆಸರನ್ನು ತನ್ನ ಚಿತ್ರಕ್ಕಿಟ್ಟುಕೊಂಡು ವಿವಾದ ...ಟ್ಟಿಸಿ ಪುಕ್ಕಟೆ ಪ್ರಚಾರ ಪಡೆಯುವುದು ಉಪ್ಪಿಯ





ಲೆಕ್ಕಾಚಾರವಾಗಿತ್ತು. ಆದರೆ ಅದು ದೊಡ್ಡ ವಿವಾದ ಆಗುವ ಮೊದಲೇ ಠುಸ್ ಆಗಿಹೋಗಿದೆ. 'ಮಾಸ್ತಿ'ಯ ಮುಹೂರ್ತ ಕಾರ್ಯಕ್ರಮಕ್ಕೇ ಲಗ್ಗೆ ಇಟ್ಟ ಕನ್ನಡ ಸಂಘಟನೆಗಳ ಕಾರ್ಯಕರ್ತರನ್ನು ಎದುರಿಸಲಾಗದೇ ನಿರ್ಮಾಪಕ ರಾಮು ಚಿತ್ರದ ಟೈಟಲ್ ಬದಲಿಸುವುದಾಗಿ ಒಪ್ಪಿಕೊಂಡಿದ್ದಾರೆ. ಕ್ಲ್ಯಾಪ್ ಮಾಡಲು ಬಂದಿದ್ದ ಶಿವರಾಜ್‌ಕುಮಾರ್, ಚೇಂಬರ್ ಅಧ್ಯಕ್ಷ ...ಗರಾಜು ಸಹ ರಾಮು, ಉಪ್ಪಿಗೆ ತಿಳಿಹೇಳಿದ್ದಾರೆ. ...ಲ್ಲಿಗೆ ಮಾಸ್ತಿಯವರಿಗೆ ಮುಕ್ತಿ ಸಿಕ್ಕಿದೆ.

ಸಾಹಿತಿಗಳು ಈ ಟೈಟಲ್ ಕುರಿತು ಪ್ರತಿಭಟಿಸಿದಾಗ ...ಯಾವ ಕಾರಣಕ್ಕೂ 'ಮಾಸ್ತಿ' ಹೆಸರು ಬದಲಿಸುವುದಿಲ್ಲ' ...ಂದಿದ್ದ ನಿರ್ಮಾಪಕ ರಾಮು ರಕ್ಷಣಾ ವೇದಿಕೆಯ ...ರಾಟಗಾರರ' ಅಬ್ಬರಕ್ಕೆ ತಣ್ಣಗಾಗಿ ಟೈಟಲ್ ಬದಲಿ ...ಲು ಒಪ್ಪಿದ್ದಾರೆ. ಸಾಹಿತಿಗಳಿಗೆ ಸಿನಿಮಾದವರು ...ಡುತ್ತಿರುವ ಗೌರವ ಎಷ್ಟು ಗ್ರ್ಯಾಮ್ ಎಂಬುದು ...ದರಿಂದ ಅರ್ಥವಾಗುತ್ತದೆ.


ಈ ಹಿಂದೆ ಉಪೇಂದ್ರ `A', 'ಸ್ವಸ್ತಿಕ್', 'ಉಪೇಂದ್ರ', ...ಂ' ಅಂತಾ ಹೆಸರಿಟ್ಟಾಗ ಏನೋ ಡಿಫರೆಂಟ್ ಆಗಿ ...ಮಾಡುತ್ತಿದ್ದಾನೆ ಬಿಡ್ರಿ, ಅಂತ ಜನ ಸುಮ್ಮನಾಗಿದ್ದರು. ...ದರೆ ಯಾವಾಗ ಈತ ಈ ದೇಶದ ಒಂದು ದುರಂತ ...ನ್ನೂ ತನ್ನ ಪ್ರಚಾರದ ತೆವಲಿಗೆ ಬಳಸಿಕೊಂಡನೋ ...ಗ ಈತನ 'ಚೆಡ್ಡಿ' ಬುದ್ಧಿ ಬಟಾಬಯಲಾಗಿತ್ತು.

ಗುಜರಾತ್‌ನಲ್ಲಿ ಅಲ್ಪಸಂಖ್ಯಾತರ ಮಾರಣಹೋಮ ನಡೆಯುತ್ತಿದ್ದಾಗ ಉಪೇಂದ್ರನ ಪ್ರಚಾರದಾಹ ಜಾಗೃತಗೊಂಡಿತು. ಹಿಂದೆಮುಂದೆ ಯೋಚಿಸದೆ, ಕತೆ, ಸ್ಕ್ರಿಪ್ಟ್ ಬಗ್ಗೆ ತಲೆ ಕೆಡಿಸಿಕೊಳ್ಳದೆ ರಾಜೇಂದ್ರಸಿಂಗ್ ಬಾಬು ಜೊತೆ ಕೈಜೋಡಿಸಿ 'ಹಿಂದೂ' ಎಂಬ ಟೈಟಲ್ ರಿಜಿಸ್ಟರ್ ಮಾಡಿಯೇಬಿಟ್ಟ. ತಲೆಯಲ್ಲಿ ಪ್ರಚಾರ, ಲಾಭದ ಹುಳ ಹೊಕ್ಕಾಗ ಎಡವಟ್ಟನಂತಾಡದೇ ಇನ್ನೇನು? ಅಯೋಧ್ಯೆಯ ರಾಮನ ತರಹ ಬಿಲ್ಲು ಹಿಡಿದ (ಸಂಘ ಪರಿವಾರಿಗಳ ಅಚ್ಚುಮೆಚ್ಚಿನ ಪೋಟೋ!) ಉಪೇಂದ್ರನ ಸ್ಟಿಲ್ ಎಲ್ಲ ಪತ್ರಿಕೆಗಳಲ್ಲೂ ರಾರಾಜಿಸಿಬಿಟ್ಟಿತು. ಬ್ಯಾಕ್‌ಗ್ರೌಂಡ್‌ನಲ್ಲಿ ಹೊತ್ತಿ ಉರಿಯುತ್ತಿರುವ ಗೋಧ್ರಾ ಟ್ರೈನ್ ಬೇರೆ!

ಪ್ರಜ್ಞಾವಂತರೆಲ್ಲ ಈತನ ಈ ತೆವಲು ನೋಡಿ ಒಂದಿಷ್ಟು ಉಗಿದರು. ಆದರೆ ಕಟ್ಟಾ ಸಂಘಪರಿವಾರಿಗಳೇ ಆಕ್ರೋಶಗೊಂಡು ಎಗರಾಡತೊಡಗಿದರು. ಅಲ್ಲಿಗೆ ಉಪ್ಪಿಯ 'ಹಿಂದೂ' ಖತಂ ಹೋ ಗಯಾ! ಈ ಚಿತ್ರ ನಿರ್ದೇಶಿಸಬೇಕಿದ್ದ ಸಿಂಗ್ ಬಾಬುಗೂ ಮುಜುಗರವಾಗಿ ಸುಮ್ಮನಾದರು.

'An empty mind is a devil's workshop' ಎನ್ನುವಂತೆ ಉಪ್ಪಿಯ ತಲೆಯಲ್ಲಿ ಇಂತಹದ್ದೇ ಐಡಿಯಾಗಳು ಕುಣಿಯುತ್ತಿರುತ್ತವೆ. ಓಂ, ಶ್, A ಇಂತಹ ವಿಚಿತ್ರ ಟೈಟಲ್‌ಗಳು ಪ್ರಚಾರ ತಂದಿದ್ದನ್ನೇ ಖಾಯಂ ಸಕ್ಸಸ್ ಎಂದು ನಂಬಿರುವ ಉಪ್ಪಿಗೆ, ನಾಲ್ಕೈದು ಸರಳ ಹೆಸರಿನ ಚಿತ್ರಗಳು ಪಲ್ಟಿ ಹೊಡೆದ ಕೂಡಲೇ ಅಸಂಬದ್ಧ ಟೈಟಲ್ಲುಗಳು ಫ್ಲ್ಯಾಷ್ ಆಗಿಬಿಡುತ್ತವೆ. ಇತ್ತೀಚೆಗಷ್ಟೇ 'ಕಲ್ಕಿ' ಎಂದು ಚಿತ್ರ ಘೋಷಿಸಿ ಹಲ್ಲುಬ್ಬಿನ ಫೋಟೋ ತೋರಿಸಿ ಗಿಮಿಕ್ ಮಾಡಲು ನೋಡಿದ. ಜನ ಕಿಸಕ್ ಅಂದದ್ದೇ ತಡ 'ಕಲ್ಕಿ' ಹಲ್ಕಿಸಿಯುತ್ತಾ ಗಟಾರಕ್ಕೆ ಬಿದ್ದುಹೋಯ್ತು.

'ನಂದಿನಿ' ಹಾಲಿಗೆ ಜಾಹೀರಾತು ನೀಡುತ್ತಾನಲ್ಲಾ? ಅದನ್ನು ಎನ್‌ಕ್ಯಾಷ್ ಮಾಡಿಕೊಳ್ಳಲು 'ರೈತ' ಎಂದು ಒಂದು ಚಿತ್ರ ಘೋಷಿಸಿದ. ಯಾರೂ ಕ್ಯಾರೇ ಅನ್ನದಿದ್ದಾಗ ನಕಲಿ 'ರೈತ' ಉಪ್ಪಿ ಗೋತ ಹೊಡೆದ.



ಅಂದರೆ ಪ್ರಚಾರದ ತೆವಲಿನ ಉತ್ಸಾಹದಲ್ಲಿ ಘೋಷಿಸಿದ ಚಿತ್ರಗಳು ಮೇಲೆಳಲೇ ಇಲ್ಲ...

ಉಪ್ಪಿಯ ಇತ್ತೀಚಿನ ಹಿಟ್ ಚಿತ್ರ ಯಾವುದು? ಎಂದು ಆತನ ಅಭಿಮಾನಿಗಳನ್ನೇ ಕೇಳಿ ನೋಡಿ. ಪಿಳಿಪಿಳಿ ಕಣ್ಣು ಬಿಡುತ್ತಾ "'ಕುಟುಂಬ' ಒಂದು ಪರವಾಗಿಲ್ಲ" ಎಂದು ಹೇಳುತ್ತಾರೆ. ಏಕೆಂದರೆ ಈ ನಟಭಯಂಕರ ಇತ್ತೀಚೆಗೆ ನೀಡಿದ ಫ್ಲಾಪ್ ಚಿತ್ರಗಳ ಪಟ್ಟಿ ನಾಗರಹಾವಿನಷ್ಟೇ ಉದ್ದವಿದೆ.

ನಾಗ್ತಿಹಳ್ಳಿ ಚಂದ್ರಶೇಖರ್ ಜೊತೆ ಸೇರಿ ನೇಪಾಳದ ಯುವರಾಜ ಜಿತೇಂದ್ರನ ಕಥೆ ಆಧರಿಸಿ 'ಸೂಪರ್‌ಸ್ಟಾರ್' ಆಗಲು ನೋಡಿದ. ಸಿನಿಮಾ ಸೂಪರ್ 'ಟಾರ್' ಆಗಿ ಹೋಯ್ತು. ಪ್ರೊಡ್ಯೂಸರ್ ಹನುಮಂತರಾಜು ಸೂಪರ್‌ಪಾಪರ್ ಆಗಿ ಹೋದ.

ರಿಮೇಕ್ ರಾಜ ಡಿ. ರಾಜೇಂದ್ರ ಬಾಬುನ ನಿರ್ದೇಶನದಲ್ಲಿ ಪ್ರೇಕ್ಷಕರ ಮೇಲೆ 'ನಾಗರಹಾವು' ಎಸೆದ. ಅದು ಬಟ್ಟೆ ಹಾವು ಎಂಬುದನ್ನು ಮೊದಲೇ ಅರಿತಿದ್ದ ಪ್ರೇಕ್ಷಕ ಬೆಚ್ಚಿಯೂ ಬೀಳಲಿಲ್ಲ, ಈ ಹಾವಿಗೆ ಕೇರೂ ಮಾಡಲಿಲ್ಲ. ಶಾರುಖ್‌ಖಾನ್‌ನ ಪಾತ್ರ ಮಾಡಲು ಹೋಗಿ ನಗೆಪಾಟಲಿಗೀಡಾದ ಉಪೇಂದ್ರನಿಗೆ ಅಮೀರ್‌ಖಾನ್ ತರಹ ಆ್ಯಕ್ಟ್ ಮಾಡಬಲ್ಲೆ ಎಂದೆನಿಸಿತಂತೆ. ಹಿಂದಿಯ 'ಗುಲಾಮ್' ಚಿತ್ರವನ್ನು ರಾತ್ರಿ ಕಳೆಯುವುದರಲ್ಲಿ ಕನ್ನಡಕ್ಕೆ ತಂದು 'ನಾನು ನಾನೇ' ಎಂದ. ಮತ್ತೊಂದು ರಾತ್ರಿ ಕಳೆಯುವಷ್ಟರಲ್ಲಿ ಪ್ರೇಕ್ಷಕರು "ನೀನು ನೀನೇ ಮಾರಾಯ. ನಿನ್ನೀ ಚಿತ್ರ ನೀನೇ ನೋಡಿಕೊ" ಎಂದು ಚಿತ್ರವನ್ನು ಗಟಾರಕ್ಕೆಸೆದು ಬಿಟ್ಟರು. ಅಷ್ಟೊತ್ತಿಗೆ ಒಂದಿಷ್ಟು ಹೊಗಳುಭಟ್ಟರು 'ಶಂಕರ್‌ನಾಗ್ ಬಿಟ್ರೆ ನೀನೇ ಗುರು' ಎಂದು ರೈಲು ಹತ್ತಿಸಿದರು. ರೈಲು ಟಿಕೆಟ್ಟಿನ ಖರ್ಚನ್ನು ರಾಮು ತಲೆಗೆ ಹಾಕಿದ ಉಪ್ಪಿ 'ಆಟೋ ಶಂಕರ್' ಎಂದು ಆಟೋ ಚಾಲೂ ಮಾಡಿದ್ದೇ ತಡ ಆಟೋ ಪಲ್ಟಿ ಹೊಡೆದಿತ್ತು. ಅದಕ್ಕೂ ಮೊದಲು ತೆಲುಗಿನ ಚಿತ್ರವೊಂದರ ರೀಮೇಕ್ 'ಗೋಕರ್ಣ' ಮಾಡಿದ. ಜನ 'go go Karna' ಎಂದಿದ್ದೇ ತಡ, ಚಿತ್ರ ಗೋಕರ್ಣದ ಸಮುದ್ರದ ಪಾಲಾಗಿ ಹೋಯ್ತು. ಹೇಗಾದರೂ ಮಾಡಿ ಸುದ್ದಿಯಲ್ಲಿರಲೇಬೇಕೆಂದು 'ನ್ಯೂಸ್' ಮಾಡಿದ. ಆದರೆ 'ನ್ಯೂಸ್' ಮಾತ್ರ ಸುದ್ದಿಯಾಗಲೇ ಇಲ್ಲ, ಶಿವಮಣಿ ನಿರ್ದೇಶನದಲ್ಲಿ 'ಓಂಕಾರ' ಹಾಡಿದ. ಕೇಳುವವರಿಲ್ಲದೇ ಕಿಸಬಾಯಿದಾಸನಾದ.

ಶಾರುಖ್ ಆಯ್ತು, ಅಮೀರ್ ಆಯ್ತು, ಸಂಜಯ್ ದತ್ ಯಾಕಾಗಬಾರದು ಎಂದವನೇ 'ಮುನ್ನಾಭಾಯಿ ಎಂ.ಬಿ.ಬಿ.ಎಸ್.'ಅನ್ನು ಡಿ. ರಾಜೇಂದ್ರಬಾಬು ಕೈಗಿತ್ತು ಭಟ್ಟಿ ಇಳಿಸಿದ. 'ಉಪ್ಪಿದಾದಾ ಎಂಬಿಬಿಎಸ್' ರಿಲೀಸ್ ಆದ ದಿನವೇ ರೋಗಕ್ಕೆ ತುತ್ತಾಗಿ ಆಸ್ಪತ್ರೆ ಸೇರಿಹೋಯ್ತು.

ಬರೀ ಗಿಮಿಕ್‌ಗಳನ್ನು ಮಾಡುತ್ತಲೇ ಬಂದ ಉಪ್ಪಿ ಅಂಬರೀಷ್ ಎದುರು 'ತಂದೆಗೆ ತಕ್ಕ ಮಗ'ನಾಗಲು ಹೋದ. ಪ್ರೇಕ್ಷಕರು 'ತಂದೆಗೆ ತಕ್ಕ ಮಗ' ಎಂದು ಈ ಚಿತ್ರವನ್ನು ಒಂದೇಟಿಗೆ ಓಡಿಸಿಬಿಟ್ಟರು.

ಆದರೆ ಈ 'ಮಗ' ಸುಮ್ಮನೇ ಕೂರುವವನಲ್ಲವೇ ಅಲ್ಲ! 'ಪಿತಾಮಗನ್' ನಕಲು ಶುರು ಹಚ್ಚಿಕೊಂಡಿದ್ದಾನೆ.

ಹೀಗೆ ಇತ್ತೀಚೆಗೆ ಕನ್ನಡದ ಗ್ರೇಟೆಸ್ಟ್ ಫ್ಲಾಪೆಸ್ಟ್ 'ನಟ' ಎನ್ನಿಸಿಕೊಂಡ ಉಪೇಂದ್ರ ರಾಮು ತಲೆಗೆ 'ಮಾಸ್ತಿ'ಯನ್ನು ತುಂಬಿದ. ಮಾಸ್ತಿ ಎಂದರೆ ಯಾರು ಎಂಬುದೇ ಗೊತ್ತಿಲ್ಲದ ರಾಮು ಮತ್ತು ಶಿವಮಣಿ 'ಯೆಸ್' ಎಂದರು. ಜನ ಉಗಿದ ಕೂಡಲೇ 'ಸಾರಿ, ನೊ, ನೊ' ಎನ್ನುತ್ತಿದ್ದಾರೆ!

-ಪಿ.ಕೆ. ಮಲ್ಲನಗೌಡರ್

ಮನುವಾದಿ ಉಪ್ಪಿ

ಗಿಮಿಕ್‌ಗಳನ್ನೇ ಬಂಡವಾಳ ಮಾಡಿಕೊಂಡು ಬಂದಿರುವ ಉಪೇಂದ್ರ, ಒಂದಿಷ್ಟು ಅಭಿಮಾನಿ ಹೂರರನ್ನು ಪಡೆದು ಒಂದೆರಡು ಬಾಕ್ಸ್ ಆಫೀಸ್ ಹಿಟ್ ಚಿತ್ರಗಳನ್ನು ನೀಡಿದ. ಆದರೆ ಈತ ಪಕ್ಕಾ ಮನುವಾದಿ. 'ಈ ಕಾಲದಲ್ಲಿ ಬ್ರಾಹ್ಮಣರಿಗೆ ತಕ್ಕ ಮರ್ಯಾದೆಯೇ ಸಿಗುತ್ತಿಲ್ಲ' ಎಂದು ಸರಳವಾದ ಬ್ರಾಹ್ಮಣರನ್ನು ಒಲೈಸಲು 'ಓಂ' ಚಿತ್ರ ಮಾಡುತ್ತಾನೆ. 'ಸಜ್ಜನ' ಬ್ರಾಹ್ಮಣ ರೊಚ್ಚಿಗೆದ್ದರೆ ಮಚ್ಚು ಹಿಡಿಯುತ್ತಾನೆ ಎಂಬ ಸಂದೇಶ ನೀಡುತ್ತಾನೆ. ಹುಡುಗಿಯರು ಮಾಡ್ ಡ್ರೆಸ್ ಹಾಕುವುದರಿಂದಲೇ ರೇಪ್‌ಗಳಾಗುತ್ತವೆ ಎಂಬರ್ಥದ ಜಡ್ಜ್‌ಮೆಂಟ್ ಕೊಡುವ 'ಉಪೇಂದ್ರ' ಚಿತ್ರ ಮಾಡುತ್ತಾನೆ. ಅದರಲ್ಲಿ ವೇಶ್ಯೆಯರನ್ನು ಚಿಲ್ಲರೆ ಎಂಬಂತೆ ಚಿತ್ರಿಸುತ್ತಾನೆ. ಈಗ ರಾಮು ಚಿತ್ರಕ್ಕೆ 'Love ಲಾಂಗ್ Life' ಎಂಬ ವಿಕೃತ ಪಂಚ್‌ಲೈನ್ ಕೊಟ್ಟಿದ್ದಾನೆ. ಪ್ರೇಕ್ಷಕ ಪಂಚ್ ಕೊಡಲು ರೆಡಿಯಾಗೇ ಇದ್ದಾನೆ.

ಕನ್‌ಫ್ಯೂಸ್ ಮಾಡುವ ನಿರೂಪಣೆಯಿಂದಲೇ ಉಪ್ಪಿ ಒಂದಿಷ್ಟು ಯಶಸ್ವಿಯಾಗಿದ್ದ. ಇದನ್ನು ಈತ ಶ್ರೀರಂಗರ ನಾಟಕಗಳಿಂದ ನಕಲು ಮಾಡಲು ಯತ್ನಿಸಿದ್ದಾನಷ್ಟೇ. ಶ್ರೀರಂಗರ 'ನಾನೇ ಬಿಜ್ಜಳ', 'ಕೇಳು ಜನಮೇಜಯ' ಮುಂತಾದ ನಾಟಕಗಳಲ್ಲಿನ ಟ್ರಿಕ್ಸ್ ನೋಡಿದವರಿಗೆ ಉಪ್ಪಿಯ ಟ್ರಿಕ್ಸ್ ಖಾಂಜಿಪಿಂಜಿ ಎನಿಸಿಬಿಡುತ್ತವೆ.

ಕವಿಯಾದರು ಮಾಸ್ತಿ!

ಅಂತೂ ಕೊನೆಗೆ 'ಮಾಸ್ತಿ' ಟೈಟಲ್ ಕೈಬಿಡಲು ನಿರ್ಮಾಪಕ ರಾಮು ಒಪ್ಪಿದ್ದಾರೆ. ಉಪೇಂದ್ರ 'ಅದು ರಾಮು ಸೂಚಿಸಿದ ಟೈಟಲ್' ಎಂದು ರೀಲು ಬಿಟ್ಟಿದ್ದಾನೆ. ನಿರ್ದೇಶಕ ಮಲಯಾಳಿ ಶಿವಮಣಿಗಂತೂ ಮಾಸ್ತಿ ಎಂದರೆ Mass-thi ಎಂದೇ ಲೆಕ್ಕ! ರಾಮು ಮಾತ್ರ 'ಮಾಸ್ತಿಯಂತಹ ದೊಡ್ಡ ಕವಿಗೆ ಅವಮಾನ ಆಗುವುದಾದರೆ 'ಮಾಸ್ತಿ' ಟೈಟಲ್ ಕೈ ಬಿಡುವೆ' ಎಂದು ಹೇಳಿ ತಮ್ಮ ಮುಗ್ಧತನ ಮೆರೆದಿದ್ದಾರೆ. ಅಂತೂ ಲೇಖಕ ಮಾಸ್ತಿ ಕವಿಯಾದರು ಬಿಡಿ! ಶಿವಮಣಿಯ ಬೆಪ್ಪುತನ, ರಾಮು ಮುಗ್ಧತನ ನೋಡಿದರೆ 'ಮಾಸ್ತಿ' ಟೈಟಲ್ಲು ಉಪ್ಪಿ ಐಡಿಯಾ ಎಂಬುದು ಖಚಿತವಾಗುತ್ತದೆ. 'A', 'ಓಂ', 'ಶ್', 'ಸ್ವಸ್ತಿಕ್,' 'ಹಿಂದೂ', 'ಕಲ್ಕಿ'ಗಳಂತಹ ಟೈಟಲ್ ಗಿರಾಕಿ ಉಪ್ಪಿಗಷ್ಟೇ 'ಮಾಸ್ತಿ'ಯಂತಹ ಟೈಟಲ್ಲು ಹೊಳೆಯಲು ಸಾಧ್ಯ.


ಕೊನೆಗೂ ಉಪ್ಪಿಯ ರೌಡಿ 'ಮಾಸ್ತಿ'ಗೆ ಮಾಸ್ತಿಗಲ್ಲು ರೆಡಿಯಾಯ್ತು.

ಓರಾಟದ ಖನ್ನಡಿಗರು

ದಾಂಧಲೆ, ದಬ್ಬಾಳಿಕೆಯನ್ನೇ ಚಳವಳಿ ಎಂದುಕೊಂಡಿರುವ ಖನ್ನಡ ಓರಾಟಗಾರರು 'ಮಾಸ್ತಿ' ಟೈಟಲ್ ಕ್ಯಾನ್ಸಲ್ ಮಾಡಿಸುವಲ್ಲಿ ಸಫಲರಾಗಿದ್ದಾರೆ. ಇಂತಹ ಸಂದರ್ಭಗಳಲ್ಲಿ ಚಂಪಾ ಕೂಡಾ ಮಿಂಚಲೆತ್ನಿಸುತ್ತಾರೆ. ಆದರೆ ಇದೆಲ್ಲದರ ನಡುವೆ ಕನ್ನಡದ ನೈಜ ಸಮಸ್ಯೆಗಳು ಯಾರ ಗಮನಕ್ಕೂ ಬರುವುದಿಲ್ಲ.

ಟೈಟಲ್ಲು ಉಪ್ಪಿಯ ಗಿಮಿಕ್ಕಾದರೆ, ಅಬ್ಬರ ಓರಾಟಗಾರರ ಗಿಮಿಕ್ಕು.

ಇಬ್ಬರಿಂದಲೂ ಕನ್ನಡಿಗರಿಗೆ ಕಿರಿಕ್ಕು!



'ಮಾಸ್ತಿ' ಹೆಸರು ಬದಲಾಯಿಸುವಂತೆ ರಕ್ಷಣಾ ವೇದಿಕೆಯ ಪ್ರತಿಭಟನೆ

ಏಳೆಂಟು ಶತಮಾನಗಳ ಹಿಂದಿನ ಕಾಲ. ದೇಶಾದ್ಯಂತ ದೇಶದಲ್ಲೆಲ್ಲ ಅಧ್ಯಯನಗಳಿಲ್ಲದ ತುಂಬಿದ್ದ ಕಾಲ. ಇದ್ದ ಜನರೆಲ್ಲ ಬುಡಕಟ್ಟಿನವರು. ಅರಸನ ಅಂಕೆ ಇಲ್ಲ; ದೆವ್ವದ ಕಾಟ ಇಲ್ಲ; ದೇವರ ಭಯ ಇಲ್ಲ. ಕಾಡಿನಲ್ಲಿ ಸಿಗುವ ಗೆಡ್ಡೆಗೆಣಸು ತಿಂದುಕೊಂಡು ನೆಮ್ಮದಿಯಾಗಿ ಬದುಕಿದ್ದ ಕಾಲ. ಮಡಿಮೈಲಿಗೆ ಇಲ್ಲದೆ, ಪೂಜೆ ಪುನಸ್ಕಾರ ಇಲ್ಲದೆ ಬದುಕುತ್ತಿರುವ ಈ ಜಂತುಗಳಿಗೆ ರೌರವ ನರಕವೇ ಕಟ್ಟಿಟ್ಟಿದ್ದು ಅವರನ್ನು ಇದರಿಂದ ಪಾರು ಮಾಡುವುದು ನಾಗರಿಕರಾದ ನಮ್ಮ ಕರ್ತವ್ಯ ಅನ್ನಿಸಿತು ಕೆಲವರಿಗೆ. ಕಾಡು ನಾಶ ಮಾಡಿ ಊರು ಕಟ್ಟಿದ್ದ ಇವರು ಇದ್ದ ಅರಣ್ಯಕ್ಕೇ ಬಂದು ಮರ ಕಡಿದು ಗುಡಿಸಲು ಕಟ್ಟಿದರು. ಬುಡಕಟ್ಟಿನವರ ಉದ್ಧಾರಕ್ಕೆಂದು ಯಜ್ಞ ಹೋಮ ಎಲ್ಲವನ್ನೂ ಸಾಂಗವಾಗಿ ನೆರವೇರಿಸಲು ಪ್ರಾರಂಭಿಸಿದರು.

ಅಲ್ಲಿ ಮೊದಲೇ ಇದ್ದವರು ಪರಮ ಪಾಪಿಗಳು, ಅಜ್ಞಾನಿಗಳು ತಾನೆ. ತಮ್ಮ ಉದ್ಧಾರಕ್ಕಾಗಿಯೇ ನಾಗರಿಕರಾದವರು ಇಷ್ಟೆಲ್ಲ ಪರಿಪಾಟಲು ಪಡ್ತಿದಾರೆ ಅಂತ ಅರ್ಥ ಮಾಡಿಕೊಳ್ಳಲಿಲ್ಲ, ಇವರಿಗೇ ಕಿರುಕುಳ ನೀಡಲು ಪ್ರಾರಂಭಿಸಿದರು. ಯಜ್ಞ ಕುಂಡಕ್ಕೆ ಸುರಿಯಬಾರದ್ದನ್ನೆಲ್ಲ ಸುರಿದರು. ದೇವತೆಗಳನ್ನು ತೃಪ್ತಿ ಪಡಿಸುವುದಕ್ಕೆ ಅವಕಾಶವನ್ನೇ ನೀಡದೆ ಹೋದರು.

ಇವರು ನಾಗರಿಕರು ನೋಡಿ. ಈ ಮುಂಡೇಮಕ್ಕಳ ಜೊತೆ ಹೆಣಗಾಡುವುದಕ್ಕೆ ಆಗೋಲ್ಲ ಅಂತ ಭಗವಂತನನ್ನು ಕುರಿತು ತಪಸ್ಸು ಮಾಡಿದರು. ಅವರ ಭಕ್ತಿಗೆ ಮೆಚ್ಚಿದ ಆ ದಯಾಮಯಿ ತನ್ನೆಲ್ಲ ವೇಷಭೂಷಣಗಳೊಂದಿಗೆ ಪ್ರತ್ಯಕ್ಷ ಆದ. ತನ್ನ ಭಕ್ತರ ಗೋಳನ್ನು ಕೇಳಿಸಿಕೊಂಡ. ಅವನಿಗೋ ತನ್ನ ಭಕ್ತರ ಅಹವಾಲಿಗೆ ಸೂಕ್ತ ಪರಿಹಾರ ನೀಡಬೇಕು ಅನ್ನೋ ಉತ್ಕಟ ಅಭಿಲಾಷೆಯೇನೋ ಇತ್ತು, ಆದರೇನು ಮಾಡ್ತೀರಿ, ಇಂಗ್ಲಿಷಿನಲ್ಲಿ ಟ್ರಿಕಿ ಸಿಚುಯೇಷನ್ ಅಂತಾರಲ್ಲ ಅದರಲ್ಲಿ ಸಿಗಾಕಿಕೊಂಡಿದ್ದ, ಅದೇನಪ್ಪ ಅಂದರೆ ಗುಡ್ಡಗಾಡಿನ ಜನರ ನಾಯಕಿಯಾಗಿದ್ದೋಳು ಮಹಿಷಿ ಅನ್ನೋ ಹೆಸರಿನ ರಾಕ್ಷಸಿ. ಅವಳು ಈ ಹಿಂದೆ ತಪಸ್ಸಿಗೆ ಕುಳಿತಿದ್ದಳು. ಹೊಗಳಿಕೆಯ ಮಾತುಗಳು ಸದಾ ಕಿವಿಗೆ ಇಂಪಾಗಿರುತ್ತವಲ್ಲವಾ. ಭಗವಂತನಿಗೂ ಹಾಗೇ ಆಯಿತು. ಇಂತಹ ಮಂಪರಿನಲ್ಲಿಯೇ 'ಭಕ್ತೆ ಏನು ವರ ಬೇಕೋ ಬೇಡಿಕೋ' ಅಂದ. ಅದು ಚಾಲಾಕಿ ಹೆಣ್ಣು, ಜನನ ಆಗೋದು ಗಂಡು-ಹೆಣ್ಣುಗಳ ಸಮಾಗಮದಿಂದ ಅಂತ ತಿಳ್ಕಂಡಿತ್ತು, ತನ್ನನ್ನು ಯಾರೂ ಸಾಯಿಸಬಾರದು ಅಂತ ಅವಳೇನು ಮಾಡಿದಳು ಅಂದರೆ 'ಗಂಡು ಹೆಣ್ಣಿನ ಸಮಾಗಮದಿಂದ ಹುಟ್ಟಿದ ಯಾರಿಂದಲೂ ನನ್ನ ಮರಣ ಆಗಬಾರದು' ಅಂತ ವರ ಕೇಳಿದಳು! 'ತಥಾಸ್ತು' ಅಂದ ಭಗವಂತ! ಈಗ ಈ ಭಕ್ತರು ಬಂದು ಕೇಳುವವರೆಗೂ ಅವನಿಗೆ ತನ್ನ ಮೂರ್ಖತನದ ಅರಿವೇ ಆಗಿರಲಿಲ್ಲ. ಇದನ್ನೆಲ್ಲ ಭಕ್ತರಿಗೆ ವಿಷದೀಕರಿಸಿದ ಭಗವಂತ 'ಐ ಯಾಮ್ ಹೆಲ್ಪ್‌ಲೆಸ್' ಅಂತ ತಾರಮಯ್ಯ ಆಡಿದ.

'ವಾಟ್ ಎ ಸ್ಯಾಡ್ ನ್ಯೂಸ್' ಎಂಬುದಾಗಿ ಭಕ್ತ ಗಣ ಪರಿತಪಿಸಲಾಗಿ ಪುರುಷ ಪುರುಷ ಸಂಬಂಧದಿಂದ ಜನನ ಸಾಧ್ಯವೇ ಎಂಬುದನ್ನು ಪರಿಶೀಲಿಸಿದ. ಆ ಕರುಣಾಮಯಿಗೆ ಅಸಾಧ್ಯವೆಂಬುದು ಯಾವುದಿದೆ. ಹರಿ-ಹರರಿಂದ ಇದು ಸಾಧ್ಯ ಎಂಬುದಾಗಿ ತಿಳಿದು ತನ್ನ ಕಾರ್ಯಭಾರವನ್ನು ಅವರಿಗೆ ವರ್ಗಾಯಿಸಿದ.

ಹರಿ-ಹರರಿಗೆ ಇಂತಹ ಕೇಸುಗಳನ್ನು ಸಾಲ್ವ್ ಮಾಡುವುದು ದುರ್ಭರವೇನಲ್ಲ, ಹಿಂದೆ ಆ ಮಹಾವಿಷ್ಣು ಮೋಹಿನಿಯ ರೂಪ ತಾಳಿ ಭಸ್ಮಾಸುರನ ನಾಶ ಮಾಡಿದ್ದ ಅನುಭವ ಇತ್ತಲ್ಲಾ. 'ಸೋ ಪ್ರಾಬ್ಲಂ' ಅಂದ ವಿಷ್ಣು ಜಾಲಿಯಾಗಿ. ಹೆಣ್ಣಿನ ರೂಪ ತಾಳಿದರೆ ನಮ್ಮ ಕೆಲಸ ಕೈಗೂಡುವುದಿಲ್ಲ ಅಂತ ಮಹದೇಶ್ವರನು ಮಹಿಷಿ ಪಡೆದಿರುವ ವರದ ಬಗ್ಗೆ ತಿಳಿಸಿದಾಗ ಪೆಚ್ಚಾದ. ಅಂತೂ ಇಂತೂ ಪ್ರಕೃತಿ ನಿಯಮ ಮೀರಿ ಹರಿ-ಹರರ ಸಮಾಗಮ ಆಯಿತು. ಅಯ್ಯಪ್ಪ ಸ್ವಾಮಿ ಜನ್ಮ ತಾಳಿದ.

ಅಯ್ಯಪ್ಪ ಸ್ವಾಮಿಯು ಹರಿಯ ಗರ್ಭದಲ್ಲಿ ಎಷ್ಟು ದಿವಸ ಇದ್ದ? ಯಾವ ಭಾಗದಿಂದ ಹೊರಬಂದ ಎಂಬುದು


ಅಣಕ

ಯಕಶ್ಚಿತ್ ಹೆಣ್ಣಿನ ಪ್ರಲೋಭನೆಯಿಂದ ಬ್ರಹ್ಮಚರ್ಯ ದೀಕ್ಷೆ ತ್ಯಜಿಸುವುದೆ? ಅದು ಆಗದ ಮಾತು. 'ನಥಿಂಗ್ ಡೂಯಿಂಗ್' ಅಂದ ಸ್ವಾಮಿ. ಆ ಹೆಣ್ಣು ಕಾಡಿಸಿತು, ಪೀಡಿಸಿತು. ಅವಳ ಕಾಟ ತಾಳಲಾರದೆ "ನನ್ನ 'ಮಾಸ'ಗಳಲ್ಲಿ ಯಾವುದೇ ಹೊಸ ಭಕ್ತರು ಬಾರದಿದ್ದಲ್ಲಿ ನಿನ್ನನ್ನು ವಿವಾಹವಾಗುತ್ತೇನೆ" ಎಂಬ ನೆಪ ಹೇಳಿ ಸಾಗ ಹಾಕಿದೆ. ಇದನ್ನು ನಂಬಿದ ಆಕೆ ಅಂದಿನಿಂದಲೂ ಶಬರಿ ಮಲೈ ಪಕ್ಕದ ಬೆಟ್ಟದಲ್ಲಿ ಮಲ್ಲಿಕಾಪುರಂ ಎಂಬ ಹೆಸರಿನಲ್ಲಿ ಇನ್ನೂ ಕಾಯುತ್ತಾ ಕುಳಿತಿದ್ದಾಳೆ!

ಹೊಸ ಹೊಸ ಭಕ್ತರು ಬರುವುದು ನಿಲ್ಲುವ ಲಕ್ಷಣಗಳೇ ಕಂಡುಬರುತ್ತಿಲ್ಲ, ಇವರ ಮದುವೆಯಾಗುವ ಲಕ್ಷಣಗಳು ತೋರುತ್ತಿಲ್ಲ, ಮದುವೆ ಆಗುವವರೆಗೂ ದೇವರು ಬ್ರಹ್ಮಚರ್ಯ ನಿಷ್ಠೆ ಕಾಪಾಡಿಕೊಳ್ಳಬೇಕಲ್ಲ? ದೇವರ ಇಚ್ಛೆಗೆ ಪೂರಕವಾಗಿ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶ ನಿಷೇಧಿಸಲಾಗಿದೆ!

ದೇವರುಗಳ ಟೈಮೇ ಸರಿ ಇಲ್ಲ

ಅಪ್ರಸ್ತುತ. ಬ್ರಾಹ್ಮಣರು ಭಗವಂತನ ಹಣೆಯಿಂದ ಬಂದ ಹಾಗೆಯೇ ಯಾವುದೋ ಭಾಗದಿಂದ ಜನ್ಮತಾಳಿದ ಎಂಬುದು ಮುಖ್ಯ ಸಂಗತಿ. ಪ್ರಕೃತಿಗೆ ಅಸಹಜವಾಗಿ ಆ ದಯಾಮಯನು ಜನ್ಮ ನೀಡಬಲ್ಲ ಎಂಬುದಾಗಿ ಆ ದಡ್ಡ ಹೆಂಗಸಿಗೆ ತಿಳಿಯದೇ ಇದ್ದುದು ಒಳ್ಳೆಯದೇ ಆಯಿತು. ಪುರಾಣದಲ್ಲಿನ ಇಂತಹ ದುಷ್ಟ ಶಕ್ತಿಗಳೆಲ್ಲ ಸಾಯಬಾರದು ಎಂಬ ಆಸೆಯಿಂದ ಭಗವಂತನಿಂದ ವರ ಪಡೆದಿದ್ದರೂ ಇಂತಹ ಒಂದೊಂದು ಲೂಪ್ ಹೋಲ್ ಬಿಟ್ಟುಕೊಂಡೇ ಬಂದಿರುವುದು ಸಮಾಧಾನದ ವಿಷಯ!



ಆಮೇಲೆ ಮುಂದಿನದು ಯಥಾ ರೀತಿ ನಡೆಯಿತು. ಅಯ್ಯಪ್ಪ ಸ್ವಾಮಿಗೂ ಮಹಿಷಿ ಎಂಬ ರಾಕ್ಷಸಿಗೂ ಘನಘೋರ ಯುದ್ಧ ನಡೆಯಿತು. ಯಾವಾಗಲೂ ಒಳ್ಳೆಯದಕ್ಕೇ ಜಯ ಎಂಬ ನಿಯಮದಂತೆ ಅಯ್ಯಪ್ಪ ಸ್ವಾಮಿಯು ಮಹಿಷಿಯ ರುಂಡ ಚೆಂಡಾಡಿದ.

ಇಷ್ಟೇ ಆಗಿದ್ದರೆ ಸಮಸ್ಯೆ ಇರಲಿಲ್ಲ, ಆದರೆ ಅಯ್ಯಪ್ಪ ಸ್ವಾಮಿ ಏನು ಮಾಡಿದ ಅಂದರೆ ಮಹಿಷಿಯ ಶವದ ಮೇಲೆ, (ಶಿವನ ಜೀನ್ಸ್ ಇರಬೇಕು) ನೃತ್ಯ ಮಾಡಿದ. ಈ ಮಹಿಷಿ ತನ್ನ ಹಿಂದಿನ ಜನ್ಮದಲ್ಲಿ 'ಲೀಲಾ' ಆಗಿದ್ದಳು. ಅವಳು ಹೆಣದ ದೇಹದಿಂದ ಹೊರಬಂದಳು!

ಈ ಲೀಲಾ ಅನ್ನುವ ಹೆಣ್ಣುಮಗಳು ಮಹಿಷಿಯಂತೆ ಕ್ರೂರಿ ಆಗಿರಲಿಲ್ಲ, ಬಹಳ ಸೌಮ್ಯ ಸ್ವಭಾವದವಳು. ಆದರೂ ಹೆಣ್ಣಿನ ಚಂಚಲ ಸ್ವಭಾವಕ್ಕೆ ಅನುಗುಣವಾಗಿ ಬ್ರಹ್ಮಚಾರಿ ಅಯ್ಯಪ್ಪಸ್ವಾಮಿಗೆ ಮದುವೆ ಆಗಲು ಗಂಟುಬಿದ್ದಳು! ಏನು ಮಾಡಬೇಕು ಅಯ್ಯಪ್ಪಸ್ವಾಮಿ?

ಯಾಕೋ ಅಯ್ಯಪ್ಪಸ್ವಾಮಿಯ ಟೈಮೇ ಸರಿ ಇಲ್ಲ ಅಂತ ಕಾಣಿಸುತ್ತೆ. ಚಿತ್ರನಟಿ ಜಯಮಾಲಾ ಸ್ವಾಮಿಯ ಪಾದ ಸ್ಪರ್ಶಿಸಿದ್ದು ನಿಜ ಅಂತ ಹೇಳ್ತಿದಾರೆ. ಇನ್ನೊಬ್ಬ ನಟಿ ಗಿರಿಜಾ ಲೋಕೇಶ್ ಕೂಡ ನಾನೂ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ಹೋಗಿದ್ದೆ ಅಂತ ಹೇಳ್ತಿದಾರೆ. ಹೀಗೆ ಚೆಂದುಳ್ಳಿ ನಟಿಯರೆಲ್ಲ ಎದುರು ಬಂದು ನಿಂತರೆ ಆ ಬ್ರಹ್ಮಚಾರಿ ಸ್ವಾಮಿ ಬ್ರಹ್ಮಚರ್ಯ ನಿಗ್ರಹ ಹೇಗೆ ಸ್ವಾಮಿ? ಇವರೆಲ್ಲ ಆ ಸ್ವಾಮಿ ಟೆಂಪ್ಟ್ ಮಾಡೋಕೆ ಹೀಗೆಲ್ಲ ಮಾಡ್ತಿದಾರೆ ಅನ್ನಿಸುತ್ತೆ. ಆ ಸ್ವಾಮಿಯನ್ನು ಕೆಡಿಸಬೇಕು ಅಂತ ಇನ್ನೂ ಎಷ್ಟು ಮಹಿಳೆಯರು ಪ್ರಯತ್ನ ನಡೆಸಿದಾರೋ ಆ ಸ್ವಾಮೀನೆ ಹೇಳಬೇಕು!

ಟೈಂ ಕೆಟ್ಟಿರೋದು ಅಯ್ಯಪ್ಪ ಸ್ವಾಮಿಗೆ ಮಾತ್ರ ಅಲ್ಲ, ಗುರುವಾ ಯೂರು ಶ್ರೀ ಕೃಷ್ಣನ ಫಜೀತಿ ನೋಡಿ. ಭಾರತೀಯ ನಾರಿ ಅಂದಮೇಲೆ ದೇವರ ದರ್ಶನಕ್ಕೆ ಬರುವಾಗ ಮರ್ಯಾದೆಯಾಗಿ ಸೀರೆ ಉಟ್ಟು ಬರಬೇಕು. ಶರಾಯಿ, ಚೂಡಿದಾರು ಹೀಗೆ ಯಾವುದು ಬೇಕೋ ಅದನ್ನ ಹಾಕಿಕೊಂಡು ಬಂದರೆ ಹೇಗೆ ಹೇಳಿ. ದ್ವಾಪರ ಯುಗದಲ್ಲಿ ಸಾವಿರಾರು ಗೋಪಿಕಾ ಸ್ತ್ರೀಯರೊಡನೆ ಸರಸ ಸಲ್ಲಾಪ ಮಾಡಿದವನಿಗೆ ಅಯ್ಯಪ್ಪಸ್ವಾಮಿ ತರಹ ಬ್ರಹ್ಮಚರ್ಯೆ ಕಾಪಾಡುವ ಪ್ರಮೇಯ ಇಲ್ಲ, ನಿಜ. ಆದರೆ ಹೇಗೆ ಬೇಕೋ ಹಾಗೆ ಪುರುಷನನ್ನು ಉದ್ರೇಕಿಸುವಂತೆ ಬಟ್ಟೆ ತೊಟ್ಟು ಬಂದರೆ, ರುಚಿ ಕಂಡ ಜೀವ ಸುಮ್ಮನೆ ಇರೋಕೆ ಆಗುತ್ತದೆಯೇ? ಅರವತ್ತು ಸಾವಿರ ಗೋಪಿಕಾ ಸ್ತ್ರೀಯರ ಜೊತೆಗೆ ಇನ್ನೊಂದಷ್ಟು ಸಾವಿರ ಆಧು[…] ನಾರಿಯರನ್ನು ಸೇರಿಸಬೇಕಾಗುತ್ತೆ ಅಷ್ಟೆ. ತಮ್ಮ ದೇವ[…] ಇಂತಹ ದುರ್ದೆಸೆ ಬಾರದಿರಲಿ ಅಂತ ಸೀರೆ ಉಟ್ಟ[…] ಹೆಂಗಸರನ್ನು ಮಾತ್ರ ದೇವಸ್ಥಾನದ ಒಳಕ್ಕೆ ಬಿಡುತ್ತಾರ[…] ದೇವಸ್ಥಾನದ ಒಳಗೆ ಹೋಗಲು ಇಷ್ಟ ಇದ್ರೂ ಸಿ[…] ಉಡದೆ ಬಂದ ಹೆಂಗಸರು ಅಲ್ಲಿ ತಮ್ಮ ಬ[…] ಬದಲಾಯಿಸಬೇಕು. ಹಲವು ಸಲ ದೇವರ ಕಾವಲುಗಾರ[…] ಹೆಣ್ಣುಮಕ್ಕಳು ಬಟ್ಟೆ ಬದಲಾಯಿಸುವುದನ್ನೇ ಕಾಯು[…] ನಿಂತಿರುತ್ತಾರೆ! ಇವರು ಮಹಿಳೆಯರ ಅಂಗಸೌಷ್ಠವ ನೋ[…] ಟೆಂಪ್ಟ್ ಆಗಬಹುದು, ಆದರೆ ದೇವರಿಗೆ ಹೀಗೆ ಆಗದ[…] ಮಾಡುತ್ತಾರಲ್ಲಾ ಅದು ಮುಖ್ಯ!

ಇದ್ಯಾವುದೂ ತರಲೆ ತಾಪತ್ರಯ ಬರದೇ ಇದ[…] ಅಂತಾನೋ ಏನೋ ರಾಜರಾಜೇಶ್ವ[…] ದೇವಸ್ಥಾನಕ್ಕೆ ಹಗಲು ಹೊತ್ತಿನಲ್ಲಿ ಮಹಿ[…] ಯರ ಪ್ರವೇಶ ನಿಷಿದ್ಧ, ಅವರೇನಿದ್ದರ[…] ಸೂರ್ಯಾಸ್ತಮ ಆದಮೇಲೆ ದೇವರ[…] ನೋಡಬೇಕು. ದೇವರಿಗೆ ಇರುಳುಗಣ್[…] ಏನು ಕತೆಯೋ, ಅಂತೂ […] ಸಂಪ್ರದಾಯ ಇದೆಯಂತೆ. ಅದೂ ಹಿಂದೂ ಮಹಿಳೆಯ[…] ಮಾತ್ರ. ಅನ್ಯ ಧರ್ಮೀಯರಿಗೆ ಪ್ರವೇಶ ನಿಷಿದ್ಧ! ದೇವರ ಟೈಮೂ ಸರಿಯಾಗಿಲ್ಲ ಅಂತ ಕಾಣ್ಸು[…] ಸಿನಿಮಾ ನಟಿ, ಕಿರಿಸ್ತಾನ ಧರ್ಮದಾಕೆ, ಮೀರಾ ಜಾಸ್ಮಿ[…] ಎಂಬಾಕೆ ದೇವಸ್ಥಾನಕ್ಕೆ ನುಗ್ಗಿ ದೇವರ ಧರ್ಮ ಕೆಡಿಸಿದ್ದಾ[…] ಧರ್ಮದರ್ಶಿಗಳು ಸಕಾಲದಲ್ಲಿ ಎಚ್ಚೆತ್ತು ದೇವಸ್ಥಾನ[…] 'ಪುಣ್ಯ' ಮಾಡಿದರಂತೆ. ಅದಕ್ಕೆ ತಗಲುವ ಹತ್ತು ಸಾವ[…] ರೂಪಾಯಿಗಳನ್ನು ಕಿರಿಸ್ತಾನಳಿಂದ ಪೀಕಿದರಂತೆ. ದುಡ್ಡ[…] ಧರ್ಮ ಅಡ್ಡಿ ಬರಲಿಲ್ಲವಾ ಅನ್ನೋದು ಅಲಾಯಿ[…] ಮಾತು.

ಸಿನಿಮಾ ನಟಿಯರು ಮಾತ್ರ ದೇವರಿಗೆ ಟೈ[…] ಸರಿಯಿಲ್ಲದ್ದನ್ನು ನೋಡಿ 'ಕಾಟ ಕೊಡ್ತಿದಾರೆ' ಅಂತ ಅ[…] ಪಾಪ ಯಾವ ಮಹಿಳೆಯೂ ಕಾಟ ಕೊಡದಿದ್ದರ[…] ಕಂಚಿ ಕಾಮಾಕ್ಷಿಗೆ ಟೈಂ ಸರಿ ಇಲ್ಲವಂತೆ. ಹಿಂದೆ ಅಮ[…] ನವರ ದರ್ಶನಕ್ಕೆ ಅಂತ ದಿನಾಲೂ ಭಕ್ತರ ಸಂತೆ[…] ನೆರೆದಿರೋದಂತೆ. ಟೈಮು ನೋಡಿ, ಈಗ ಭಕ್ತರ ಸಂಖ್ಯೆಯ[…] ಇಳಿಮುಖ ಆಗಿದೆಯಂತೆ. ಜಗದ್ಗುರುಗಳೂ ಮರ್ಡ[…] ಕೇಸಲ್ಲಿ ಸಿಗಾಕಿಕೊಂಡವರೆ. ಅವರಿಗೂ ಟೈಂ ಸ[…] ಇಲ್ಲ, ಇದ್ಯಾಕಪ್ಪಾ ಹಿಂಗಾಯಿತು ಅಂತ ತಲೆ ಮೇಲೆ […] ಹೊತ್ತು ಕುಳಿತವರಿಗೆ ಸಡನ್ ಆಗಿ ಫ್ಲಾಷ್ ಆಯ್ತಂತೆ ದೇವಸ್ಥಾನದ ಬಾಗಿಲೇ ಇದಕ್ಕೆ ಕಾರಣ ಅಂತ! ಅದನ[…] ಸರಿಪಡಿಸಬೇಕು ಅಂತ ಹುಂಜನ್ನ ಬಲಿ ಕೊಟ್ಟು ವಾಸ[…] ರೀತಿ ಬಾಗಿಲನ್ನು ಬದಲಾಯಿಸುತ್ತಿದ್ದಾರಂತೆ! ಇನ[…] ಮೇಲಾದರೂ ಅಮ್ಮನವರ ಟೈಮು ಸರಿಯಾಗುತ್ತೋ[…] ಹೇಗೋ ನೋಡಬೇಕು!

ಅಲ್ಲ ಶಾಖಾಹಾರಿ ಬ್ರಾಹ್ಮಣರ ದೇವಸ್ಥಾನದಲ್ಲಿ ಹುಂ[…] ಬಲಿ ಕೊಡುವುದು ಅಂದರೆ... ಅದೆ ಗ್ರಹಗತಿಗಳು ಸ[…] ಇಲ್ಲ ಅಂದಾಗ ಅವುಗಳನ್ನು ಒಲಿಸಿಕೊಳ್ಳಲು ಏನ[…] ಮಾಡಬೇಕೋ ಅದನ್ನು ಮಾಡಬೇಕಾಗುತ್ತೆ, ಪ್ರಾಣಿ ಬ[…] ಅಂದರೆ ಪ್ರಾಣಿ ಬಲಿ; ನರಬಲಿ ಅಂದರೆ ನರಬಲಿ.

ಇದನ್ನ ಹೇಳಿದರೆ ಯಾವ್ದೋನೋ ಒಬ್ಬ ತ[…] ಕೆಟ್ಟೋನು ಹುಂಜನ ಬಲಿ ಯಾಕೆ ಕೊಟ್ಟರು ಗೊತ್ತಾ, 'ವಾಸ್ತುತಜ್ಞ ನಾನ್ ವೆಜಿಟೇರಿಯನ್ ಇರಬೇಕು' ಅನ್ನುವುದ[…] ಸರಿಯೇನ್ರಿ?

-ಎಚ್.ಎಲ್. ಕೇಶವಮೂರ್ತಿ

ಗೌಡರ 'ಲಂಕೇಶ್ ರಂಗಮಂದಿರ' ಸ್ವಾಗತಾರ್ಹ

ಕಳೆದ ವಾರದ ಮುಖಪುಟದಲ್ಲಿದ್ದ 'ಕದ್ದೋರು ಯಾರು?' ವರದಿ ತುಂಬಾ ಚೆನ್ನಾಗಿತ್ತು, ಅವರಿಬ್ಬರ ಫೋಟೋ ಪ್ರಕಟಿಸಿದ್ದು ಇನ್ನೂ ಅರ್ಥಪೂರ್ಣವಾಗಿತ್ತು, ಚೆನ್ನಿಗಪ್ಪ ಹಂದಿಯಂತೆ ಗಣಿಯಲ್ಲಿ ಪಾಳಿ ಮಾಡಿ ಬಂದು ಅಂದಾಗಲೇ ಅನುಮಾನವಿತ್ತು, ಅದು ಈಗ ಬೀದಿಗೆ ಬಿತ್ತು, ಇನ್ನು ಹರಕೆಯ ಕುರಿ ಎಂ.ಪಿ. ಪ್ರಕಾಶ್ ಮಗ ರವಿ ಗಣಿಯಲ್ಲಿ ಉದಯಿಸಿದ್ದು ಪ್ರಕಾಶರಿಗೆ ಶೋಭೆ ತರುವಂತದ್ದಲ್ಲ, ಇನ್ನಾದರೂ ಈ ಕೋ-ಜಾ ಸರ್ಕಾರ ತಮ್ಮ ಅಭಿವೃದ್ಧಿಯನ್ನು ಬಿಟ್ಟು ರಾಜ್ಯದ ಅಭಿವೃದ್ಧಿಯತ್ತ ಗಮನ ಹರಿಸಲಿ.

-ಮುತ್ತಣ್ಣ ಪೂಜಾರ್, ಕದಲಬಾಳು

ಜಿ.ರಾಜಶೇಖರ್‌ರ ಲೇಖನ ಸಕಾಲಿಕವಾಗಿತ್ತು, ತಪ್ಪು ಯಾರು ಮಾಡಿದರೂ ತಪ್ಪೇ. ತಪ್ಪಿಗೆ ಶಿಕ್ಷೆಯಾಗಬೇಕೇ ಹೊರತು ಧರ್ಮದ ಹೆಸರಿನಲ್ಲಿ ದ್ವೇಷದ ಬೀಜವನ್ನು ಬಿತ್ತುವ ಕೆಲಸ ಮಾಡಬಾರದು ಎನ್ನುವ 'ಲಂಕೇಶ್' ಮೌಲ್ಯಗಳಿಗೆ ಹ್ಯಾಟ್ಸ್ ಆಫ್.


-ಜ್ಯೋತಿ ಗುರುಪ್ರಸಾದ್, ಕಾರ್ಕಳ

ಬಿ.ಚಂದ್ರೇಗೌಡರು ಬಿದರಕೆರೆಯಲ್ಲಿ ನಿರ್ಮಿಸುತ್ತಿರುವ 'ಪಿ.ಲಂಕೇಶ್ ಬಯಲು ರಂಗ ಮಂದಿರ'ದ ಬಗ್ಗೆ ಓದಿ ತುಂಬಾ ಸಂತೋಷವಾಯಿತು. ಗೌಡರು ತಮ್ಮೂರಿನ ಬಗ್ಗೆ, ಹಾಗೂ ಲಂಕೇಶರ ಬಗ್ಗೆ ಇಟ್ಟಿರುವ ಪ್ರೀತಿ ನಿಜಕ್ಕೂ ನಮಗೆಲ್ಲಾ ಮಾದರಿ. ಹಳ್ಳಿಗಳಲ್ಲಿ ಹಾಳಾದ ರಾಜಕೀಯ ಪ್ರವೇಶ ಮಾಡಿ ಹಳ್ಳಿಗರಲ್ಲಿದ್ದ ಪ್ರೀತಿ ವಿಶ್ವಾಸ, ನಂಬಿಕೆಗಳು ನಾಶವಾಗಿ ದ್ವೇಷ, ಅಸೂಯೆ, ವೈರತ್ವ ತಾಂಡವವಾಡುತ್ತಿದೆ. ಇಂತಹ ಸಂದರ್ಭದಲ್ಲಿ ಗೌಡರ ರಂಗಮಂದಿರ ನಿರ್ಮಾಣ ನಿಜಕ್ಕೂ ಸ್ವಾಗತಾರ್ಹ. ರಂಗಮಂದಿರಗಳ ನಿರ್ಮಾಣ ಪ್ರತಿ ಹಳ್ಳಿಹಳ್ಳಿಗೂ ವಿಸ್ತರಿಸಿ ಜನರಲ್ಲಿ ಉತ್ತಮ ಬಾಂಧವ್ಯಕ್ಕೆ ವೇದಿಕೆಯಾಗಲಿ ಎಂಬುದೇ ನಮ್ಮೆಲ್ಲರ ಆಶಯ.

-ಡಿ.ಎಲ್. ಮಂಜು, ಬೆಂಗಳೂರು

"ಹುಬ್ಬಳ್ಳಿ RTO ಕಚೇರಿ ಕಮಾಯಿ: ಒಂದು ಕೋಟಿ" ಶೀರ್ಷಿಕೆ ಅಡಿಯಲ್ಲಿ ಪ್ರಕಟವಾದ ವರದಿಯಲ್ಲಿ ನನ್ನ ಹೆಸರನ್ನು ಪ್ರಕಟಿಸಿದ್ದೀರಿ. ನನಗೂ RTO ಕಚೇರಿಗೂ ಯಾವುದೇ ಸಂಬಂಧವಿಲ್ಲ, ನಾನು ದಲಿತನಾಗಿದ್ದು ರಾಜಕೀಯ ಪಕ್ಷದ ಕಾರ್ಯಕರ್ತನಾಗಿ ಸಮಾಜ ಸೇವೆ ಮಾಡುತ್ತಿದ್ದೇನೆ ಹೊರತು RTO ಕಚೇರಿಯಲ್ಲಿ ಕಮಾಯಿ ಮಾಡಿಲ್ಲವೆಂದು ಸ್ಪಷ್ಟಪಡಿಸುತ್ತೇನೆ.

- ಮೇಘರಾಜ ಹಿರೇಮನಿ, ಹುಬ್ಬಳ್ಳಿ


ಗೌರಿ ಲಂಕೇಶರ
ಲಂಕೇಶ್
ಬಳ್ಳಾರಿಯ
150 ಕೋಟಿ ಲಂಚ
ಅರ್ಕಾವತಿಯ
300 ಎಕರೆ ಮಾಯ
ಕದ್ದೋರು ಯಾರು?
ಕೇಸು ಹಾಕಲು ಕುಮಾರನಿಗೇಕೆ ಭಯ?
ಕುರುಬರ ಗುರು ಯಾರು?
ಹಾಸನ: ರಕ್ತ ಕೇಳುತ್ತಿದೆ ಕೇಬಲ್ ವಾರ್

ಹೊಗಳಿ ತೆಗಳಿ

ತಮ್ಮ ಪತ್ರಿಕೆಯಲ್ಲಿ ಪ್ರಕಟಗೊಂಡ 'ಬೆಂಗಳೂರು ಲಾಯರ್ ಮತ್ತು ಪೊಲೀಸ್ ಬೀದಿ ಜಗಳ' ಎಂಬ ಲೇಖನದಲ್ಲಿ ಬೀದಿಗಿಳಿಯದೇ ವಕೀಲರಿಗೆ ಬೇರೆ ದಾರಿಯಿಲ್ಲ ಎಂದು ಹೇಳಿರುವುದು ಸತ್ಯಕ್ಕೆ ದೂರವಾದದ್ದು. ವಕೀಲರ ಸಂಘದ ಚುನಾವಣೆಯ ಸಮಯದಲ್ಲೇ ಮಾಜಿ ಅಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಕೆ.ಎನ್. ಸುಬ್ಬಾರೆಡ್ಡಿ ರವರಿಗೆ ಇಂತಹ ಹೋರಾಟಗಳು ದಿಢೀರ್ ಎಂದು ಸೃಷ್ಟಿಯಾಗಿ ಗೋಚರವಾಗುವುದು ತೀರ ರಹಸ್ಯವಾದ ಸಂಗತಿಯಾಗಿದೆ. ಸುಬ್ಬಾರೆಡ್ಡಿ ಯವರು ಅಧ್ಯಕ್ಷರಾಗಿ ವಕೀಲ ವೃಂದಕ್ಕೆ ಹಲವಾರು ಜನಪರ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿರುವುದು ಸತ್ಯವಾದುದು. ಆದರೆ, ಇಂದಿನ ಅಧ್ಯಕ್ಷರಾದ ಡಿ.ಎಲ್. ಜಗದೀಶ್‌ರವರು ಯಾವ ರೀತಿಯಲ್ಲೂ ಹಿಂದುಳಿದಿಲ್ಲ, ಇವರು ಅಧ್ಯಕ್ಷರಾಗಿರುವಾಗ ವಕೀಲರಿಗೆ ಸ್ಟೈಂಡ್ ಜಾರಿಗೊಳಿಸುವ ಕಾರ್ಯ, ವಾಹನಗಳನ್ನು ಸುಲಭವಾಗಿ ನಿಲ್ಲಿಸಲು ನಿಲುಗಡೆಯ ವ್ಯವಸ್ಥೆ ಕನ್ನಡ ಮಾಧ್ಯಮದಲ್ಲಿ ಕಾನೂನು ಪದವಿ ಪಡೆದ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷೆಯಲ್ಲಿ ತರಬೇತಿ ನೀಡುವ ವ್ಯವಸ್ಥೆ ಕ್ಯಾಂಟೀನ್ ವ್ಯವಸ್ಥೆಯ ಸುಧಾರಣೆ ಇನ್ನೂ ಅನೇಕ ಜನಪರ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ್ದಾರೆ.

ಭಾರತೀಯ ಜನತಾ ಪಕ್ಷಕ್ಕೆ ತವರು ಮನೆಯಾದ ಬಸವನಗುಡಿ ಕ್ಷೇತ್ರದಲ್ಲಿ ತಮ್ಮ ನಿಷ್ಕ್ರಿಯತೆಯಿಂದ ಭಾರೀ ಸೋಲನ್ನು ಅನುಭವಿಸಿ ಈಗ ವಕೀಲರ ಸಂಘಕ್ಕೆ ಲಗ್ಗೆ ಇಟ್ಟಿರುವ ಸುಬ್ಬಾರೆಡ್ಡಿ ಯವರು ಇಂದಿನ ಅಧ್ಯಕ್ಷರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೊರೆಸಿ ವಕೀಲರುಗಳ ಮನಸ್ಸಿನಲ್ಲಿ ತಪ್ಪು ಅಭಿಪ್ರಾಯವನ್ನು ಬರುವಂತೆ ಮಾಡುತ್ತಿರುವುದು ತೀರಾ ಖಂಡನೀಯವಾದದ್ದು.

ಬಿ.ಎಸ್. ಜ್ಞಾನಪ್ರಕಾಶ್, ಅಧ್ಯಕ್ಷರು, ಪ್ರಗತಿಪರ ಚಿಂತನವೇದಿಕೆ

ಈ ವಿಭಾಗಕ್ಕೆ ಇ-ಮೇಲ್‌ನಲ್ಲಿ ಪತ್ರಗಳನ್ನು ಬರೆಯಲಿಚ್ಛಿಸುವವರು ಬರಹ ಅಥವಾ ನುಡಿ ತಂತ್ರಾಂಶದಲ್ಲಿ ಕಳುಹಿಸಿಕೊಡಬಹುದು.
ನಮ್ಮ e-mail ವಿಳಾಸ
lankesh70@rediffmail.com

ಸಿಗರೇಟು ಹೊಗೆ ತುಂಬಿದ್ದ ಆ ರೂಮ್!




ಆ ಚಿಕ್ಕ ರೂಮಿನಲ್ಲಿ ಇಪ್ಪತ್ತು ಜನ ಹುಡುಗರು ಕೂತು ಗಂಟೆ ಗಟ್ಟಲೆ ಮಾತನಾಡುತ್ತಿದ್ದಾಗ ಅಲ್ಲಿಯ ದೃಶ್ಯ ಹೇಗಿರುತ್ತಿತ್ತು ಗೊತ್ತಾ? ಇಡೀ ಕೊಠಡಿ ಹೊಗೆಯಿಂದ ತುಂಬಿರುತ್ತಿತ್ತು. ಯಾಕೆಂದರೆ ಅಷ್ಟೊತ್ತಿಗೆ ನಾವೆಲ್ಲಾ ಸಿಗರೇಟು ಸೇದುವುದನ್ನು ಕಲಿತಿದ್ದೆವು. ನಾವು ಸಿಗರೇಟು ಸೇದುತ್ತಿದ್ದದ್ದು ಹೊರಗಿನವರಿಗೆ ಗೊತ್ತಾಗಬಾರದು ಎಂದು ಆ ರೂಮಿನ ಕಿಟಕಿ-ಬಾಗಿಲನ್ನು ಹಾಕುತ್ತಿದ್ದೆವು. ಹೀಗಾಗಿ ನಾವೆಲ್ಲ ಬಿಟ್ಟ ಹೊಗೆ ಇಡೀ ರೂಮನ್ನೇ ಆವರಿಸಿರುತ್ತಿತ್ತು.

ನಿರೂಪಣೆ: ಸದಾಶಿವ ಶೆಣೈ

12

ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!



ನನ್ನ ಉಸಿರಾಗಿದ್ದ ಕ್ರಿಕೆಟನ್ನು ಬಿಟ್ಟ ನಂತರ ನಾನು ಒಂದು ತರಹ ಏಕಾಂಗಿಯಾದೆ. ಏಕೆಂದರೆ ನನ್ನ ಕ್ರಿಕೆಟ್ ಸ್ನೇಹಿತರು ನನ್ನಿಂದ ದೂರವಾದರು. ಅವರು ಎಂದಿನಂತೆ ಮೈದಾನದಲ್ಲಿ ಕ್ರಿಕೆಟ್ ಆಡುತ್ತಾ ಮಜಾ ಮಾಡುತ್ತಿದ್ದರೆ ನಾನು ಮನೆಯಲ್ಲಿ ಒಬ್ಬನೇ ಕುಳಿತಿರುತ್ತಿದ್ದೆ. ಅದೇ ಸಂದರ್ಭದಲ್ಲಿ ನನ್ನ ತಂಗಿ ಲಕ್ಷ್ಮಿಯ ಮದುವೆ ಆಯಿತು. ಅದು ಬಹುಶಃ 1980 ಇರಬಹುದು. ಲಕ್ಷ್ಮಿಯ ಮದುವೆ ಸಮಾರಂಭ ಮುಗಿದ ಕೂಡಲೇ ನನ್ನ ಕಾಲೇಜು ಜೀವನ ಶುರುವಾಯಿತು.

ನಾನು ಈ ಹಿಂದೆಯೇ ಹೇಳಿದಂತೆ ನಮ್ಮ ಏರಿಯಾದಲ್ಲಿ ಮೂರು ಕಾಲೇಜುಗಳಿದ್ದವು. ರಾಯರ ಪೇಟೆಯಲ್ಲಿ ನ್ಯೂ ಕಾಲೇಜು, ಬೀಚ್ ಬಳಿಯಲ್ಲಿ ರೆಸಿಡೆನ್ಸಿ ಕಾಲೇಜು, ಅದಕ್ಕೆ ಹತ್ತಿರವೇ ಲೈಲಾ ಕಾಲೇಜು. ಆ ಮೂರು ಕಾಲೇಜುಗಳಲ್ಲಿ ಅತ್ಯುತ್ತಮವಾದದ್ದು ಅನಿಸಿಕೊಂಡಿದ್ದ ಲೈಲಾದಲ್ಲಿ ನನಗೆ ಸೀಟು ದೊರೆಯಿತು. ಆ ಕಾಲೇಜು ಶಿಸ್ತು ಮತ್ತು ಒಳ್ಳೆಯ ವಿದ್ಯಾಭ್ಯಾಸಕ್ಕೆ ಹೆಸರುವಾಸಿಯಾಗಿತ್ತು. ಏಕೆಂದರೆ ಆ ಕಾಲೇಜಿನ ವಿದ್ಯಾರ್ಥಿಗಳೇ ಪ್ರತೀ ವರ್ಷ ಹೆಚ್ಚು ರ್‍ಯಾಂಕುಗಳನ್ನು ಪಡೆಯುತ್ತಿದ್ದರು. ಅಂತಹ ಕಾಲೇಜಿನಲ್ಲಿ ಸೀಟು ಸಿಕ್ಕಿದರೆ ಯಾರು ತಾನೆ ಬೇಡ ಎನ್ನುತ್ತಾರೆ? ಆದರೆ ನಾನು ಬೇಡ ಅಂದೆ! ಬದಲಾಗಿ ರೌಡಿಗಳ ಕಾಲೇಜು ಎಂದು ಪಾಪ್ಯುಲರ್ ಆಗಿದ್ದ ನ್ಯೂ ಕಾಲೇಜು ಸೇರುತ್ತೇನೆಂದು ಹಠ ಹಿಡಿದೆ.

ಎಲ್ಲರಂತೆ ಎಸ್ಸೆಸ್ಸೆಲ್ಸಿ ತನಕ ಶಾಲೆಗೆ ಯೂನಿಫಾರ್ಮ್ ಹಾಕಿಕೊಂಡು ಹೋಗಿದ್ದ ನನಗೆ ಕಾಲೇಜು ಮೆಟ್ಟಿಲು ಹತ್ತಿದಾಗ ಯೂನಿಫಾರ್ಮ್‌ನಿಂದ ಬಿಡುಗಡೆ ಪಡೆದಂತಾಗಿತ್ತು. ಆದ್ದರಿಂದ ನಾನು ಪ್ರತಿದಿನ ಬಣ್ಣ ಬಣ್ಣದ ಟೀ ಶರ್ಟ್ ಮತ್ತು ಜೀನ್ಸ್ ಧರಿಸಿ, ಕಣ್ಣಿಗೆ ಮೊನಾಲಿಸಾ ಕೂಲಿಂಗ್ ಗ್ಲಾಸ್ ಹಾಕಿಕೊಂಡು ಕಾಲೇಜಿಗೆ ಹೊರಡುತ್ತಿದ್ದೆ.

ಇಲ್ಲಿ ಒಂದು ವಿಷಯ ಹೇಳಲೇಬೇಕು. ಅದೇನೆಂದರೆ ನಾನು ಕಾಲೇಜನ್ನು ಸೇರಿದ್ದರೂ ಪ್ರತಿದಿನ ಬಸ್ಸಿನಲ್ಲೇ ಪ್ರಯಾಣಿಸುತ್ತಿದ್ದೆ. ನಮ್ಮ ಮನೆಯಲ್ಲಿ ಮೂರ್‍ನಾಲ್ಕು ಕಾರುಗಳು ಸುಮ್ಮನೆ ಬಿದ್ದಿದ್ದರೂ ನಾನು ಇತರೆ ವಿದ್ಯಾರ್ಥಿಗಳ ಥರ ಬಸ್ಸಿನಲ್ಲೇ ಕಾಲೇಜಿಗೆ ಹೋಗಬೇಕೆಂಬುದು ನಮ್ಮ ಮನೆಯವರ ಆಶಯವಾಗಿತ್ತು. ನನಗೂ ಅಷ್ಟೇ, ಕಾರಿನಲ್ಲಿ ಒಬ್ಬನೇ ಹೋಗುವ ಬದಲಿಗೆ ಬಸ್ಸಿನಲ್ಲಿ ಸ್ನೇಹಿತರ ಜೊತೆ ಮಾತನಾಡುತ್ತಾ, ಜೋಕ್ ಹೊಡೆಯುತ್ತಾ ಹೋಗುವುದೇ ಮಜಾ ನೀಡುತ್ತಿತ್ತು.

ನಮ್ಮ ಮನೆಯ ಹತ್ತಿರ ಹಾಲಿವುಡ್ ಎಂಬ ಹೋಟೆಲ್ಲಿತ್ತು. ಅದು ಆ ಏರಿಯಾದಲ್ಲಿ ಸಖತ್ ಪಾಪ್ಯುಲರ್ ಆಗಿತ್ತು. ಆ ಹೋಟೆಲಿನಲ್ಲಿ ಒಂದು ಪ್ರೈವೇಟ್ ರೂಮಿತ್ತು. ಆ ಹೋಟೆಲ್‌ನ ಮಾಲೀಕ ಆ ರೂಮಿನಲ್ಲಿ ಬೇರೆ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ಬಿಡುತ್ತಿರಲಿಲ್ಲ. ಆದರೆ ನಮಗೆ ಆ ರೂಮಿಗೆ ವಿಶೇಷ ಪ್ರವೇಶವಿತ್ತು. ನಮ್ಮ ಮನೆಯ ಸುತ್ತಮುತ್ತಲು ಇದ್ದ 20 ಹುಡುಗರ ಗ್ಯಾಂಗ್ ನಮ್ಮದಾಗಿತ್ತು.

ನಾವೆಲ್ಲ ಆ ಹೋಟೆಲಿನ ಪ್ರೈವೇಟ್ ರೂಮಿನಲ್ಲಿ ಕೂತು ಹರಟೆ ಹೊಡೆಯುತ್ತಿದ್ದೆವು. ಆ ರೂಮ್ ಎಷ್ಟು ಚಿಕ್ಕದಾಗಿತ್ತೆಂದರೆ ಕೆಲವರು ಟೇಬಲ್ ಮೇಲೆ ಕುಳಿತರೆ, ಇನ್ನು ಕೆಲವರು ಗೋಡೆಗೆ ಅಂಟಿಕೊಂಡು ನಿಲ್ಲುತ್ತಿದ್ದರು. ಅಲ್ಲಿ ನಾವು ಏನ್ಮಾಡುತ್ತಿದ್ದೆವು ಗೊತ್ತಾ? ಹೋಟೆಲ್‌ನ ಒಳಗಡೆ ಬಂದಾಕ್ಷಣ ಎಲ್ಲರೂ ಒಂದೊಂದು ಟೀ ಮತ್ತು ಸಮೋಸಾ ಆರ್ಡರ್ ಮಾಡುತ್ತಿದ್ದೆವು. ಅಷ್ಟನ್ನು ತಿನ್ನಲು ನಾವು ತೆಗೆದುಕೊಳ್ಳುತ್ತಿದ್ದ ಸಮಯ ಕನಿಷ್ಠ ಎರಡು ಎರಡೂವರೆ ಗಂಟೆ!

ನಾವು ಟೀ ಕುಡಿಯುತ್ತಾ, ಸಮೋಸಾ ತಿನ್ನುತ್ತಾ ಜೋಕ್ಸ್‌ಗಳನ್ನು ಹೇಳಿಕೊಂಡು ಮಜಾ ಮಾಡುತ್ತಿದ್ದೆವು. ಸಾಧಾರಣವಾಗಿ ನಾವು ಯಾವುದೇ ಸೀರಿಯಸ್ ವಿಷಯದ ಬಗ್ಗೆ ಮಾತನಾಡುತ್ತಿರಲಿಲ್ಲ. ಅದರಲ್ಲೂ ರಾಜಕೀಯದ ಬಗ್ಗೆಯಂತೂ ಯಾರಿಗೂ ಆಸಕ್ತಿ ಇರಲಿಲ್ಲ. ಸಿನಿಮಾ ನಟ-ನಟಿಯರ ಬಗ್ಗೆಯೂ ನಾವು ಅಷ್ಟೇನೂ ಮಾತನಾಡುತ್ತಿರಲಿಲ್ಲ. ಹಾಗಿದ್ದರೆ ನಾವು ಅಷ್ಟು ಗಂಟೆಗಳ ಕಾಲ ಯಾವುದರ ಬಗ್ಗೆ ಚರ್ಚಿಸಿರಬಹುದು?

ಮತ್ತಿನ್ನೇನು? ಪಿಯುಸಿ ಓದುವ ಹುಡುಗರು ತಮ್ಮ ಸುತ್ತಲಿನ ಹುಡುಗಿಯರ ಬಗ್ಗೆ ಅಲ್ಲದೆ ಇನ್ಯಾವುದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಾರೆ ಹೇಳಿ? ನಾವು ಕೂಡ ಅದನ್ನೇ ಮಾಡುತ್ತಿದ್ದೆವು. ಆ ಹುಡುಗಿ ಹೀಗೆ, ಈ ಹುಡುಗಿ ಹಾಗೆ, ಅವಳು ನನ್ನನ್ನು ನೋಡಿ ನಕ್ಕಳು, ಇವನು ಅವಳಿಗೆ ಲೈನ್ ಹೊಡೆಯಬೇಕು ಅಂದುಕೊಂಡಿದ್ದಾನೆ.... ಹೀಗೆ ಹುಡುಗಿಯರ ಬಗ್ಗೆ ತುಂಬಾ ಸೀರಿಯಸ್ ಆಗಿ ಗಂಟೆಗಟ್ಟಲೆ ಚರ್ಚಿಸುತ್ತಿದ್ದೆವು. ಹುಡುಗಿಯರ ಸ್ಟೈಲ್, ವೈಯ್ಯಾರ, ಸೌಂದರ್ಯ... ಇದೆಲ್ಲದರ ಬಗ್ಗೆ ನಮ್ಮ ಮಾತು ನಡೆಯುತ್ತಿತ್ತು. ಆದರೆ ನಾವು ಎಂದೂ ಯಾವ ಹುಡುಗಿಯನ್ನೂ ರ್‍ಯಾಗ್ ಮಾಡಿದ್ದಿಲ್ಲ. ನಾಲ್ಕೈದು ಜನ ಹುಡುಗಿಯರು ಸೇರಿ ಹೇಗೆ ಹುಡುಗರ ಬಗ್ಗೆ ಮಾತನಾಡಬಹುದೋ ಹಾಗೆ ನಾವೂ ಹುಡುಗಿಯರ ಬಗ್ಗೆ ಹರಟೆ ಹೊಡೆಯುತ್ತಿದ್ದೆವು.

ಆ ಚಿಕ್ಕ ರೂಮಿನಲ್ಲಿ ಇಪ್ಪತ್ತು ಜನ ಹುಡುಗರು ಕೂತು ಗಂಟೆಗಟ್ಟಲೆ ಮಾತನಾಡುತ್ತಿದ್ದಾಗ ಅಲ್ಲಿಯ ದೃಶ್ಯ ಹೇಗಿರುತ್ತಿತ್ತು ಗೊತ್ತಾ? ಇಡೀ ಕೊಠಡಿ ಹೊಗೆಯಿಂದ ತುಂಬಿರುತ್ತಿತ್ತು. ಯಾಕೆಂದರೆ ಅಷ್ಟೊತ್ತಿಗೆ ನಾವೆಲ್ಲಾ ಸಿಗರೇಟು ಸೇದುವುದನ್ನು ಕಲಿತಿದ್ದೆವು. ನಾವು ಸಿಗರೇಟು ಸೇದುತ್ತಿದ್ದದ್ದು ಹೊರಗಿನವರಿಗೆ ಗೊತ್ತಾಗಬಾರದು ಎಂದು ಆ ರೂಮಿನ ಕಿಟಕಿ-ಬಾಗಿಲನ್ನು ಹಾಕುತ್ತಿದ್ದೆವು. ಹೀಗಾಗಿ ನಾವೆಲ್ಲ ಬಿಟ್ಟ ಹೊಗೆ ಇಡೀ ರೂಮನ್ನೇ ಆವರಿಸಿರುತ್ತಿತ್ತು.

ಅಪರೂಪಕ್ಕೊಮ್ಮೆ ಹಾಲಿವುಡ್ ಹೋಟೆಲ್‌ನ ಮಾಲೀಕ ಈ 'ನಮ್ಮ' ರೂಮಿನೊಳಗೆ ಬಂದು ನಮ್ಮನ್ನು ಮಾತನಾಡಿಸುತ್ತಿದ್ದರು. ನನ್ನ ಗೆಳೆಯರೆಲ್ಲರೂ ನನ್ನನ್ನು 'ಅಪ್ಪಾಜಿ' ಎಂದು ಕರೆಯುತ್ತಿದ್ದರಿಂದ ಅವರೂ ನನ್ನನ್ನು 'ಅಪ್ಪಾಜಿ' ಎಂದೇ ಕರೆಯುತ್ತಿದ್ದರು. ಅವರು ತಮಿಳಿನವರಾಗಿದ್ದರಿಂದ 'ಅಪ್ಪಾಜಿ, ದಯಸೆಂಜಿ ವೇರೆಯವರುಕ್ಕು ಕೊಂಜ ಎಡಮ್ ಕುಡುಕ್ಕರಿಂಗಳಾ?' (ಅಪ್ಪಾಜಿ ದಯಮಾಡಿ ಬೇರೆಯವರಿಗೆ ಸ್ವಲ್ಪ ಸ್ಥಳಾವಕಾಶ ನೀಡುತ್ತೀರಾ?) ಎಂದು ಕೇಳಿಕೊಳ್ಳುತ್ತಿದ್ದರು. ಆಗೆಲ್ಲ ನಾನು ಅಷ್ಟೇ ನಯವಾಗಿ 'ಇನ್ನೊರುಪತ್ತ್ ನಿಮಿಷತ್ತಿಲ್ ನಾಂಗಲ್ ಪೋರೋ' (ಇನ್ನೊಂದ್ಹತ್ತು ನಿಮಿಷದಲ್ಲಿ ನಾವು ಹೋಗುತ್ತೇವೆ) ಎಂದು ಹೇಳುತ್ತಿದ್ದೆ. ಹೀಗೆ ಪ್ರತಿ ಬಾರಿಯೂ ಒಂದ್ಹತ್ತು ನಿಮಿಷ, ಒಂದ್ಹತ್ತು ನಿಮಿಷ ಎಂದು ಹೇಳುತ್ತಾ ಎರಡು ಗಂಟೆ ಕಾಲ ಕಳೆಯುತ್ತಿದ್ದೆವು.

ನಮ್ಮ ಮನೆಯ ಹತ್ತಿರದ ಸ್ನೇಹಿತರೊಂದಿಗೆ ಹಾಲಿವುಡ್ ಹೋಟೆಲ್‌ನಲ್ಲಿ ಮೊಕ್ಕಾಂ ಹೂಡಿದರೆ, ಕಾಲೇಜಿಗೆ ಹೋದಾಗ ಅದರ ಹತ್ತಿರವೇ ಇದ್ದ ಬಾಂಬೆ ಪ್ಲಾಜಾ ಎಂಬ ದೊಡ್ಡ ಹೋಟೆಲು ನಮ್ಮ ಅಡ್ಡೆ ಆಗಿತ್ತು. ಅಲ್ಲಿಯೂ ಅಷ್ಟೇ. ಒಂದು ಟೀ, ಒಂದು ಸಮೋಸಾ, ಒಂದೆರಡು ಗಂಟೆ ಹರಟೆ. ಇದು ನಮ್ಮ ನಿತ್ಯದ ದಿನಚರಿಯಾಗಿತ್ತು.

ಆ ಕಾಲದಲ್ಲಿ ನನ್ನ ಜೊತೆ ಹರಟೆ ಹೊಡೆಯುತ್ತಿದ್ದ, ಸಿಗರೇಟು ಸೇದುತ್ತಿದ್ದ ಕೆಲವು ಗೆಳೆಯರ ಹೆಸರು ನೆನಪಿದೆ. ಅದರಲ್ಲಿ ಶೇಖರ್, ಪ್ರಭಾಕರ್, ವಿಜಯ ಪ್ರಸಾದ್, ನನ್ನ ಸಹೋದರ ರಾಘು, ನಟ, ಬಾಲು, ಅಶೋಕನ್ ಅವರ ಮಗ ವಿನ್ಸೆಂಟ್ ಮತ್ತು ಮುರಳಿ ಪ್ರಮುಖರು.

ಮೊದಲೇ ಹೇಳಿದಂತೆ ನಮ್ಮ ಕಾಲೇಜು ರೌಡಿಸಂಗೆ ಕುಖ್ಯಾತಿ ಪಡೆದಿತ್ತು. ಅಲ್ಲಿ ನಡೆಯುತ್ತಿದ್ದ ಕಾಲೇಜಿನ ಚುನಾವಣೆಗಳು ರಂಗುರಂಗಾಗಿರುತ್ತಿದ್ದವು. ಚುನಾವಣೆ ಸಮಯದಲ್ಲಿ ಚಿಕ್ಕ ಪುಟ್ಟ ಗಲಾಟೆ, ಅಬ್ಬರದ ಮೆರವಣಿಗೆ ಮಾಮೂಲಿಯಾಗಿತ್ತು. ಆದರೆ ನಮ್ಮ ಕಾಲೇಜಿನ ವಿಶೇಷತೆ ಯಾವುದೆಂದರೆ, ನಮ್ಮ ಪಕ್ಕದ ಕಾಲೇಜುಗಳಲ್ಲಿ ಚುನಾವಣೆಗಳು ನಡೆದಾಗ ನಮ್ಮ ಕಾಲೇಜಿನ ಹುಡುಗರಿಗೆ ಸಖತ್ ಡಿಮ್ಯಾಂಡು ಇರುತ್ತಿತ್ತು. ಏಕೆಂದರೆ ಬೇರೆ ಕಾಲೇಜಲ್ಲೂ ನಮ್ಮವರದ್ದೇ ಕಾರುಬಾರು!

ಆದರೆ ಈ ಚುನಾವಣೆ, ಈ ಗಲಾಟೆಗಳಲ್ಲಿ ನನಗೆ ಅಷ್ಟೇನೂ ಆಸಕ್ತಿಯಿರಲಿಲ್ಲ. ಇದನ್ನೆಲ್ಲಾ ನಾನು ಆಗ ತುಂಬಾ ಆಶ್ಚರ್ಯದಿಂದ ನೋಡುತ್ತಿದ್ದೆನೇ ಹೊರತು ಅದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರಲಿಲ್ಲ.

ಅಂದಹಾಗೆ, ಹೋಟೆಲ್‌ಗಳಲ್ಲಿ ಗಂಟೆಗಟ್ಟಲೆ ಹರಟೆ ಹೊಡೆಯಲು ನಮಗೆ ಎಲ್ಲಿಂದ ಹಣ ಸಿಗುತ್ತಿತ್ತು ಅಂತ ಹೇಳುವುದನ್ನು ಮರೆತೆ. ನಾನು ಕಾಲೇಜಿಗೆ ಬಸ್ಸಿನಲ್ಲೇ ಹೋಗುತ್ತಿದ್ದೆ ಅಂದೆನಲ್ಲ? ಹಾಗೆ ಬಸ್ಸಿನಲ್ಲಿ ಹೋಗುತ್ತಿದ್ದಾಗ ಕೆಲವೊಮ್ಮೆ ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದೆ. ಹಾಗೆ ಟಿಕೆಟ್‌ಲೆಸ್ ಟ್ರಾವೆಲ್ಲಿಂಗ್ ಮಾಡಿ ಉಳಿಸಿದ ಹಣದಲ್ಲಿ ಸಿಗರೇಟು, ಟೀ, ಸಮೋಸ ಖರೀದಿಸುತ್ತಿದ್ದೆ!

ಹೀಗೆ ನನ್ನ ಕಾಲೇಜು ಜೀವನ ಪ್ರಾರಂಭವಾಯಿತು. ಆನಂತರದ ದಿನಗಳು ವರ್ಣರಂಜಿತವಾಗಿದ್ದವು....

(ಮುಂದುವರೆಯುವುದು...)

ಶಾಟ್ ಕಟ್



ಮಲ್ಲಿಗೆಗೇಕೆ ಟ್ಯುಲಿಪ್!

ಹಾಲೆಂಡ್‌ನ ಟ್ಯುಲಿಪ್ ಹೂಗಳು ಗೊತ್ತಲ್ಲ? 'ಅನ್ನಿಯನ್' ಚಿತ್ರದಲ್ಲಿ ಟ್ಯುಲಿಪ್ ರಾಶಿಗಳ ನಡುವೆ ಶೂಟಿಂಗ್ ಮಾಡಿದ್ದರಲ್ಲ?

ನಮ್ಮ ಮಲ್ಲಿಗೆಗೂ ಆ ಟ್ಯುಲಿಪ್‌ಗೂ ಅಜಗಜಾಂತರ. 'ಮಾತಾಡ್ ಮಾತಾಡ್ ಮಲ್ಲಿಗೆ' ಎಂದು ಬಳ್ಳಾರಿಯ ಮಲ್ಲಿಗೆ ತೋಟವನ್ನು ನಾಶ ಮಾಡಿ ಬಂದ ನಾಗ್ತಿ, ಹಾಲೆಂಡಿನಲ್ಲಿ ಟುಲಿಪ್‌ಗಳ ಮಧ್ಯೆ ಶೂಟ್ ಮಾಡುವ ಯೋಜನೆಗೆ ತಡೆ ಬಿದ್ದಿದ್ದಕ್ಕೆ, ಬೇಜಾರಾಗಿದ್ದಾರಂತೆ. ಅವರ 'ಮಲ್ಲಿಗೆ' ಸುಹಾಸಿನಿಯ ಅಂಕಲ್ ಚಾರುಹಾಸನ್‌ಗೆ ಹುಷಾರಿಲ್ಲದ್ದಕ್ಕೆ, ಹಾಲೆಂಡ್ ಟೂರ್ ಕ್ಯಾನ್ಸಲ್ ಆಗಿದೆ. ಸುಹಾಸಿನಿ ಎಂಬ ಅಂದಕಾಲತ್ತಿಲ್ ಅರಗಿಣಿಯನ್ನು ಕನ್ನಡಿಗರೇ ಮರೆತಿರುವಾಗ, ಈ ನಾಗ್ತಿ ಮಲ್ಲಿಗೆಯನ್ನು 'ಮಾತಾಡ್ ಮಾತಾಡ್' ಎಂದು ಗಂಟುಬೀಳುವುದೆ?

ಸುಹಾಸಿನಿ ನೆನೆದ ಗಾಂಧಿನಗರ ಹೇಳುತ್ತಿದೆ: 'ಮಾತಾಡ್ ಮಾತಾಡ್ ಮುದಿ ಮಲ್ಲಿಗೆ' ಎಂದು.

ರೀಮಿಕ್ಸ್ ಡೈರೆಕ್ಟರ್‌ಗಳ ಕನ್ನಡ ಸೇವೆ!

ಹೌದು, ಇದು ಸತ್ಯ. ಕನ್ನಡದ ರೀಮಿಕ್ಸ್ ಡೈರೆಕ್ಟರುಗಳಿಗೆ ಚಿತ್ರರಂಗ ಪ್ರೇಕ್ಷಕರು ಋಣಿಯಾಗಿರಲೇಬೇಕು.

ರೀಮೇಕ್ ಚಿತ್ರಗಳ ಹಾವಳಿ ಕಡಿಮೆ ಮಾಡುವುದರಲ್ಲಿ ಈ ರೀಮಿಕ್ಸ್ ಡೈರೆಕ್ಟರುಗಳ ಪಾತ್ರ ದೊಡ್ಡದು. ಐದಾರು ಪರಭಾಷಾ ಸಿನಿಮಾಗಳಿಂದ ಕದ್ದು ಕದ್ದು ಒಂದು ಕನ್ನಡ ಸಿನಿಮಾ ತಯಾರಿಸುವ ಇವರಿಂದಾಗುವ ಹಾನಿ ಎಂದರೆ ಒಂದು ಕಚಡಾ ಸಿನಿಮಾ ತಯ್ಯಾರಿಸಿದ್ದು... ಆದರೆ ಇವರಿಂದಾಗುತ್ತಿರುವ ಲಾಭವೆಂದರೆ ಕನಿಷ್ಠ 5 ಅನ್ಯಭಾಷಾ ಚಿತ್ರಗಳು ರೀಮೇಕ್ ಆಗುವುದು ತಪ್ಪುತ್ತಿದೆ. ಏಕೆಂದರೆ ಇವರಾಗಲೇ ಕದ್ದಿರುವ ಸೀನ್‌ಗಳ ಚಿತ್ರಗಳನ್ನು ರಿಮೇಕ್‌ವೀರರು ರೀಮೇಕ್ ಮಾಡಲಾರರು.

ಪ್ರೇಕ್ಷಕರ ಹಿತದೃಷ್ಟಿಯಿಂದ ಈ ರೀಮಿಕ್ಸ್ ವೀರರ ಸಂತತಿ ಬೆಳೆಯಲಿ ಎನ್ನೋಣವೇ?

ಯುದ್ಧದ ಆರಂಭ ಸುಲಭ; ಆದರೆ ಮುಕ್ತಾಯ ಕಡುಕಷ್ಟ -ಸಾಲ್ಲಸ್ಟ್



ಓಣಮೋ ಬಾಲೆಯ ರಹಸ್ಯ

'ಕಾನೂರು ಹೆಗ್ಗಡತಿ' ನಂತರ ಐದು ವರ್ಷ ಸುಮ್ಮನಿದ್ದ ಕಾರ್ನಾಡ್ ಈಗ ಒಮ್ಮೆಗೆ ದೊಡ್ಡ ಸುದ್ದಿಯೊಂದಿಗೆ ಬಣ್ಣದ ಲೋಕಕ್ಕೆ ಮರಳಿದ್ದಾರೆ.

ದೇವನೂರು ಮಹಾದೇವ ಅವರ 'ಕುಸುಮಬಾಲೆ', ಪೂರ್ಣಚಂದ್ರ ತೇಜಸ್ವಿಯವರ 'ಚಿದಂಬರ ರಹಸ್ಯ' ಮತ್ತು ಶಾಂತಿನಾಥ ದೇಸಾಯಿ ಅವರ 'ಓಣಮೋ' ಈ ಮೂರು ಕೃತಿಗಳನ್ನು ಕಾರ್ನಾಡ್ ದೃಶ್ಯಮಾಧ್ಯಮಕ್ಕೆ ರೂಪಾಂತರಿಸಿದ್ದಾರೆ. ಸದ್ಯದಲ್ಲಿಯೇ ಇವುಗಳು ದೂರದರ್ಶನದ ರಾಷ್ಟ್ರೀಯ ಜಾಲದಲ್ಲಿ ಪ್ರಸಾರವಾಗಲಿವೆ. ಇದರ ಬಹುತೇಕ ಕೆಲಸವನ್ನು ಕಾರ್ನಾಡ್ ಸದ್ದಿಲ್ಲದೆ ಮುಗಿಸಿಬಿಟ್ಟಿದ್ದಾರೆ.

ಐದು ವರ್ಷಕ್ಕೊಮ್ಮೆ ಏಕ್‌ದಂ ಸಕ್ರಿಯರಾಗುವ ಗಿರೀಶ್ ಕಾರ್ನಾಡ್ ಮತ್ತೊಮ್ಮೆ ಇಷ್ಟೊಂದು ಸಕ್ರಿಯವಾಗಿರುವುದು ಸಂತೋಷದ ವಿಷಯ. ಆದರೆ ನೂರಾರು ಚಾನೆಲ್‌ಗಳು ಪ್ರಸಾರವಾಗುತ್ತಿರುವ ಇಂದಿನ ಸ್ಪರ್ಧಾತ್ಮಕ ಕಾಲದಲ್ಲಿ ದೂರದರ್ಶನದ ಈ ಟೆಲಿಫಿಲ್ಮ್‌ಗಳು ಎಷ್ಟು ಜನರಿಗೆ ತಲುಪುತ್ತವೆ ಎಂದು ಹೇಳುವುದು ಕಷ್ಟ.

ವಾಸ್ತವವಾಗಿ ಈ ಮೂರು ಕಥೆಗಳು ಸಿನಿಮಾ ಮಾಡಲು ಬೇಕಾದಷ್ಟು ದೊಡ್ಡ ಕ್ಯಾನ್ವಾಸ್ ಹೊಂದಿವೆ. ಇವುಗಳಲ್ಲಿ ಯಾವುದಾದರೂ ಒಂದನ್ನು ಕಾರ್ನಾಡ್ ಸಿನಿಮಾ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಇಂತಹ ರಿಸ್ಕ್‌ನ್ನು ಕಾರ್ನಾಡ್ ಯಾವತ್ತೂ ತೆಗೆದುಕೊಂಡಿಲ್ಲ ಎಂಬುದು ಬೇರೆ ವಿಷಯ.



'ಮಲ್ಲಿಗೆ' ಹಾವು

ಇದೊಂದು ಸಣ್ಣ ಘಟನೆ.

'ಮಾತಾಡ್ ಮಾತಾಡ್ ಮಲ್ಲಿಗೆ' ಚಿತ್ರದ ಮುಹೂರ್ತದ ಮೊದಲು ಸೆಟ್‌ಗೆ ಕರೆಯದೆ ಬಂದ ಅತಿಥಿಯನ್ನು ಸೆಟ್ ಹುಡುಗರು ಕೊಂದು ಹಾಕಿದರಂತೆ.

ಇದು ಹಗರಿಬೊಮ್ಮನಹಳ್ಳಿ ಸಮೀಪದ ಮಲ್ಲಿಗೆ ತೋಟದಲ್ಲಿ ನಡೆದದ್ದು. ಸೆಟ್ ಹುಡುಗರು ಕೊಂದದ್ದು ಬೇರೆ ಯಾರನ್ನೂ ಅಲ್ಲ; ಆರಡಿ ಉದ್ದದ ಹಾವನ್ನು.

ಅಂದು ವಿಷ್ಣುವರ್ಧನ್ ಅವರನ್ನು ನೋಡಲು ಸಾವಿರಾರು ಜನ ಹಳ್ಳಿಯ ರೈತರು ಬಂದಂತೆ, ಬಹುಶಃ ಈ ಹಾವೂ ಬಂದಿತ್ತೋ ಏನೋ? 'ಹಾವಿನ ದ್ವೇಷ ಹನ್ನೆರಡು ವರ್ಷ' ಎಂದು ಆರ್ಭಟಿಸಿದ್ದ ನಾಯಕನನ್ನು ನೋಡಲು ಬಂದ ನಾಗರಾಜನ ಸ್ಥಿತಿ ಹೀಗಾಗಬಾರದಿತ್ತು. ಆದರೆ ಅಲ್ಲಿ ರಾಜ್ಯದ ಗೃಹಮಂತ್ರಿ ಎಂ.ಪಿ. ಪ್ರಕಾಶ್ ಕೂಡಾ ಆ ಸಮಾರಂಭದಲ್ಲಿ ಉಪಸ್ಥಿತರಾಗಬೇಕಾಗಿದ್ದರಿಂದ ಚಿತ್ರ ತಂಡದವರು ಹಾವಿಗೆ 'ಗೇಟ್‌ಪಾಸ್' ನೀಡಿದರು. ಅಲ್ಲಿ ಪ್ರಾಣಿದಯಾ ಸಂಘದವರ್‍ಯಾರೂ ಇಲ್ಲದ್ದರಿಂದ ಸಮಾರಂಭ ಯಾವುದೇ ಅಡೆ-ತಡೆಯಿಲ್ಲದೆ ನಡೆಯಿತು.



'ಸಂತೋಷ' ಕಹಿ ಸೈನೈಡೇ ಸಿಹಿ

'ಸಂತೋಷ' ಎಂಬ ಸಿನಿಮಾ ತೆಗೆದು 'ಸೈನೈಡ್' ತೆಗೆದುಕೊಳ್ಳುವಂತಾ ಪರಿಸ್ಥಿತಿ ನಿರ್ದೇಶಕ ರಮೇಶ್‌ಗೆ ಒದಗಿತ್ತು.

ಆದರೆ ಈ ವರ್ಷ 'ಸೈನೈಡ್' ಎಂಬ ಚಿತ್ರ ತೆಗೆದು ಅತ್ಯಂತ ಸಂತೋಷದಲ್ಲಿದ್ದಾರೆ ನಿರ್ದೇಶಕ ರಮೇಶ್.

'ಸೈನೈಡ್' ಚಿತ್ರ ಹಲವಾರು ಅಲಿಖಿತ ಪಾಠಗಳನ್ನು ಕಲಿಸಿದೆ.

ಮೊದಲನೆಯದು, ಕನ್ನಡದಲ್ಲಿ ಕಥೆಗಳಿಲ್ಲ ಎಂಬವರೆಲ್ಲ ಮುಟ್ಟಿ ನೋಡಿಕೊಳ್ಳುವಂತಾಗಿದೆ. ಎರಡನೆಯದು, ಕನ್ನಡ ಚಿತ್ರೋದ್ಯಮದಲ್ಲಿ ಒಗ್ಗಟ್ಟು ಇಲ್ಲ ಎಂಬುದು ಸುಳ್ಳಾಗಿದೆ. ಏಕೆಂದರೆ ಈ ಚಿತ್ರವನ್ನು ಎಲ್ಲಾ ವಲಯದವರು, ಚಿತ್ರರಂಗದ ಗಣ್ಯ ವ್ಯಕ್ತಿಗಳು ಕೊಂಡಾಡಿದ್ದಾರೆ. ಕನ್ನಡದಲ್ಲಿ ಎಂತಹ ಪ್ರತಿಭಾವಂತರಿದ್ದಾರೆ ಎಂಬುದಕ್ಕೆ ಈ ಚಿತ್ರದಲ್ಲಿನ ತಾರಾ, ಅವಿನಾಶ್, ರಂಗಾಯಣ ರಘು ನಿರ್ವಹಿಸಿದ ಪಾತ್ರಗಳೇ ಸಾಕ್ಷಿ.

ಸೋಮ, ಕೊರಂಗು, ಜೈರಾಜ್ ಮೊದಲಾದ ಲೋಕಲ್ ರೌಡಿಗಳ ಚಿತ್ರವನ್ನು ಹಸಿಹಸಿಯಾಗಿ ತೆಗೆಯುವ ನಿರ್ದೇಶಕರು, ಭಯೋತ್ಪಾದಕರ ಕತೆಯ ಈ ಚಿತ್ರವನ್ನು ಒಮ್ಮೆ ನೋಡಿದರೆ ಒಳ್ಳೆಯದು.

'ಮಾಸ್ತಿ'ಗೆ ಮುಕ್ತಿ!





ಕೊನೆಗೂ ರಾಮು 'ಮಾಸ್ತಿ'ಗೆ ಮುಕ್ತಿ ನೀಡಿದ್ದಾರೆ. ಉಪೇಂದ್ರ, ಶಿವಮಣಿ ಎಂಬ ತಲೆ ಕೆಟ್ಟವರನ್ನು ಕಟ್ಟಿಕೊಂಡು 'ಮಾಸ್ತಿ' ಹೆಸರಲ್ಲಿ ಸಿನಿಮಾ ಮಾಡಲು ಹೊರಟ್ಟಿದ್ದರು ರಾಮು. ಈ ಕುರಿತು 'ಲಂಕೇಶ್' ಮೊದಲೇ ಬರೆದಿದ್ದರೂ ಚಿತ್ರದ ಸ್ಟಿಲ್ ಬಂದಾದ ಮೇಲೆ ಎಚ್ಚೆತ್ತುಗೊಂಡಿದ್ದಾರೆ ಕನ್ನಡದ ಓರಾಟಗಾರರು! ಆದರೆ ಈ ಮಧ್ಯೆ ಕರ್ನಾಟಕ ರಕ್ಷಣಾ ವೇದಿಯ ಕಾರ್ಯಕರ್ತರು, ಮಾಸ್ತಿ ಮುಹೂರ್ತ ನಡೆಯುತ್ತಿದ್ದ ಸಮಾರಂಭಕ್ಕೆ ನುಗ್ಗಿ, ಗಲಾಟೆ ಮಾಡಿದ್ದರಿಂದ ಕ್ಲಾಪ್ ಮಾಡಲು ಬಂದಿದ್ದ ಶಿವರಾಜ್‌ಕುಮಾರ್ ಮತ್ತು ಗಂಗರಾಜು ರಾಮುಗೆ ಬುದ್ಧಿ ಹೇಳಿದ್ದಾರೆ. ಈಗ ರಾಮು ಮಾಸ್ತಿ ಹೆಸರನ್ನು ಬದಲಾಯಿಸಲು ಒಪ್ಪಿದ್ದಾರೆ.

ಶಿವು-ರಕ್ಷಿತಾರ 'ರಮ್ಯಜೋಡಿ'

ರಮ್ಯ ಮತ್ತು ರಕ್ಷಿತಾ ನಡುವಿನ ಐತಿಹಾಸಿಕ ಸ್ಪರ್ಧೆಗೆ ಇನ್ನೊಂದು ಆಯಾಮ ದೊರೆತಿದೆ.

ಶಿವರಾಜ್‌ಕುಮಾರ್ ಜೊತೆ ರಮ್ಯ ನಾಯಕಿಯಾಗಿ ಆಯ್ಕೆಯಾದ ಸುದ್ದಿಯ ಬೆನ್ನಲ್ಲೇ ಕ್ರೇಜಿ ಕ್ವೀನ್ ರಕ್ಷಿತಾ ಕೂಡಾ ಶಿವಣ್ಣನಿಗೆ ನಾಯಕಿಯಾದ ಸುದ್ದಿ ಬಂದಿದೆ.



ಆಗಸ್ಟ್ 4 ರಂದು ಸೆಟ್ಟೇರಲಿರುವ ಶಿವಣ್ಣ-ರಕ್ಷಿತಾ ಜೋಡಿಯ ಚಿತ್ರವನ್ನು ಎಸ್. ನಾರಾಯಣ್ ನಿರ್ದೇಶಿಸಲಿದ್ದಾರೆ. ಅಂದಹಾಗೆ ಎಸ್. ನಾರಾಯಣ್ ಅವರೇ ಈ ಚಿತ್ರದ ನಿರ್ಮಾಪಕರು ಕೂಡಾ.



ಈ ಮಧ್ಯೆ ರಮ್ಯ ತಮಿಳು ಚಿತ್ರವೊಂದರಲ್ಲಿ ಶ್ಯಾಮ್ ಜೊತೆ ನಟಿಸಲು ಒಪ್ಪಿಕೊಂಡಿರುವುದರಿಂದ ಶಿವಣ್ಣ ಚಿತ್ರಕ್ಕೆ ಕಾಲ್‌ಶೀಟ್ ಹೊಂದಿಸಲು ಕಷ್ಟ ಪಡುತ್ತಿದ್ದಾಳೆ.

ಪುನೀತ್ ಜೊತೆ ವೃತ್ತಿ ಜೀವನ ಆರಂಭಿಸಿದ ಇವರಿಬ್ಬರಿಗೂ ಶಿವಣ್ಣ ಜೊತೆ ನಟಿಸುವುದು ಒಂದು ರೀತಿಯಲ್ಲಿ ಅವರ ವೃತ್ತಿ ಜೀವನಕ್ಕೆ ಬ್ರೇಕ್ ಸಿಕ್ಕಿದಂತೆ.



ರಕ್ಷಿತಾ 'ತನನಂ ತನನಂ...'

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676427, Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44